ಬಾ ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ

ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ

ವೇಮಗಲ್ ಸೋಮಶೇಖರ್



ಬಾ–ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ

ವೇಮಗಲ್ ಸೋಮಶೇಖರ್

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ
ಲೇಖಕರು : ವೇಮಗಲ್ ಸೋಮಶೇಖರ್
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಪುಟಗಳು	:	XVI + 78
ಪ್ರತಿಗಳು	:	500
ಮೊದಲ ಮುದ್ರಣ	:	1997
ದ್ವಿತೀಯ ಮುದ್ರಣ	:	2014
ಪರಿಷ್ಕೃತ ತೃತೀಯ ಮುದ್ರಣ	:	2020
ಬೆಲೆ	:	ರು. 66/-
©	:	ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಒಳ ಪುಟ ಕಾಗದ	:	58 ಜಿ.ಎಸ್.ಎಂ. ಮ್ಯಾಫ್‌ಲಿತೋ
ಮುಖ ಪುಟ	:	300 ಜಿ.ಎಸ್.ಎಂ. ಆರ್ಟ್ ಕಾರ್ಡ್
ISBN No	:	978-81-942226-5-1
ಸಹಕಾರ	:	ರಾಷ್ಟ್ರೀಯ ಸೇವಾ ಯೋಜನೆ
ವಿನ್ಯಾಸ & ಮುದ್ರಣ	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ ಮಾಧವನಗರ, ಬೆಂಗಳೂರು–560001 ದೂರವಾಣಿ : 080 40927049




ಅರ್ಪಣೆ

ಪ್ರಕರ ಗಾಂಧೀವಾದಿ, ಕಾನೂನು ತಜ್ಞ, ಸಾಹಿತಿ

ಶ್ರೀ ನಿಟ್ಟೂರು ಶ್ರೀನಿವಾಸರಾವ್

ಅವರಿಗೆ ಗೌರವಪೂರ್ವಕವಾಗಿ



"ಜೀವನವೆಂಬುದೊಂದು ಆಕಾಂಕ್ಷೆ, ಸಿದ್ಧಿ ಮತ್ತು ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯ ದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ."

– ಮಹಾತ್ಮ ಗಾಂಧಿ

ನಿವ್ಮೊಡನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ "ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ" ಕೃತಿಯನ್ನು ಪ್ರಕಟಿಸಲು ನನಗೆ ಅತ್ಯಂತ ಸಂತೋಷವಾಗುತ್ತದೆ.

ಇತಿಹಾಸ ಬರವಣಿಗೆಕಾರನು ಮಾಹಿತಿ ಸಂಗ್ರಹಣೆ, ಪರಾಮರ್ಶೆ, ದಾಖಲೆಯ ಅಧಿಕೃತತೆ, ವಾಸ್ತವಿಕತೆಯೊಂದಿಗೆ ಅನುಸಂಧಾನ ಮಾಡಿಕೊಂಡು ಬರೆದಿರುವಂತ ಅಮೂಲ್ಯ ಕೃತಿಯಿದಾಗಿದೆ. ವೇಮಗಲ್ ಸೋಮಶೇಖರ್ ಅವರು, ಮಹಾತ್ಮಾಜಿ ಅವರು ನಂದಿ ಗಿರಿಧಾಮದಲ್ಲಿ ವಾಸ್ತವ್ಯವಿದ್ದಾಗ, ನಡೆದಂತ ಕಾರ್ಯಚಟುವಟಿಕೆಗಳು ಮತ್ತು ಕರ್ನಾಟಕದಲ್ಲಿ ಗಾಂಧಿ ಅವರ ಪ್ರಭಾವಕ್ಕೆ ಒಳಗಾಗಿ, ಅವರನ್ನು ಸಂಪರ್ಕಿಸಿದ ಎಲ್ಲಾ ವ್ಯಕ್ತಿಗಳ ಚಿತ್ರಣವನ್ನು ಇಲ್ಲಿ ದಾಖಲಿಸಿದ್ದಾರೆ. 1927ರಿಂದ 1936ರವರೆಗೆ ನಡೆದಂಥ ಪ್ರಮುಖ ಘಟನೆಗಳು ಮತ್ತು ಮೈಸೂರು ಸಂಸ್ಥಾನಕ್ಕೆ ಸೇರಿದ್ದ ನಂದಿ ಗಿರಿಧಾಮದಲ್ಲಿ ಗಾಂಧಿ ಅವರ ವಿಶ್ರಾಂತ ದಿನಗಳಲ್ಲಿ, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ದಿವಾನರು ಸ್ಪಂದಿಸಿದ ರೀತಿಯನ್ನು ಈ ಕೃತಿ ಅನಾವರಣ ಗೊಳಿಸುತ್ತದೆ. ಕರ್ನಾಟಕದಲ್ಲಿ ಸ್ವಾತಂತ್ರ ಪೂರ್ವದ ಹೋರಾಟಗಳಲ್ಲಿದ್ದ ಪ್ರಮುಖ ನಾಯಕರು ಮತ್ತು ಅವರೊಡನೆ, ಅವರ ಒಡನಾಟದ ಅನೇಕ ಘಟನೆಗಳು ಇಲ್ಲಿ ಸಹಜವಾಗಿ ದಾಖಲಾಗಿವೆ. ಕಥೆಯ ರೂಪದಲ್ಲಿ ಮತ್ತು ಜೀವನ ಚರಿತ್ರೆಯಂತೆ ನಿರಾಳವಾಗಿ, ಆಸಕ್ತಿದಾಯಕವಾಗಿ ಓದಿಸಿಕೊಂಡೋಗುವ ಕೃತಿ ರಚಿಸಿದ ಡಾ. ವೇಮಗಲ್ ಸೋಮಶೇಖರ್ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ವೇಮಗಲ್ ಅವರಿಗೂ ಗಾಂಧಿ ಭವನಕ್ಕೂ ಐದು ವರ್ಷಗಳ ಅವಿನಾಭಾವ ಸಂಬಂಧ. ಗಾಂಧಿ ಅವರ ನಿಜ ಅನುಯಾಯಿಗಳಾಗಿರುವ ವೇಮಗಲ್ ಅವರು, ಸಂಶೋಧನಾತ್ಮಕ ಇಂಥಹ ಅನೇಕ ಕೃತಿಗಳನ್ನು ಮತ್ತು ಲೇಖನಗಳನ್ನು ರಚಿಸಿದ್ದಾರೆ. ಗಾಂಧೀಜಿ ಅವರ ದೈನಂದಿನ ಕಾರ್ಯಚಟುವಟಿಕೆಗಳ ಮೂಲಕ ಅನುಷ್ಠಾನಗೊಳಿಸಿದ ವಿಧಾನವನ್ನು, ಸರಳ, ಸ್ಪಷ್ಟ ನುಡಿಗಳಲ್ಲಿ ವೇಮಗಲ್ ಅವರು ಬರೆದಿದ್ದಾರೆ. ಹಾಗೆಯೇ, ಬೆಂಗಳೂರಿನಲ್ಲಿ ಗಾಂಧಿ, ಮೈಸೂರಿನಲ್ಲಿ ಗಾಂಧಿ, ಕರ್ನಾಟಕದಲ್ಲಿ ಗಾಂಧೀ ಹೀಗೆ ಅನೇಕ ಕೃತಿಗಳ ಮೂಲಕ ಗಾಂಧಿ ಮತ್ತು ಕರ್ನಾಟಕದ ಬಾಂಧವ್ಯವನ್ನು ನಮ್ಮ ಅರಿವಿಗೆ ಒದಗಿಸಿಕೊಟ್ಟಿದ್ದಾರೆ. ಅವರಿಗೆ ಇಂಥಹ ಅಧಿಕೃತ ಚರಿತ್ರೆ ಬರೆಯುವ ಶಕ್ತಿ, ಸಾಮರ್ಥ್ಯ ಇಮ್ಮಡಿಗೊಳ್ಳಲಿ. ಇತಿಹಾಸದಲ್ಲಿ ಮರೆತು ಹೋಗಿರುವ ಘಟನೆಗಳು, ವ್ಯಕ್ತಿತ್ವಗಳು, ವರ್ತಮಾನ ಮತ್ತು ಮುಂದಿನ ಪೀಳಿಗೆಗೆ ತಲುಪಿಸುವ ಕೃತಿಗಳು ಅವರಿಂದ ರಚಿತವಾಗಲಿ ಎಂದು ಶುಭ ಹಾರೈಸುತ್ತೇನೆ. ಹಾಗೆಯೇ ಪ್ರಖ್ಯಾತ ಇತಿಹಾಸಕಾರರಾದ ಡಾ. ಸೂರ್ಯನಾಥ ಕಾಮತ್ ಅವರ ಆಶಯನುಡಿ ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಗಾಂಧಿ ಭವನದ ಘನತೆಯನ್ನು ಹೆಚ್ಚಿಸಿದ ಮೂರು ದಶಕಗಳವರೆಗೆ ಅಧ್ಯಕ್ಷರಾಗಿದ್ದ ಡಾ. ಹೊ. ಶ್ರೀನಿವಾಸಯ್ಯ ಅವರು ಮತ್ತು ಪ್ರೊ. ಶಿವರಾಜು ಅವರು ಈ ಪುಸ್ತಕದ ಮಹತ್ವವನ್ನು ತಿಳಿದು, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ದ್ವಿತೀಯ ಮುದ್ರಣವಾಗಿ ಪ್ರಕಟಣೆ ಮಾಡಿರುವುದು ಸಹ ಸಕಾಲಿಕ ಮತ್ತು ಹೆಮ್ಮೆಯ ಕಾರ್ಯವಾಗಿದೆ.

ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಸಿದ್ಧಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ಡಾ. ವೂಡೇ ಪಿ. ಕೃಷ್ಣ

ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ.

ಈ ಕೃತಿಯು ಇದೀಗ ಪರಿಷ್ಕೃತಗೊಂಡು ಹೊಸರೂಪದಲ್ಲಿ ಓದುಗರ ಆಸಕ್ತಿ ಹೆಚ್ಚಿಸುವಂತಾಗಿದೆ. ಗಾಂಧೀಜಿ ಅವರು ವಿಶ್ವಕ್ಕೆ ನಿತ್ಯನೂತನ ಕಲ್ಪವೃಕ್ಷ. ವಿಶ್ವವಂದಿತರಾದ ಮಹಾತ್ಮರು ಕರ್ನಾಟಕಕ್ಕೆ ನಿಕಟವರ್ತಿ ಆಗಿದ್ದರು. ಈ ನೆಲದಲ್ಲಿ ಓಡಾಡಿದ್ದರು, ಹಲವು ತಾಣಗಳಲ್ಲಿ ತಂಗಿದ್ದರು, ಎಂದು ಕೇಳಿದಾಕ್ಷಣ ಪುಳಕಿತರಾಗುತ್ತೇವೆ. ಇಲ್ಲಿ ಎಲ್ಲಿದ್ದರೂ? ಹೇಗಿದ್ದರು? ಅವರನ್ನು ನೋಡಿಕೊಂಡವರ್‍ಯಾರು? ಅವರ ಒಡನಾಡಿಗಳು ಯಾರಿದ್ದರು? ಎಂಬ ಪ್ರಶ್ನೆಗಳು ನಮ್ಮಲ್ಲಿ ಒಡಮೂಡುತ್ತವೆ. ಇದರ ಮುಂದುವರಿದ ಭಾಗವಾಗಿ ದಾಖಲೆ, ಮಾಹಿತಿಗಳ ಹುಡುಕಾಟಕ್ಕೆ ತೊಡಗುತ್ತೇವೆ. ಹಾಗೆ ನಮ್ಮಲ್ಲಿ ಮೂಡುವ ಪ್ರಶ್ನೆಗಳಿಗೆ, ಹುಡುಕಾಟಕ್ಕೆ, ಅಧ್ಯಯನಕ್ಕೆ, ಕ್ರೋಢೀಕರಣಕ್ಕೆ ಶ್ರೀ ವೇಮಗಲ್ ಸೋಮಶೇಖರ್ ಅವರು ಈ ಕೃತಿ ಮೂಲಕ ವಿರಾಮ ಕೊಡಿಸಿದ್ದಾರೆ. ಗಾಂಧಿ ಅವರನ್ನು ಕುರಿತು ವೇಮಗಲ್ ಅವರು ಬರೆದ ಅನೇಕ ಕೃತಿಗಳಲ್ಲಿ, ಈ ಕೃತಿಗೆ ವಿಶಿಷ್ಠ ಸ್ಥಾನವಿದೆ. ಏಕೆಂದರೆ ಇದು ಅವರ ಚೊಚ್ಚಲ ಕೃತಿಯಾಗಿದೆ. ಹಾಗೂ ಇವರು ಈ ಕೃತಿಯನ್ನು ಬರೆಯುವ ಪೂರ್ವದಲ್ಲಿ, ಗಾಂಧಿ ಅನುಯಾಯಿ ಸ್ವಾತಂತ್ರ್ಯ ಹೋರಾಟಗಾರ ನಿಟ್ಟೂರು ಶ್ರೀನಿವಾಸರಾಯರ ಪ್ರೇರಣೆಯಿಂದ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ, ವಿದ್ಯಾಂಸರ ಮುಂದೆ, 1996ರಲ್ಲಿ ಅವರ ಸಂಶೋಧನಾ ವಿಚಾರಗಳನ್ನು ಮಂಡಿಸಿದ್ದರು. ಇತಿಹಾಸ ಬರಹಗಾರರಾದ, ಲಕ್ಷಣ ತೆಲಗಾವಿ, ಡಾ. ಸೂರ್ಯನಾಥ ಕಾಮತ್, ಅವರಿಂದ ಮೆಚ್ಚುಗೆ ಪಡೆದು, ಡಾ. ಎಚ್. ಎಸ್. ದೊರೆಸ್ವಾಮಿ ಅವರಿಂದ ಇದರ ಪ್ರಥಮ ಆವೃತ್ತಿ 1997ರಲ್ಲಿ ಪ್ರಕಟವಾದ ಹೆಗ್ಗಳಿಕೆ ಈ ಕೃತಿಗಿದೆ. ಹಿಂದಿನ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಮತ್ತು ಕಾರ್ಯದರ್ಶಿಗಳಾದ ಪ್ರೊ. ಜಿ.ಬಿ. ಶಿವರಾಜು ಅವರು ಕೃತಿಯ ಮಹತ್ವವನ್ನು ಪರಿಗಣಿಸಿ ದ್ವಿತೀಯ ಮುದ್ರಣವನ್ನು 2014ರಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಪ್ರಕಟ

ಮಾಡಿರುತ್ತಾರೆ. ಬಹು ಬೇಡಿಕೆಯ ಕೃತಿ ಇದಾಗಿರುವುದರಿಂದ ಬಾ–ಬಾಪು 150ರ ವರ್ಷಾಚರಣೆಯ ಸಂದರ್ಭದಲ್ಲಿ ಪರಿಷ್ಕೃತ ಆವೃತ್ತಿಯನ್ನು ಹೊರತರುವುದು ಔಚಿತ್ಯಪೂರ್ಣವೆಂದು ಪರಿಗಣಿಸಿದ್ದರಿಂದ, ಮೂರನೇ ಆವೃತ್ತಿ ನಿಮ್ಮ ಕೈಯಲ್ಲಿದೆ. ಗಾಂಧೀಜಿ ಅವರ ಕರ್ನಾಟಕದ ಭೇಟಿಯ ಸಂದರ್ಭದೊಳಗಿನ, ನಂದಿ ಗಿರಿಧಾಮದಲ್ಲಿನ ವಿಶ್ರಾಂತಿಯ ಒಟ್ಟು 68 ದಿನಗಳಲ್ಲಿ ಗಾಂಧೀಜಿ ಅವರ ದಿನಚರಿಯನ್ನು ಕಣ್ಣಿಗೆ ಕಟ್ಟುವಂತೆ ಸೋಮಶೇಖರ್ ಅವರು ಆತ್ಮೀಯತೆಯಿಂದ ಬರೆದಿದ್ದಾರೆ. ದೈಹಿಕ, ಮಾನಸಿಕ ವಿಶ್ರಾಂತಿಗೆಂದು ಬಂದಿದ್ದ, ಗಾಂಧಿ ಅವರಿಗೆ ಪ್ರಜಾ ಜನರು ದಣಿವಾರಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರೆ? ಪಥ್ಯ, ನಿದ್ದೆ, ಉಲ್ಲಾಸಗಳಿಗೆ ಮಹಾತ್ಮರಿಗೆ ಸಿಕ್ಕ ಅವಧಿ, ದಿನಚರಿಯಂತೆ ದೈನಂದಿನ ಕೆಲಸಗಳ ನಿರ್ವಹಣೆಗೆ ಸಹಕರಿಸಿದವರ ಎಲ್ಲಾ ಮಾಹಿತಿಗಳು ಇದರಲ್ಲಿ ದೊರಕುತ್ತವೆ. ವೇಮಗಲ್ ಅವರು ಮಾಹಿತಿಯ ಅನ್ವೇಷಣೆ ಮತ್ತು ಸಂಬಂಧಪಟ್ಟ ವಾರಸುದಾರರ ಸಂಪರ್ಕದಿಂದ ನಿಖರವಾದ, ಆಧಾರಪೂರ್ವಕವಾದ ಅಂಶಗಳನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ. ಗಾಂಧಿ ಅವರ ಜೀವನ ವಿಧಾನ ಸರ್ವರಿಗೂ ಮಾದರಿಯಾಗಿರುವಷ್ಟೇ, ಆಸಕ್ತಿದಾಯಕವೂ ಆಗಿರುವುದರಿಂದ ನಿರಾಳವಾಗಿ ಓದುಗನನ್ನು ಮನಸೂರೆಗೊಳ್ಳುತ್ತದೆ.

ಇಂಥಹ ಅತ್ಯುತ್ತಮ ಕೃತಿಯನ್ನು ಪ್ರಕಟಣೆಗೆ ಗಾಂಧಿ ಭವನಕ್ಕೆ ಒದಗಿಸಿರುವ ವೇಮಗಲ್ ಸೋಮಶೇಖರ್ ಅವರಿಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಈ ಕೃತಿಯನ್ನು ಮರುಮುದ್ರಣಗೊಳಿಸಿ ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂತಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಪರಿಷ್ಕರಣೆ ಮತ್ತು ಕರಡು ತಿದ್ದುಪಡಿಗೆ ಸಹಕರಿಸಿದ ಶ್ರೀ ಇಂದ್ರಕುಮಾರ್ ಅವರಿಗೂ ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ|| ಕಾರ್ಯದರ್ಶಿ

ಅಧ್ಯಕ್ಷರ ಮಾತು (ದ್ವಿತೀಯ ಮುದ್ರಣಕ್ಕೆ)

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ವ್ಯಕ್ತಿ ವಿಚಾರಗಳು ಮನುಕುಲ ಇರುವವರೆಗೆ ಪ್ರಸ್ತುತ, ಅಮೇರಿಕಾದ ಕಪ್ಪು ಜನರ ನಾಯಕ ಮಾರ್ಟಿನ್ ಲೂಥರ್ ಕಿಂಗ್ ಹೇಳಿದಂತೆ "ಗಾಂಧಿ ಈ ಜಗತ್ತಿಗೆ ಅನಿವಾರ್ಯ, ಮರೆತರೆ ವಿಶ್ವದ ನಾಶ" ಎಂಬ ಮಾತು ಮಾನವ ಜಗತ್ತಿನಲ್ಲಿ ಅವರ ವಿಚಾರಗಳ ಅನಿವಾರ್ಯತೆಯನ್ನು ಸಾರುತ್ತದೆ. ಅವುಗಳನ್ನು ಸಾರ್ವಜನಿಕರಿಗೆ ವಿಶೇಷವಾಗಿ ಯುವಜನರಿಗೆ ತಲುಪಿಸುವ ಕಾರ್ಯ ಆಂದೋಲನೋಪಾದಿಯಲ್ಲಿ ಆಗಬೇಕಿದೆ. ಗಾಂಧಿ ಭವನ ಈ ದಿಸೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕಳೆದ ಆರು ದಶಕಗಳಿಂದ ನಿರಂತರವಾಗಿ ನಡೆಸುತ್ತಾ ಬಂದಿದೆ, ವಿಶೇಷವಾಗಿ ನಾವು ನಡೆಸುತ್ತಾ ಬಂದಿರುವ "ಗಾಂಧಿ ತತ್ವಪ್ರಣೀತ ಯುವಪ್ರೇರಣಾ ಶಿಬಿರ"ಗಳು ಹೆಚ್ಚು ಜನಪ್ರಿಯವಾಗುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ.

ಗಾಂಧೀ ವಿಚಾರಗಳನ್ನು ಜನಸಾಮಾನ್ಯರಲ್ಲಿ ಗಟ್ಟಿಗೊಳಿಸಲು ಗಾಂಧೀ ಸಾಹಿತ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಮುದ್ರಿಸಿ, ವಿತರಿಸುತ್ತಾ ಬಂದಿದ್ದೇವೆ, ಜಗತ್ತಿನಲ್ಲಿ ಬಹುಶಃ ಗಾಂಧೀಜಿ ಅವರ ಬಗ್ಗೆ ಹೊರ ಬಂದಿರುವಷ್ಟು ಸಾಹಿತ್ಯ ಮತ್ತಾರ ಬಗ್ಗೆ ಪ್ರಕಟವಾಗಿರುವುದು ಬಹಳ ವಿರಳ. ಇಂದು ಸಮಾಜಮುಖಿ ಚಿಂತಕರು ಅವರ ಬಗ್ಗೆ ಬರೆಯುವುದು ಮತ್ತು ಮಾತನಾಡುವುದು ಪುಣ್ಯಕರವೆಂದು ತಿಳಿದು ಅವರ ಬಗ್ಗೆ ಮೌಲ್ಯಯುತವಾದ ಹಾಗೂ ವಿಪುಲವಾದ ಸಾಹಿತ್ಯವನ್ನು ಹೊರತಂದಿದ್ದಾರೆ. ಈ ಸಾಲಿಗೆ ಗಾಂಧೀ ವಿಚಾರಗಳಲ್ಲಿ ವಿಶೇಷ ಅಧ್ಯಯನ ಮಾಡಿರುವ ಶ್ರೀ ವೇಮಗಲ್ ಸೋಮಶೇಖರ್ ಅವರ

'ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ' ಪುಸ್ತಕ ಒಂದು ಉತ್ತಮ ಸೇರ್ಪಡೆಯಾಗಿದೆ.

ಗಾಂಧೀಜಿ ಅವರು 1915ರಿಂದ 1937ರವರೆಗೆ ಕರ್ನಾಟಕಕ್ಕೆ 18 ಬಾರಿ ಭೇಟಿ ನೀಡಿರುವ ಘಟನೆಗಳಂತೂ ಸ್ಮರಣೀಯವಾದುದು. ಪಂಡಿತ್ ನೆಹರು ಹೇಳಿದಂತೆ "ಗಾಂಧೀಜಿ ಕುಳಿತಲ್ಲಿ ದೇವಮಂದಿರ ವಾಯಿತು, ನಡೆದಲ್ಲಿ ಪವಿತ್ರ ಭೂಮಿಯಾಯಿತು" ಎಂಬ ಮಾತು ಅಕ್ಷರಶಃ ಸತ್ಯ. ಕರ್ನಾಟಕದ ಪ್ರತಿ ಭೇಟಿಯಲ್ಲೂ ಜನರಲ್ಲಿ ಮಾಂತ್ರಿಕ ಶಕ್ತಿ ತುಂಬಿದ್ದಾರೆ. ಲಕ್ಷಾಂತರ ಜನರನ್ನು ಹುರಿದುಂಬಿಸಿ ಅವರೆಲ್ಲಾ ಸೇವಾ ಮನೋಭಾವದಿಂದ ಸಮಾಜ ಸೇವಕರಾಗುವಂತೆ ಮಾಡಿದ್ದಾರೆ. ಇಂತಹ ಭೇಟಿಯಲ್ಲಿ ನಂದಿ ಗಿರಿಧಾಮದ ಅವರ ಭೇಟಿ ಅವಿಸ್ಮರಣೀಯ. ಶ್ರೀ ವೇಮಗಲ್ ಸೋಮಶೇಖರ್ ಅವರು ಅವುಗಳನ್ನೆಲ್ಲಾ ಕೂಲಂಕುಷವಾಗಿ ಅಧ್ಯಯನ ಮಾಡಿ ಮನೋಜ್ಞವಾಗಿ ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ಇದು ಗಾಂಧಿ ಸಾಹಿತ್ಯಕ್ಕೆ ಅವರ ಅಮೂಲ್ಯ ಕೊಡುಗೆಯಾಗಿದೆ. ಶ್ರೀ ವೇಮಗಲ್ ಸೋಮಶೇಖರ್ ಅವರಿಂದ ಇನ್ನೂ ಅಮೂಲ್ಯವಾದ ಕೃತಿಗಳು ಹೊರಬರಲೆಂದು ಹಾರೈಸುತ್ತೇನೆ. ಗಾಂಧಿ ಸಾಹಿತ್ಯ ಜನಸಾಮಾನ್ಯರಿಗೆ ವಿಶೇಷವಾಗಿ ಯುವಜನರಿಗೆ ಹೆಚ್ಚು ತಲುಪಿ ಅವರು ಜೀವನಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಿದಲ್ಲಿ ಗಾಂಧಿ ಭವನದ ಉದ್ದೇಶ ಸಾರ್ಥಕವಾಗುವುದು ಎಂಬುದೇ ನಮ್ಮ ಆಶಯ.

ಡಾ|| ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು
ಕರ್ನಾಟಕ ಗಾಂಧಿ ಸ್ಮಾರಕ

ಆಶಯ ನುಡಿ

ವೇಮಗಲ್ ಸೋಮಶೇಖರ್ ಅವರು ವೃತ್ತಿಯಲ್ಲಿ ಭಾರತೀಯ ದೂರವಾಣಿ ಕಾರ್ಖಾನೆಯಲ್ಲಿ ಉದ್ಯೋಗಿಗಳಾಗಿದ್ದವರು. ಪ್ರವೃತ್ತಿಯಲ್ಲಿ ಗತಕಾಲದ ಘಟನೆಗಳನ್ನು ಅಧ್ಯಯನ ಮಾಡುವ ವ್ಯಕ್ತಿ. ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯಕರ್ತರಾಗಿದ್ದು ಕಳೆದ 35 ವರ್ಷಗಳಿಂದ ಇವರು ಬೆಂಗಳೂರಿನ ಇತಿಹಾಸವನ್ನು ಅಭ್ಯಸಿಸಿ ಲಾಲ್‌ಬಾಗ್, ವಸ್ತು ಸಂಗ್ರಹಾಲಯ (ಮ್ಯೂಸಿಯಂ) ಹಾಗೂ ಹಳೆಯ ಸ್ಮಾರಕಗಳು ಮುಂತಾದ ವಿಷಯಗಳ ಬಗ್ಗೆ ಅನೇಕ ಲೇಖನಗಳನ್ನು ಪ್ರಕಟಿಸಿರುತ್ತಾರೆ. ಈ ಎಲ್ಲಾ ಲೇಖನಗಳ ಸಂಗ್ರಹವೇ ಇತ್ತೀಚೆಗೆ ಪ್ರಕಟಗೊಂಡಿರುವ 'ಆಧುನಿಕ ಬೆಂಗಳೂರು(ಇತಿಹಾಸ ಸ್ಮಾರಕಗಳು)' ಕೃತಿ. ಇತಿಹಾಸ ಅಧ್ಯಯನದ ಬಗ್ಗೆ ಇವರ ಕುತೂಹಲ, ಆಸಕ್ತಿ ಇತಿಹಾಸದಲ್ಲಿ ಎಂ.ಎ. ಪದವಿ ಪಡೆದ ಅಧ್ಯಾಪಕರನ್ನು ನಾಚಿಸುವಂಥದ್ದು. ಆಧ್ಯಾಪಕರಂತೆ ಉದರ ನಿರ್ವಾಹಕ್ಕೆ ಇವರು ಇತಿಹಾಸದ ಅಧ್ಯಯನ ಕೈಗೊಂಡವರಲ್ಲ. ವಿಷಯದ ಬಗ್ಗೆ ಇರುವ ಪ್ರೀತಿಯಿಂದ ಈ ಕೆಲಸ ಮಾಡಿದವರು. ಬೆಂಗಳೂರಿನಲ್ಲಿ ಇಂತಹವರ ಒಂದು ತಂಡವೇ ಇದೆ. ಮಿಥಿಕ್ ಸೊಸೈಟಿ, ಇತಿಹಾಸ ಅಕಾದೆಮಿ, ಕನ್ನಡ ಸಾಹಿತ್ಯ ಪರಿಷತ್ತುಗಳ ಚಟುವಟಿಕೆಗಳಲ್ಲಿ ಈ ಗುಂಪು ತೊಡಗಿದೆ. ಇದು ಸಂತಸದ ಸಂಗತಿ.

ಈ ಕಿರು ಪುಸ್ತಕ ಅವರ ಅಧ್ಯಯನಶೀಲತೆಗೆ ಒಂದು ಕಿರುಗನ್ನಡಿ. ಗಾಂಧಿಯವರ ಜೀವನ, ಅವರ ವಿಚಾರಧಾರೆ, ನುಡಿದಂತೆ ನಡೆಯುತ್ತಿದ್ದ ಅವರ ನಿಷ್ಠೆ, ದೇಶದ ಹಾಗೂ ಬಡವರ ಬಗ್ಗೆ ಅವರಿಗಿದ್ದ ಕಳಕಳಿ, ಅವರ ಧಾರ್ಮಿಕ ಕಲ್ಪನೆಗಳನ್ನು ಈ ಕಿರು ಪುಸ್ತಕ ಎತ್ತಿ ಹೇಳುತ್ತದೆ. ಗಾಂಧಿಯವರ ಜೀವನದಲ್ಲಿ ನಂದಿಯಲ್ಲಿ ವಾಸ್ತವ್ಯ

ಮಾಡಿದ ಪ್ರಸಂಗಗಳು ಒಂದು ಕಿರು ಅಧ್ಯಾಯವಾಗಿದ್ದರೆ, ಮೈಸೂರು ಸಂಸ್ಥಾನದ ಜನಕ್ಕೆ ಅದು ದೊಡ್ಡ ಪ್ರಕರಣ. ಕೆ.ಸಿ.ರೆಡ್ಡಿಯವರು ಕಾಂಗ್ರೆಸ್ ಸೇರಲು ನಿರ್ಧರಿಸಿದರು. ಆಗಲೇ, ಸಾಕಷ್ಟು ಪುಸ್ತಕ ಅಧ್ಯಯನ, ವ್ಯಾಪಕ ಕ್ಷೇತ್ರ ಕಾರ್ಯ ಹಾಗೂ ಅನೇಕರ ಸಂದರ್ಶನ ಮಾಡಿ ಬರೆದ ಈ ಕೃತಿ ಲೇಖಕರ ಅಧ್ಯಯನಶೀಲತೆಗೆ ಹಿಡಿದ ಕನ್ನಡಿ. ಇಲ್ಲಿ ಕುತೂಹಲಕರ, ಸ್ವಾರಸ್ಯಕರ ಸಂಗತಿಗಳಿವೆ. ಎಲ್ಲರೂ ಓದುವಂತ ಮೆಚ್ಚುವಂತ ನಿರೂಪಣಾ ಶೈಲಿಯಿದೆ. ಈ ಕೃತಿಗಾಗಿ ಸೋಮಶೇಖರ್ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಅವರ ಈ ಚೊಚ್ಚಲ ಕೃತಿಗೆ ಸ್ವಸ್ತಿವಾಚನ ಮಾಡಲು ನನಗೆ ಸಿಕ್ಕಿದ ಅವಕಾಶಕ್ಕೆ ಅವರಿಗೆ ನನ್ನ ಕೃತಜ್ಞತೆಗಳು. ಇಂತವರ ಸಂತತಿ ಸಾವಿರವಾಗಲಿ ಎಂದು ಹಾರೈಸುತ್ತೇನೆ.

ಡಾ. ಸೂರ್ಯನಾಥ ಕಾಮತ್

ಲೇಖಕರ ನುಡಿ

ನಾನು ಕೋಲಾರ ಜಿಲ್ಲೆಯವನಾದ್ದರಿಂದ ನಂದಿ ಗಿರಿಧಾಮಕ್ಕೆ ಮಹಾತ್ಮ ಗಾಂಧಿ ಅವರು 1927ರಲ್ಲಿ ಯಾವ ಕಾರಣಕ್ಕಾಗಿ ಬಂದು ತಂಗಿರಬಹುದೆಂದು ಬಹಳ ದಿವಸಗಳಿಂದ ಯೋಚಿಸುತ್ತಿದ್ದೆ. ಹೀಗೆಯೇ ಒಂದು ದಿನ ರಾಷ್ಟ್ರೋತ್ಥಾನ ಪರಿಷತ್ತಿನ ಸಂಶೋಧನಾ ವಿಭಾಗದಲ್ಲಿ 1927ರ 'ವಿಶ್ವಕರ್ನಾಟಕ' ವಾರಪತ್ರಿಕೆಗಳನ್ನು ನೋಡುತ್ತಿದ್ದಾಗ ಗಾಂಧೀಜಿ ನಂದಿಬೆಟ್ಟಕ್ಕೆ ಆಗಮಿಸಿದ್ದ ವರದಿಗಳನ್ನು ನೋಡಿದೆ. ಎಲ್ಲವೂ ಕುತೂಹಲಕಾರಿಯಾಗಿತ್ತು. ಆ ಮಾಹಿತಿಯನ್ನೆಲ್ಲಾ ಸಂಗ್ರಹಿಸಿ 'ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ' ಎಂಬ ಲೇಖನವನ್ನು ಬರೆದೆ. ಇದು 1990ರ ಜನವರಿ 'ಜನಪದ' ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು.

ಆನಂತರ ಬೇರೆಬೇರೆ ಮೂಲಗಳಿಂದ ಇನ್ನೂ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಿದೆ. ಗೋಖಲೆ ಸಾರ್ವಜನಿಕ ಸಂಸ್ಥೆಯ ಮುಖ್ಯಸ್ಥರಾಗಿದ್ದ ನಿಟ್ಟೂರು ಶ್ರೀನಿವಾಸರಾಯರನ್ನು 1996ರ ಸೆಪ್ಟೆಂಬರ್‌ನಲ್ಲಿ ಭೇಟಿಯಾಗಿ ಗಾಂಧಿ ಅವರ ಜನ್ಮದಿನೋತ್ಸವದ ಸಂದರ್ಭದಲ್ಲಿ ಈ ವಿಷಯ ಕುರಿತು ಸಂಸ್ಥೆಯಲ್ಲಿ ಉಪನ್ಯಾಸ ನೀಡಬಯಸುತ್ತೇನೆಂದು ವಿನಂತಿಸಿಕೊಂಡೆ. ಹಿಂದೆ ಜನಪದ ಮಾಸಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನವನ್ನು ಗಮನಿಸಿದ್ದ ನಿಟ್ಟೂರು ಶ್ರೀನಿವಾಸರಾಯರು ಅಕ್ಟೋಬರ್ 9ರಂದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಉಪನ್ಯಾಸಕ್ಕೆ ಅನುವು ಮಾಡಿದರು. ಆ ಸಂಸ್ಥೆಗೆ ಚಿರಋಣಿಯಾಗಿದ್ದೇನೆ. ಉಪನ್ಯಾಸ ಕೇಳಿದ ಪ್ರೇಕ್ಷಕರು 'ಇನ್ನಷ್ಟು ಮಾಹಿತಿಯನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರತನ್ನಿ' ಎಂದು ಸಲಹೆ ನೀಡಿದರು. ಅಂದಿನಿಂದ

ನಂದಿ ಗಿರಿಧಾಮ, ಗಿರಿಧಾಮದ ತಪ್ಪಲಿನಲ್ಲಿನ ಹಳ್ಳಿಗಳು ಗಾಂಧಿ ಅವರು ತಂಗಿದ್ದಾಗ ಹೋಟೆಲ್ ನಡೆಸುತ್ತಿದ್ದ ಕೆ.ಎನ್. ರಾಮಚಂದ್ರ ಅಯ್ಯರ್ ಅವರನ್ನು ಭೇಟಿ ಮಾಡುತ್ತಲೇ ಮಾಹಿತಿಯನ್ನು ಸಂಗ್ರಹಿಸಿದೆ. ಅಯ್ಯರ್ ಅವರ ಮನೆಯವರೆಲ್ಲರೂ ನನ್ನನ್ನು ಅತ್ಯಂತ ಪ್ರೀತಿಯಿಂದ ಕಂಡಿದ್ದಾರೆ. ಅವರೆಲ್ಲರಿಗೂ ಆಭಾರಿಯಾಗಿದ್ದೇನೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರೊ.ಲಕ್ಷ್ಮಣ್ ತೆಲಗಾವಿಯವರು ಗುರುವಿನೋಪಾದಿಯಲ್ಲಿ ಸಹಕರಿಸಿ ಪ್ರಥಮ ಮುದ್ರಣದ ಕರಡು ಪ್ರತಿಯನ್ನು ಪರಿಶೀಲಿಸಿದ್ದಾರೆ. ನನ್ನ ಆಪ್ತ ಸ್ನೇಹಿತರಾದ ಭಕ್ತರಹಳ್ಳಿಯ ಸಂತೆ ನಾರಾಯಣಸ್ವಾಮಿ, ಡಾ॥ ಎಸ್.ವಿ. ಹಿತ್ತಲಮನಿ, ವಿ. ಆರ್. ಸುದರ್ಶನ್, ವೇಮಗಲ್‌ಮೂರ್ತಿ, ವೇಮಗಲ್ ಸಂಜೀವಮೂರ್ತಿ, ಡಾ॥ ಆರ್. ಶೇಷಶಾಸ್ತ್ರಿ, ಕೋಲಾರದ ಆರ್.ವಿ.ರವೀಂದ್ರನಾಥ್ ಮುಂತಾದವರು ಪ್ರೋತ್ಸಾಹಿಸಿ ಸಹಕರಿಸಿದ್ದಾರೆ. ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ನನ್ನ ಜೊಚ್ಚಲ ಕಿರುಹೊತ್ತಿಗೆಗೆ ಆಶಯ ನುಡಿ ಬರೆದು 1997ರಲ್ಲಿ ಪ್ರಕಟಗೊಳ್ಳಲು ಮುಖ್ಯ ಕಾರಣರಾಗಿರುವ ಹಿರಿಯ ವಿದ್ವಾಂಸರಾದ ಡಾ॥ ಸೂರ್ಯನಾಥ ಯು. ಕಾಮತ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನ್ನ ಕುಟುಂಬದ ಸದಸ್ಯರ ಸಹಕಾರವನ್ನೂ ಸ್ಮರಿಸುತ್ತೇನೆ. ರಾಷ್ಟ್ರೋತ್ಥಾನ ಪರಿಷತ್, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಮಿಥಿಕ್ ಸೊಸೈಟಿ ಗ್ರಂಥಾಲಯ ಸಿಬ್ಬಂದಿವರ್ಗದವರಿಗೂ ಕೃತಜ್ಞತೆಗಳು. ನನ್ನ ಚೊಚ್ಚಲ ಕೃತಿಯನ್ನು ಪ್ರಥಮವಾಗಿ 1997ರಲ್ಲಿ ಪ್ರಕಟಿಸಿದ. ಶ್ರೀ ಎಚ್. ಎಸ್. ದೊರೆಸ್ವಾಮಿ ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ದ್ವಿತೀಯ ಮುದ್ರಣದ ಕರಡನ್ನು ಪರಿಶೀಲಿಸಿರುವ ಕರ್ನಾಟಕ ಗೆಜೆಟಿಯರ್ ಇಲಾಖೆ ಸಂಪಾದಕರಾದ ಎಸ್. ರಾಜೇಂದ್ರಪ್ಪ ಅವರಿಗೆ ನಾನು ಚಿರಋಣಿ. ಪ್ರಸ್ತುತ ಪರಿಷ್ಕೃತ ಕೃತಿ ಹೊರಬರಲು

ಮುಖ್ಯ ಕಾರಣರಾದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ, ಡಾ॥ ಹೊ. ಶ್ರೀನಿವಾಸಯ್ಯ ಅವರು, ಮಹಾತ್ಮ ಗಾಂಧಿ 1934ರಲ್ಲಿ ಬೆಂಗಳೂರಿನ ಮಲ್ಲೇಶ್ವರಕ್ಕೆ ಬಂದಿದ್ದಾಗ ಹತ್ತಿರದಿಂದ ಕಂಡು ಅವರಿಂದ ಪ್ರೇರಣೆಗೊಂಡು ಅವರಂತೆಯೇ ಜೀವನ ನಡೆಸುತ್ತಿರುವ ಅಪರೂಪದ ಮಹಾನ್ ವ್ಯಕ್ತಿ. ಇಂತಹವರು ನನ್ನನ್ನು ಮೊದಲಿನಿಂದಲೂ ಉತ್ತೇಜಿಸುತ್ತಾ ಕೃತಿಗೆ ಪ್ರೋತ್ಸಾಹದಾಯಕ ಮಾತುಗಳನ್ನು ಬರೆದು ಕೊಟ್ಟಿದ್ದಾರೆ. ಇವರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು.

ಗೌ. ಕಾರ್ಯದರ್ಶಿಗಳಾದ ಪ್ರೊ. ಜಿ.ಬಿ. ಶಿವರಾಜು ಅವರು ನಿವೃತ್ತ ಬದುಕಿನಲ್ಲೂ ಅದಮ್ಯ ಉತ್ಸಾಹದಿಂದ ಪಾದರಸದಂತೆ ಓಡಾಡುವ ವ್ಯಕ್ತಿ. ಇವರು ಬಹು ಕಾಳಜಿವಹಿಸಿ ಬಹಳಷ್ಟು ದಿನಗಳಿಂದ ನನ್ನಲ್ಲಿದ್ದ ಮನೋಗತವನ್ನು ಈಡೇರಿಸಿ ನನ್ನನ್ನು ಸಂತುಷ್ಟಗೊಳಿಸಿದ್ದಾರೆ. ಅವರಿಗೆ ನಾನು ಪ್ರಣಾಮಗಳನ್ನು ಎಷ್ಟು ಸಲ್ಲಿಸಿದರೂ ಸಾಲದು.

ಈ ಕೃತಿಯಲ್ಲಿನ ಚಿತ್ರಗಳನ್ನು ಒದಗಿಸಿದ ದಿವಂಗತ ಡಾ. ಅ.ಲ. ನರಸಿಂಹನ್ ಅವರಿಗೆ ಮತ್ತು ಅಂದವಾಗಿ ಮುದ್ರಿಸಿದ ರೆಪ್ಲಿಕಾ ಮುದ್ರಣಾಲಯದವರಿಗೂ ಧನ್ಯವಾದಗಳು.

ವೇಮಗಲ್ ಸೋಮಶೇಖರ್.
#160, 'ದೀಪ' 4ನೇ ತಿರುವು, ಲಕ್ಷ್ಮೀಪುರ
ಕೆಂಪೇಗೌಡ ನಗರ, ಬೆಂಗಳೂರು–560019
ಮೊ: 9901562292

ಬೆಂಗಳೂರು
ದಿ.03.07.2014



ಹೆಣ್ಣು ಗಂಡಿಗಿಂತಲೂ ಉದಾರರಾದವರು. ಏಕೆಂದರೆ ಇಂದಿಗೂ ಹೆಣ್ಣು ತ್ಯಾಗದ, ಮೂಕ ವೇದನೆಯ, ನಮ್ರತೆಯ, ನಂಬಿಕೆಯ ಹಾಗು ಜ್ಞಾನದ ಒಂದು ಪ್ರತೀಕವಾಗಿದ್ದಾಳೆ. ಹೆಣ್ಣುಮಕ್ಕಳ ಒಳ ಅರಿವು ಅನೇಕ ಬಾರಿ ಗಂಡುಮಕ್ಕಳ ಗರ್ವಪೂರಿತ ಜ್ಞಾನಕ್ಕಿಂತಲೂ ಮಿಗಿಲಾದುದೆಂದು ಸಿದ್ಧವಾಗಿದೆ.

– ಮಹಾತ್ಮ ಗಾಂಧಿ

ಪರಿವಿಡಿ

ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ

ಮಹಾತ್ಮ ಗಾಂಧಿ ಅವರು ಬೆಂಗಳೂರಿಗೆ ಐದು ಸಲ ಅಂದರೆ 1915, 1920, 1927, 1934 ಮತ್ತು 1936ರಲ್ಲಿ ಭೇಟಿಕೊಟ್ಟಿದ್ದರು. ಅವರ 1915ರ ಬೆಂಗಳೂರಿನ ಭೇಟಿ ಒಂದು ದಿನದ ಮಟ್ಟಿಗೆ ಮಾತ್ರ ಆಗಿತ್ತು. ಅಂದು ಬೆಂಗಳೂರಿನ ಕೊಲಿಜಿಯೇಟ್ ಹೈಸ್ಕೂಲ್‌ನಲ್ಲಿ (ಈಗಿನ ಕಲಾ ಕಾಲೇಜು) ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರವನ್ನು ಅನಾವರಣಗೊಳಿಸುವ ಕಾರ್ಯಕ್ರಮವನ್ನು ನೆರವೇರಿಸಿದ ನಂತರ ಸಂಜೆ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿನ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಎರಡನೇ ಬಾರಿ 1920ರ ದಂಡು ರೈಲ್ವೆನಿಲ್ದಾಣದ ಹಿಂದಿನ ಮಿಲ್ಲರ್ ರಸ್ತೆಯಲ್ಲಿರುವ ಖುದ್ದೂಸ್‌ಸಾಬ್ ಈದ್ಗಾ ಮೈದಾನದಲ್ಲಿ (ಬೆನ್‌ಸನ್ ಟೌನ್) ಗಾಂಧೀಜಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿ ಆ ದಿನವೇ ನಿರ್ಗಮಿಸಿದ್ದರು. ಆನಂತರ 1927ರಲ್ಲಿ ಅನಾರೋಗ್ಯ ನಿಮಿತ್ತ ನಂದಿ ಗಿರಿಧಾಮಕ್ಕೆ ಆಗಮಿಸಿ 45 ದಿನಗಳ ವಿಶ್ರಾಂತಿಯನ್ನು ಪಡೆದದ್ದು ಐತಿಹಾಸಿಕವಾಗಿ ಮಹತ್ವ ಪಡೆದಿದೆ. ನಂತರ ಬೆಂಗಳೂರಿಗೆ ಆಗಮಿಸಿ 87 ದಿನ ಕುಮಾರಕೃಪಾ ಭವನದಲ್ಲಿ ತಂಗಿದ್ದರು. ಪುನಃ 1934ರಲ್ಲಿ ಹರಿಜನ ನಿಧಿಗಾಗಿ ಬೆಂಗಳೂರಿಗೆ ಆಗಮಿಸಿದ್ದ ಗಾಂಧೀಜಿ ನಾಲ್ಕು ದಿನ ತಂಗಿದ್ದರು. ಮತ್ತೆ 1936ರಲ್ಲಿ ಎರಡನೆಯ ಬಾರಿಗೆ ಅನಾರೋಗ್ಯದ ಕಾರಣದಿಂದ ನಂದಿ ಗಿರಿಧಾಮದಲ್ಲಿ 20 ದಿನ ವಿಶ್ರಾಂತಿ ಪಡೆದಿದ್ದರು. ತದನಂತರ ಕೊನೆಯ ಬಾರಿ ನಗರದಲ್ಲಿ 13 ದಿನ ವಾಸ್ತವ್ಯವಿದ್ದರು. ಈ ಕಿರುಕೃತಿಯಲ್ಲಿ ಗಾಂಧೀಜಿ ಅವರು ನಂದಿ ಗಿರಿಧಾಮದಲ್ಲಿ ತಂಗಿದ್ದಾಗಿನ ದೈನಂದಿನ ಕಾರ್ಯಚಟುವಟಿಕೆಗಳನ್ನು ಮಾತ್ರ ವಿವರಿಸಲಾಗಿದೆ.

ಪ್ರವಾಸ

ಗಾಂಧೀಜಿ ಅವರ ಖಾದಿ ಪ್ರಚಾರದ ದಕ್ಷಿಣ ಭಾರತದ ಪ್ರವಾಸದಲ್ಲಿ ಮೈಸೂರು ಸಂಸ್ಥಾನವೂ ಸಹ ಸೇರಿತ್ತು. ಈ ವಿಚಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ತಿಳಿಯಿತು. ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಮೂಲಕ ಗಾಂಧಿ ಅವರಿಗೆ ಈ ಕೆಳಕಂಡ ಪತ್ರವನ್ನು ಬರೆಯಿಸಿದರು. ಪತ್ರದ ಕನ್ನಡ ಭಾಷಾಂತರ ಹೀಗಿದೆ.

ಸಾರ್ವಜನಿಕ ಕಚೇರಿ

ಬೆಂಗಳೂರು : 14–02–1927

ಪ್ರಿಯ ಮಹಾತ್ಮಾಜಿಯವರೇ,

ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳ ಸಲುವಾಗಿ ಬರುವ ಏಪ್ರಿಲ್ ತಿಂಗಳಿನಲ್ಲಿ ತಾವು ಮೈಸೂರು ಸಂಸ್ಥಾನದಲ್ಲಿ ಸಂಚಾರ ಮಾಡುವುದಾಗಿ ಶ್ರೀಮನ್ಮಹಾರಾಜರಿಗೆ ತಿಳಿದುಬಂದಿದೆ. ತಮ್ಮ ಪ್ರವಾಸ ಕಾರ್ಯಕ್ರಮದಲ್ಲಿ ರಾಜಧಾನಿಗೆ ಭೇಟಿ ನೀಡುವುದನ್ನು ಸೇರಿಸಿಕೊಂಡು ಮಹಾರಾಜರು ನೀಡಿದ ಆತಿಥ್ಯವನ್ನು ತಾವು ಸ್ವೀಕರಿಸಿದ್ದೇ ಆದರೇ ಮಹಾಸ್ವಾಮಿಯುವರಿಗೆ ಅತ್ಯಂತ ಆನಂದವಾಗುತ್ತದೆ ಎಂಬ ಅಂಶವನ್ನು ತಮಗೆ ತಿಳಿಸುವಂತೆ ನಮಗೆ ಸೂಚಿಸಿರುವರು. ತಾವು ಮೈಸೂರಿಗೆ ಎಂದು ಭೇಟಿ ನೀಡುವಿರೆಂಬುದನ್ನು ದಯವಿಟ್ಟು ನಮಗೆ ತಿಳಿಸುತ್ತೀರೆಂದು ನಂಬುತ್ತೇನೆ.

ಶುದ್ಧ ಭಾವದ ನಿಮ್ಮವ

ಮಿರ್ಜಾ ಎಂ. ಇಸ್ಮಾಯಿಲ್

ಅನಾರೋಗ್ಯ

ಖಾದಿ ಪ್ರಚಾರ ಹಾಗೂ ನಿಧಿ ಸಂಗ್ರಹಣೆಗಾಗಿ ಗಾಂಧೀಜಿ ಮತ್ತು ಕಸ್ತೂರಿಬಾ ಅವರು ತಮ್ಮ ಅನುಯಾಯಿಗಳೊಂದಿಗೆ ಅಖಿಲ ಭಾರತ ಪ್ರವಾಸ ಮಾಡುತ್ತ 1921ರ ಮಾರ್ಚ್ 23ರಂದು ಮುಂಬಯಿ ತಲುಪಿದರು. ಅಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳ ಕಾರಣದಿಂದ ಮಧ್ಯರಾತ್ರಿ ಒಂದು ಗಂಟೆಗೆ ನಿದ್ರಿಸುವಂತಾಯಿತು. ಮಾಮೂಲಿನಂತೆ ಬೆಳಗ್ಗೆ ನಾಲ್ಕು ಗಂಟೆಗೆ ಏಳುತ್ತಿದ್ದ ಗಾಂಧೀಜಿಗೆ ಅಂದು ಐದು ಗಂಟೆಗೆ ಎಚ್ಚರವಾಯಿತು. ಅದಾಗಲೇ ಗಾಂಧೀಜಿ ದೈಹಿಕವಾಗಿ ಬಳಲಿದ್ದರೂ, ಮುಂಬಯಿಯಲ್ಲಿ ತಂಡೋಪತಂಡವಾಗಿ ಬರುತ್ತಿದ್ದ ಸಾರ್ವಜನಿಕರನ್ನು ಇಡೀದಿನ ಭೇಟಿ ಮಾಡಿ ರಾತ್ರಿ ಪುಣೆ ರೈಲನ್ನು ಹತ್ತಿದರು. ರೈಲಿನಲ್ಲಿಯೂ ಅವರಿಗೆ ಸರಿಯಾಗಿ ನಿದ್ದೆ ಹತ್ತಲಿಲ್ಲ. ಮರುದಿನ ಬೆಳಗ್ಗೆ ಐದು ಗಂಟೆಗೆ ಸ್ವಲ್ಪ ತಲೆ ಸುತ್ತಿದ ಹಾಗಾಯಿತು. ಅದಾಗಲೇ ದೇಹದ ಎಡಭಾಗವೆಲ್ಲಾ ನಿಶ್ಶಕ್ತಿಗೊಂಡಿತ್ತು. ಪುಣೆಯಲ್ಲಿ ರೈಲು ಬದಲಾಯಿಸಿದರು. ಅಲ್ಲಿಂದ ಕೊಲ್ಲಾಪುರಕ್ಕೆ 26ರಂದು ಆಗಮಿಸಿದ್ದ ಗಾಂಧೀಜಿ ಹಲವು ಸಭೆಗಳಲ್ಲಿ ಮಾತನಾಡಿದರು. ಇದರಿಂದಾಗಿ ನಿಶ್ಯಕ್ತಿ, ಆಯಾಸ ಉಲ್ಬಣಗೊಂಡಿತು. ಜೊತೆಯಲ್ಲಿದ್ದ ಕೃಷ್ಣದಾಸ್, ಪ್ಯಾರೆಲಾಲ್, ದೇವದಾಸ್ ಗಾಂಧಿ, ಕಾಂತಿಲಾಲ್ ಗಾಂಧಿ ಮತ್ತಿತರರು ಬಹಳ ಚಿಂತೆಗೊಳಗಾದರು. ಈ ಸುದ್ದಿ ತಿಳಿಯುತ್ತಿದ್ದಂತೆಯೇ ಕೊಲ್ಲಾಪುರಕ್ಕೆ ಆಗಮಿಸಿದ ಮುಂಬಯಿನ ಡಾ. ಮಂಚಲ್‌ಷಾ ಗಿಲ್ಡರ್, ಡಾ. ಬಿ. ಸಿ. ರಾಯ್ ಗಾಂಧಿ ಅವರನ್ನು ಪರೀಕ್ಷಿಸಿ ಸ್ವಲ್ಪ ವಾಯು ಹೊಡೆತ (ಲಕ್ವ) ಆಗಿದೆಯೆಂದರು.

ನಿಪ್ಪಾಣಿಯಲ್ಲಿ

ಮಾರ್ಚ್ 27 ಭಾನುವಾರದಂದು ಕೊಲ್ಲಾಪುರದಿಂದ ನಿಪ್ಪಾಣಿಗೆ ಆಗಮಿಸಿದಾಗ ಗಾಂಧಿ ಅವರ ಅನಾರೋಗ್ಯದ ಸುದ್ದಿಯನ್ನು ತಿಳಿದು ನೂರಾರು ಜನ ಧಾವಿಸಿ ಬಂದು ಮಹಾತ್ಮರ ದರ್ಶನ ಪಡೆದರು. ಕಲ್ಕತ್ತದ ಧನಿಕ ವ್ಯಾಪಾರಿಯೊಬ್ಬರು ಅವರ ಆತಿಥ್ಯ

ವಹಿಸಿಕೊಂಡಿದ್ದರು. "ಕರ್ನಾಟಕಕ್ಕೆ ಕಾಲಿಡುತ್ತಿದ್ದಂತೆ ಹೀಗಾಯಿತಲ್ಲಾ" ಎಂದು ಬೆಳಗಾವಿಯವರೇ ಆಗಿದ್ದ ಕರ್ನಾಟಕದ ಸಿಂಹ ಗಂಗಾಧರರಾವ್ ದೇಶಪಾಂಡೆ ಅವರಿಗೆ ಬಹಳ ನೋವಾಯಿತು. ಅವರು ಮೀರಜ್‌ನಲ್ಲಿ ಖ್ಯಾತ ವೈದ್ಯರಾಗಿದ್ದ ಜರ್ಮನಿಯ ಡಾ. ವ್ಯಾನ್‌ಲೆಸ್ ಅವರನ್ನು ನಿಪ್ಪಾಣಿಗೆ ಕರೆಯಿಸಿದರು. ವಿಜಾಪುರದ ಖ್ಯಾತ ವೈದ್ಯ ಡಾ. ಅಂಕಲೀಕರ್ ಮತ್ತು ಘಟಪ್ರಭಾ ಕರ್ನಾಟಕ ಆರೋಗ್ಯ ಧಾಮದ ಸ್ಥಾಪಕರಾದ ಬೆಳಗಾವಿ ಜಿಲ್ಲೆಯ ಡಾ. ಜಿ. ಆರ್. ಕೊಕಟ್‌ನೂರ್ ಅವರೂ ಆಗಮಿಸಿದರು. ಎಲ್ಲರೂ ಗಾಂಧೀಜಿ ಅವರನ್ನು ಪರೀಕ್ಷಿಸಿ ಮಿತಿಮೀರಿದ ಕೆಲಸಗಳಿಂದ ಈ ಸ್ಥಿತಿವುಂಟಾಗಿದೆ, ಪ್ರವಾಸವನ್ನು ರದ್ದುಮಾಡಿ ಪೂರ್ಣ ವಿಶ್ರಾಂತಿಯನ್ನು ಪ್ರಶಾಂತವೂ ಆಹ್ಲಾದಕರವೂ ಆದ ಸ್ಥಳದಲ್ಲಿ ತೆಗೆದುಕೊಳ್ಳಬೇಕೆಂದು ಸಲಹೆ ನೀಡಿದರು. ಪ್ರವಾಸ ಮತ್ತು ಕಾರ್ಯಕ್ರಮಗಳೆಲ್ಲವೂ ರದ್ದಾಯಿತು. ಈ ವಿಷಯವನ್ನು ಮಹದೇವ ದೇಸಾಯಿ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಿದರು. ಭಾರತದಾದ್ಯಂತ ಈ ಸುದ್ದಿ ಹರಡಿತು. ಇಷ್ಟಾದರೂ ಗಾಂಧೀಜಿ "ನನಗೇನು ಆಲಸ್ಯವಿಲ್ಲ. ಏನು ಭಯವಿಲ್ಲ. ಸಂಚಾರಕ್ಕೆ ಸಿದ್ಧನಾಗಿದ್ದೇನೆ" ಎಂದರು.

ಬೆಳಗಾವಿಯಲ್ಲಿ

ಗಾಂಧೀಜಿ ನಿಪ್ಪಾಣಿಯಲ್ಲಿ ನಾಲ್ಕು ದಿನಗಳಿದ್ದು ಏಪ್ರಿಲ್ ಒಂದರಂದು ಬೆಳಗಾವಿಗೆ ಆಗಮಿಸಿದರು. ದೇವದಾಸ್ ಗಾಂಧಿ ಮತ್ತು ರಾಜಗೋಪಾಲಾಚಾರಿ ಅವರು ಅಲ್ಲಿಗೆ ಆಗಮಿಸಿ ಗಾಂಧಿ ಅವರ ಜೊತೆಗೂಡಿದರು. ಅಂದೇ ವೈದ್ಯರ ಸಲಹೆಯಂತೆ ಬೆಳಗಾವಿ – ಸಾವಂತವಾಡಿ ರಸ್ತೆಯಲ್ಲಿರುವ ಸುಮಾರು 55 ಕಿ.ಮೀ. ದೂರದಲ್ಲಿದ್ದ ಅಂಬೋಲಿ ಗಿರಿಧಾಮಕ್ಕೆ ವಿಶ್ರಾಂತಿಗೆಂದು ಕರೆದೊಯ್ದರು. ಅಲ್ಲಿ ಸಾವಂತವಾಡಿಯ ಸಂಸ್ಥಾನದವರು ಎಲ್ಲಾ ರೀತಿಯ ಅನುಕೂಲಗಳನ್ನು ಬಂಗಲೆಯಲ್ಲಿಯೇ ಏರ್ಪಾಟು ಮಾಡಿದ್ದರು. ಗಾಂಧಿ ಅವರ ಕುಟುಂಬ

ವೈದ್ಯರಾಗಿದ್ದ ಡಾ. ಜೀವರಾಜ ಮೆಹತಾ ಅಂಬೋಲಿಗೆ ಆಗಮಿಸಿ ಮಹಾತ್ಮರ ದೇಹಸ್ಥಿತಿಯನ್ನು ಪರೀಕ್ಷಿಸಿ ಇದು ಅಪೊಪ್ಲಿಕ್ಸ್ (ವಾಯು ಹೊಡೆತ) ಸಂಬಂಧಿಸಿದ ಕಾಯಿಲೆ ಎಂದು ದೃಢಪಡಿಸಿ "ಗಾಂಧೀಜಿ ಮೊದಲಿನಿಂದಲೂ ಪ್ರಕೃತಿ ಚಿಕಿತ್ಸಾ ಕ್ರಮಗಳನ್ನು ಚೆನ್ನಾಗಿ ಬಲ್ಲರು, ಭಯಪಡಬೇಕಾದ ಅವಶ್ಯವಿಲ್ಲ, ರಕ್ತಪರಿಚಲನೆಯ ಒತ್ತಡವೊಂದನ್ನು ಬಿಟ್ಟರೆ ಮತ್ತೇನು ಆಗಿಲ್ಲ. ಆದರೆ ಶಾರೀರಕ ಮತ್ತು ಮಾನಸಿಕ ಶ್ರಮದಿಂದ ರಕ್ತಕಣಗಳು ಕೆಡಲು ಮೊದಲಾಗಿದೆ. ರಕ್ತದ ಒತ್ತಡವೂ ಬೇಗ ಇಳಿಯುವ ಹಾಗಿಲ್ಲ, ಆದರೆ ವಿಶ್ರಾಂತಿಯಿಂದ ಅದರ ವೇಗವನ್ನು ತಡೆಗಟ್ಟಬಹುದು. ಆದ್ದರಿಂದ ಪೂರ್ತ ಎರಡು ತಿಂಗಳು ವಿರಮಿಸಬೇಕು" ಎಂದು ಗಾಂಧಿ ಅವರಿಗೆ ಸಲಹೆ ನೀಡಿದರು. ಆಗ ಗಾಂಧಿ ಅವರಿಗೆ 57 ವರ್ಷ ವಯಸ್ಸಾಗಿತ್ತು.

ನಂದಿ ಗಿರಿಧಾಮಕ್ಕೆ ಪ್ರಯಾಣ

ಅಂಬೋಲಿ ಗಿರಿಧಾಮದಲ್ಲಿನ ಹವಾಗುಣವು ಗಾಂಧೀಜಿಗೆ ಸರಿ ಹೊಂದಲಿಲ್ಲವಾಗಿ 17 ದಿನಗಳ ನಂತರ "ಸಬರಮತಿ ಆಶ್ರಮಕ್ಕೆ ಹೊರಟುಬಿಡೋಣ" ಎಂದರು. ಜೊತೆಯಲ್ಲಿದ್ದವರೆಲ್ಲರೂ "ಈಗ ಅಲ್ಲಿ ಬಿಸಿಲು ಜಾಸ್ತಿ, ಹೋಗುವುದು ಬೇಡ" ಎಂದರು. ಅನಂತರ ಎಲ್ಲರೂ, ಮುಖ್ಯವಾಗಿ ರಾಜಗೋಪಾಲಾಚಾರಿ ಅವರು ಮುಂದಿನ ಖಾದಿ ಪ್ರಚಾರ ಪ್ರವಾಸದಲ್ಲಿ ಮೈಸೂರು ಸಂಸ್ಥಾನವು ಸೇರಿರುವುದರಿಂದ ಕೋಲಾರದ ನಂದಿ ಗಿರಿಧಾಮವೇ ಗಾಂಧೀಜಿ ಅವರ ವಿಶ್ರಾಂತಿಗೆ ಪ್ರಶಸ್ತ ಸ್ಥಳವೆಂದು ನಿರ್ಧರಿಸಿ ನಂದಿ ಗಿರಿಧಾಮದ ಐತಿಹಾಸಿಕ ಮಹತ್ವವನ್ನು ಅವರಿಗೆ ತಿಳಿಸಿದರು. ಅನಂತರ ಗಾಂಧೀಜಿ ನಂದಿ ಗಿರಿಧಾಮಕ್ಕೆ ತೆರಳಲು ಒಪ್ಪಿಕೊಂಡರು. ತತ್ಪರಿಣಾಮವಾಗಿ ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ಮಹಾತ್ಮ ಗಾಂಧಿ ಸ್ವಾಗತ ಸಮಿತಿಗಳು ರಚಿಸಲ್ಪಟ್ಟವು.

ಪೂರ್ವಸಿದ್ಧತೆಗಾಗಿ ಮಹಾದೇವ ದೇಸಾಯಿ, ರಾಜಗೋಪಾಲಾಚಾರಿ ಮತ್ತು ಗಂಗಾಧರ ದೇಶಪಾಂಡೆ ಅವರು ಪೂರ್ವಸಿದ್ಧತೆಗಾಗಿ ಏಪ್ರಿಲ್ ಎರಡನೇ ವಾರದಲ್ಲಿ ಬೆಂಗಳೂರಿಗೆ ಆಗಮಿಸಿ ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸುದ್ದಿ ತಿಳಿಸಿದರು. ಮಹಾರಾಜರು ನಂದಿ ಗಿರಿಧಾಮದ ಕನ್ನಿಂಗ್ ಹ್ಯಾಮ್ ಭವನದಲ್ಲಿ ಸಕಲ ಏರ್ಪಾಟುಗಳನ್ನು ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವಿತ್ತರು. ಬ್ರಿಟಿಷ್ ಸರ್ಕಾರಕ್ಕೆ ಈ ವಿಷಯ ತಿಳಿದು ಕಣ್ಣು ಕೆಂಪಗಾಯಿತು. ಆದರೂ ನಾಲ್ವಡಿಯವರು ವಿಚಲಿತರಾಗಲಿಲ್ಲ. ಗಾಂಧಿ ಪರಿವಾರದವರೆಲ್ಲರೂ ಏಪ್ರಿಲ್ 19ರಂದು ಬೆಂಗಳೂರಿಗೆ ಬರಲಿದ್ದಾರೆಂದು ಪ್ರಕಟವಾಯಿತು. ಗಿರಿಧಾಮದಲ್ಲಿ ವ್ಯವಸ್ಥೆಗಾಗಿ ರಾಜಾಜಿ ಮತ್ತು ಮೂವರು ಸ್ವಯಂಸೇವಕರು ಬೆಂಗಳೂರಿನಿಂದ ಮುಂಚಿತವಾಗಿ ನಂದಿ ಬೆಟ್ಟಕ್ಕೆ ಹೊರಟರು. ಕೋಲಾರದ ಜಿಲ್ಲಾಧಿಕಾರಿಗಳೂ ಸಹ ಮುಂಚಿತವಾಗಿಯೇ ನಂದಿ ಬೆಟ್ಟಕ್ಕೆ ಬಂದಿದ್ದರು. ಚಿಕ್ಕಬಳ್ಳಾಪುರದ ಜನರಂತೂ ಗಾಂಧೀಜಿ ಮತ್ತಿತರು ನಂದಿ ಬೆಟ್ಟದಲ್ಲಿ ಇರುವವರೆಗೆ ಆಗಬಹುದಾದ ಎಲ್ಲಾ ವೆಚ್ಚವನ್ನು ತಾವೇ ಭರಿಸುವುದಾಗಿ ಸಂತೋಷದಿಂದ ಪ್ರಕಟಿಸಿದ್ದರು.

ಬೆಂಗಳೂರಿನ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಮೀರ್‌ಹಂಜಾ ಹುಸೇನ್ ಸಾಹೇಬ್, ಖಜಾಂಚಿಗಳಾಗಿ ರಾಜಸೇವಾಸಕ್ತ ಪಾಮಡಿ ಸುಬ್ಬರಾಮಶೆಟ್ಟಿ ಹಾಗೂ ನ್ಯಾಯಮೂರ್ತಿ ನಾಗೇಶ್ವರ ಅಯ್ಯರ್ ಅವರು, ಕಾರ್ಯದರ್ಶಿಗಳಾಗಿ ಕೆ. ಟಿ.ಭಾಷ್ಯಂ ಮತ್ತು ಲಕ್ಷ್ಮೀನರಸು ಅವರು ನೇಮಕವಾದರು.

ಸ್ವಯಂ ಸೇವಕರು

ಬೆಂಗಳೂರಿನ ಯುವಕರು ಸ್ವಯಂಸೇವಕರಾಗಿ ಕೆಲಸ ಮಾಡಲು ಮುಂದೆ ಬಂದರು. ಶ್ರೀ ರಾಜರಾಮಯ್ಯಂಗಾರ್ ಅವರು ಗಾಂಧೀಜಿ ಅವರ ಸೇವೆ ದೃಷ್ಟಿಯಿಂದ ತಮ್ಮ ವ್ಯಾಸಂಗವನ್ನೇ ತ್ಯಜಿಸಿ ಗಾಂಧೀ

ಶಿಬಿರದ ಸ್ವಯಂಸೇವಕರಾಗಿ ಬಂದರು. ಇವರು ಬೆಂಗಳೂರಿನ ದೇಶೀಯ ವಿದ್ಯಾಶಾಲೆಯಲ್ಲಿ ಗಾಂಧಿ ಅವರ ಸೇವೆಗಾಗಿಯೇ ಸೇವಾದಳವೊಂದನ್ನು ಪ್ರಾರಂಭಿಸಿ ಕೆಲವರು ಉತ್ತಮ ಸ್ವಯಂ ಸೇವಕರಾಗಲು ತರಬೇತಿ ನೀಡಿದ್ದರು. ತಂಡದ ಮೇಲ್ವಿಚಾರಕರಾಗಿ ಎಂ. ಸಿ. ಮಾತಂಡ ಅವರನ್ನು ನೇಮಿಸಲಾಗಿತ್ತು. ಇವರು ಕೊಡಗಿನ ಪೊಲ್ಲಿ ಬೆಟ್ಟದವರು, ಮುಂಬಯಿಯಲ್ಲಿ ಕಾರ್ಯ ನಿರ್ವಹಿಸಿ "ಸೇವಾದಳದ ಶ್ರೀಮಂತ ಅಧಿಕಾರಿ" ಎಂದು ಪ್ರಸಿದ್ಧಿ ಪಡೆದಿದ್ದರು. ಇವರು ಆಜಾನುಬಾಹು ಆಕರ್ಷಕ ವ್ಯಕ್ತಿತ್ವದ ಹಸನ್ಮುಖಿಯಾಗಿದ್ದರು. ಇವರಿದ್ದ ಕಡೆ ಮಕ್ಕಳ ಗುಂಪೇ ಇರುತ್ತಿತ್ತಂತೆ. ಆಗತಾನೇ ಕೆಂಗೇರಿಯಲ್ಲಿ ಪ್ರಾರಂಭವಾಗಿದ್ದ ಗುರುಕುಲ ಸೇವಾ ಸಂಘದಿಂದ ಟಿ. ರಾಮಚಂದ್ರ ಗಿರಿಧಾಮಕ್ಕೆ ಮುಂಚಿತವಾಗಿ ತೆರಳಿ ಅಲ್ಲಿ ವಾಸಿಸುತ್ತಿದ್ದವರೆಲ್ಲರನ್ನೂ ಕಾಂಗ್ರೆಸ್ ಪಕ್ಷಕ್ಕೆ ಸೇರುವ ಹಾಗೆ ಪ್ರೇರೇಪಿಸಿ ಖಾದಿ ಬಟ್ಟೆಯನ್ನು ಧರಿಸುವ ಹಾಗೆ ಮಾಡಿದ್ದರು. ಇವರು ಬಹಳ ಉತ್ಸಾಹದಿಂದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಮಾರ್ಚ್ ತಿಂಗಳಲ್ಲಿ ಪ್ರವಾಸ ಪ್ರಾರಂಭಿಸಿದಾಗ ಪೂರ್ವಯೋಜಿತ ಕಾರ್ಯಕ್ರಮದ ಪಟ್ಟಿಯಲ್ಲಿ ಬೆಂಗಳೂರು ಭೇಟಿ, ಏಪ್ರಿಲ್ 12ರಂದು ಎಂದು ಅಧಿಕೃತವಾಗಿ ನಿಗದಿಪಡಿಸಲಾಗಿತ್ತು. ಅದರಂತೆ ಮೈಸೂರು ಸಂಸ್ಥಾನದಲ್ಲೆಲ್ಲಾ ಉತ್ಸಾಹದಿಂದ ಅನೇಕ ಕಾರ್ಯಕ್ರಮಗಳು ಆಯೋಜನೆಗೊಂಡು ಖಾದಿ ನಿಧಿಯನ್ನೂ ಸಂಗ್ರಹಿಸಿದ್ದರು. ಆದರೆ ಗಾಂಧಿ ಅವರ ದೇಹಾಲಸ್ಯದ ಸುದ್ದಿ ಎಲ್ಲರಿಗೂ ನೋವುಂಟು ಮಾಡಿತು.ಎಲ್ಲಾ ಕಾರ್ಯಕ್ರಮಗಳನ್ನು ಮುಂದೂಡಲಾಯಿತು. 12 ದಿನ ಅಂಬೋಲಿಯಲ್ಲಿದ್ದ ಗಾಂಧಿ ಪರಿವಾರದವರೆಲ್ಲರೂ ಏಪ್ರಿಲ್ 18ರಂದು ಬೆಳಗಾವಿಗೆ ಬಂದು 19ರಂದು ಬೆಳಗ್ಗೆ ಬೆಂಗಳೂರು ರೈಲನ್ನು ಹತ್ತಿದರು. ಹಾದಿಯುದ್ದಕ್ಕೂ ನಿಲ್ದಾಣಗಳಲ್ಲಿ ಅನಾರೋಗ್ಯಗೊಂಡಿದ್ದ ಗಾಂಧಿ ಅವರನ್ನು ಕಾಣಲು ನೂರಾರು ಜನ ಕಾಯುತ್ತಿದ್ದ ಕಾರಣ ರಾತ್ರಿಯೇ ತಲುಪಬೇಕಾಗಿದ್ದ ರೈಲು ತಡವಾಗಿ ಮರು ದಿವಸ ಅಂದರೆ

20 ರಂದು ಬೆಳಗ್ಗೆ ಆರು ಗಂಟೆಗೆ ಬೆಂಗಳೂರಿನ ಯಶವಂತಪುರ ರೈಲು ನಿಲ್ದಾಣವನ್ನು ತಲುಪಿತ್ತು. ನಂದಿ ಗಿರಿಧಾಮಕ್ಕೆ ಹೋಗಲು ಬಳ್ಳಾರಿ ರಸ್ತೆಯೇ ಸಮೀಪದ ಹಾದಿ ಆಗಿರುವುದರಿಂದ, ಅಲ್ಲಿಯೇ ಗಾಂಧಿ ಅವರನ್ನು ಇಳಿಸಿಕೊಳ್ಳುವಂತೆ ಏರ್ಪಾಟು ಮಾಡಿದ್ದರು. ರಾತ್ರಿಯಿಂದಲೇ ಯಶವಂತಪುರ ರೈಲ್ವೇ ನಿಲ್ದಾಣದಲ್ಲಿ ಬೆಂಗಳೂರು ಸ್ವಾಗತಸಮಿತಿ ಸದಸ್ಯರು, ಸ್ವಯಂ ಸೇವಕರು ಸೇರಿ ಅಂದಾಜು ಸಾವಿರ ಜನರು ಕಾಯುತ್ತಿದ್ದರು. ಗಾಂಧೀಜಿ ರೈಲಿನಿಂದ ಇಳಿಯುತ್ತಿದ್ದಂತೆಯೇ ಸ್ವಾಗತಸಮಿತಿಯು ಸದಸ್ಯರು ಫಲಪುಷ್ಪಾದಿಗಳನ್ನು ಅರ್ಪಿಸಿ ಮಹಾತ್ಮರನ್ನು ಸ್ವಾಗತಿಸಿದರು. ಆಗ ಪ್ರಾರ್ಥನಾ ಸಮಯವಾದ್ದರಿಂದ ಪ್ಲಾಟ್‌ಫಾರಂನಲ್ಲಿಯೇ ಪಾರ್ಥನಾ ಸಭೆಯನ್ನು ಗಾಂಧೀಜಿ ನಡೆಸಿದರು. ಅಲ್ಲಿಯೇ ಎರಡು ಗುಡಾರಗಳನ್ನು ಹಾಕಲಾಗಿತ್ತು ರೈಲ್ವೆ ಇಲಾಖೆಯವರು ಅನೇಕ ರೀತಿಯಲ್ಲಿ ಗಾಂಧಿ ಅವರ ಪ್ರವಾಸಕ್ಕೆ ಸಹಕರಿಸಿದ್ದರು. ಸ್ವಾಗತ ಸಮಿತಿಯವರೊಡನೆ ಕುಶಲ ಸಂಭಾಷಣೆ ನಂತರ ಗಾಂಧೀಜಿ ಸ್ವಲ್ಪ ವಿಶ್ರಾಂತಿ ಪಡೆದರು. ಮೂರು ಕಾರುಗಳು ಸಿದ್ಧವಾಗಿದ್ದವು. ಎಲ್ಲರೂ ಯಶವಂತಪುರದ ರೈಲ್ವೆ ನಿಲ್ದಾಣದಿಂದ ನೇರವಾಗಿ ಗಿರಿಧಾಮದ ತಪ್ಪಲಿನ ಸುಲ್ತಾನಪೇಟೆಗೆ ಆಗಮಿಸಿದರು. ಅಲ್ಲಿ ಚಿಕ್ಕಬಳ್ಳಾಪುರದ ಸ್ವಾಗತ ಸಮಿತಿ ಸದಸ್ಯರಾದಿಯಾಗಿ ಅನೇಕ ಮುಖಂಡರು ಕಾದಿದ್ದು ಎಲ್ಲರನ್ನು ಸ್ವಾಗತಿಸಿದರು.

ಎರಡೂವರೆ ಮೈಲಿ ದೂರದ 1775 ಮೆಟ್ಟಲುಗಳುಳ್ಳ ನಂದಿಬೆಟ್ಟವನ್ನು ಗಾಂಧೀಜಿ, ಕಸ್ತೂರಿಬಾ ಮತ್ತು ಹಂಜಾ ಹುಸೇನರನ್ನು ಡೋಲಿಗಳಲ್ಲಿ ಹೊತ್ತು ಖಾದಿಧಾರಿ ಸ್ವಯಂ ಸೇವಕರು ಹಾಗೂ ಸುಲ್ತಾನ್‌ಪೇಟೆ ಯುವಕರು ಸಂತೋಷದಿಂದ "ಮಹಾತ್ಮ ಗಾಂಧೀ ಕೀ ಜೈ" ಎಂದು ಜೈಕಾರ ಹಾಕುತ್ತಾ ಹತ್ತಿದ್ದರು. ಡೋಲಿಗಳಿಗೂ ಖಾದಿ ಬಟ್ಟೆಯನ್ನು ಹೊದಿಸಿದ್ದರು. ನಂದಿ ಬೆಟ್ಟದ ಮೇಲಕ್ಕೆ ಅದಾಗಲೇ ಆಗಮಿಸಿದ್ದ ರಾಜಾಜಿ, ಪಂಡಿತ ತಾರಾನಾಥರು, ಸ್ವಯಂ ಸೇವಕರು

ಸೇರಿದಂತೆ ಕೆಲವು ಗಣ್ಯ ವ್ಯಕ್ತಿಗಳು ಮಹಾತ್ಮರ ಬರುವಿಕೆಗಾಗಿ ಕಾಯುತ್ತಿದ್ದರು. ಬೆಳಗ್ಗೆ ಸುಮಾರು ಹತ್ತು ಗಂಟೆಗೆ ಗಾಂಧಿ ಮತ್ತು ಪರಿವಾರದವರು ಬೆಟ್ಟದ ಮೇಲಕ್ಕೆ ಬಂದಿಳಿದರು. ಕನ್ನಿಂಗ್‌ಹ್ಯಾಂ ಭವನವನ್ನು ತಳಿರು ತೋರಣಗಳಿಂದ ಸಿಂಗರಿಸಿದ್ದರು. ಉತ್ತರ ದಿಕ್ಕಿನ ಬಯಲಿನಲ್ಲಿ ಪ್ರಾರ್ಥನೆಗಾಗಿ ವಿಶೇಷ ಚಪ್ಪರವನ್ನು ನಿರ್ಮಿಸಲಾಗಿತ್ತು. ಕಾಯುತ್ತಿದ್ದವರೆಲ್ಲರೂ ಶಾಂತ ರೀತಿಯಿಂದ ಮಹಾತ್ಮರನ್ನು ಸ್ವಾಗತಿಸಿ ಪ್ರೀತಿ ವಿಶ್ವಾಸದೊಂದಿಗೆ ಬಿಡಾರಕ್ಕೆ ಕರೆತಂದರು. ಅತಿಥಿಗಳ ಊಟ-ಉಪಚಾರದ ಸಿದ್ಧತೆಗಳನ್ನು ಚಿಕ್ಕಬಳ್ಳಾಪುರ ಸ್ವಾಗತ ಸಮಿತಿಯವರು ಏರ್ಪಡಿಸಿದ್ದರು.

ಆಶ್ರಮದ ಮಹಿಳೆಯರಿಗೆ ಪತ್ರ

ಗಿರಿಧಾಮದಿಂದ ಮಹಾತ್ಮರು ಸಬರಮತಿ ಆಶ್ರಮದ ಮಹಿಳೆಯರಿಗೆ ಬರೆದ ಪತ್ರದಲ್ಲಿ "ನನ್ನ ಗಾಡಿಯ ಚಕ್ರ ಕೆಸರಿನಲ್ಲಿ ಹೂತುಹೋಗಿದ್ದು ಸರಿ ಮಾಡಲು ಸಾಧ್ಯವಾಗದಂತಾಗಿದೆ, ನಾಳೆ ನುಚ್ಚುನೂರಾಗಬಹುದು. ಹಾಗಾದರೆ ಏನು ಗತಿ! ಗೀತೆಯಲ್ಲಿ ಹೇಳಿಲ್ಲವೆ! ಹುಟ್ಟಿದವರೆಲ್ಲಾ ಸಾಯಲೇಬೇಕು, ಸತ್ತವರೆಲ್ಲಾ ಹುಟ್ಟಬೇಕು. ಪ್ರತಿಯೊಬ್ಬರು ಇಲ್ಲಿಗೆ ಬರುವುದು ತಮ್ಮ ಪಾಲಿನ ಋಣ ತೀರಿಸುತ್ತಾ ಮುಂದೆ ಸಾಗುವುದಕ್ಕೆ. ದೇಹದಲ್ಲಿ ಕಾಮ ಕ್ರೋಧ ಇಲ್ಲದೆ ಯಾರಿಗೂ ರೋಗ ರುಜಿನ ಬಾರದೆಂದು ನನಗೆ ಖಂಡಿತ ಅನಿಸುತ್ತದೆ. ಅಂದರೆ ಕಾಮ ಕ್ರೋಧ ಇಲ್ಲವಾದರೂ ಸತ್ತೇ ಸಾಯುತ್ತಾನೆ. ಯಾರು ಸಾವಿಲ್ಲದೆ ಬದುಕಲಾರರು. ಆದರೆ ಅಂಥವರು ಮಾಗಿದ ಹಣ್ಣು ಕೆಳಗೆ ಉದುರುವಂತೆ ಉದುರಿಹೋಗುತ್ತಾರೆ. ಅವರಿಗೆ ಯಾವ ಕಾಯಿಲೆಯೂ ಇಲ್ಲದ ಹಾಗೆ ಹೊರಟುಹೋಗುತ್ತಾರೆ. ಅಂಥ ಸ್ಥಿತಿ ನನಗೆ ಬರಲಿ ಎಂದು ನಾನು ಬಯಸಿದ್ದೇನೆ. ಇನ್ನೂ ಆ ಬಯಕೆ ಇದೆ. ಆದರೆ ಯಾರು ಬಲ್ಲರು? ಯಾವ ಹೊತ್ತಿಗೆ ಏನಾಗುತ್ತೋ" ಎಂದು ತಮ್ಮ ಅಳಲನ್ನು ವ್ಯಕ್ತಪಡಿಸಿದ್ದಾರೆ.

ಗಿರಿಧಾಮದಲ್ಲಿ ಪ್ರಥಮ ದಿವಸ

ದೀರ್ಘ ಪ್ರಯಾಣದಿಂದ ಬಳಲಿದ್ದ ಮಹಾತ್ಮರಿಗೆ ತಲೆನೋವು ಕಾಣಿಸಿತ್ತು. ಪರಿಹಾರಕ್ಕಾಗಿ ಪ್ರಕೃತಿ ಚಿಕಿತ್ಸಾ ವಿಧಾನದಂತೆ ಕೆಮ್ಮಣ್ಣಿನ ಕಟ್ಟನ್ನು ತಲೆಗೆ ಕಟ್ಟಿಕೊಂಡು ಸ್ವಲ್ಪ ವಿಶ್ರಾಂತಿ ಪಡೆದರು. ಮಧ್ಯಾಹ್ನ ಮೈಸೂರು ಸಂಸ್ಥಾನದ ಶಿಕ್ಷಣ ಅಧಿಕಾರಿ, ರಾಜಮಂತ್ರಿ ಪ್ರವೀಣ ಕೆ. ಮ್ಯಾಥಾನ್, ಕೋಲಾರದ ಜಿಲ್ಲಾಧಿಕಾರಿ ಮಹಮ್ಮದ್ ಜಹೀರುದ್ದೀನ್ ಮೇಕ್ಕೆ, ಮದರಾಸಿನ ಕೃಷಿ ಇಲಾಖೆಯ ಸಹಾಯಕ ರಂಗಾರೆಡ್ಡಿ ಅವರುಗಳು ಮಹಾತ್ಮರ ದರ್ಶನ ಪಡೆದರು. ಮ್ಯಾಥಾನ್ ಅವರೊಂದಿಗೆ ಪ್ರಾಥಮಿಕ ಶಾಲೆಗಳಲ್ಲಿ ಚರಕ ಶಿಕ್ಷಣವನ್ನು ಒದಗಿಸುವ ವಿಚಾರದಲ್ಲಿ ಗಾಂಧೀಜಿ ಚರ್ಚಿಸಿದರು. ಸದ್ಯದ ಮಟ್ಟಿಗೆ ಆ ಸುಧಾರಣೆಯನ್ನು ಉಪಕ್ರಮಿಸುವುದಾಗಿ ಮ್ಯಾಥಾನ್ ಅವರು ತಿಳಿಸಿದರು. ತೋಟಗಾರಿಕೆ ಮುಖ್ಯಸ್ಥರಾದ ಕೆ. ಸುಬ್ಬರಾವ್ ಅವರು, ಗಾಂಧಿ ಅವರ ಸೌಕರ್ಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು.

ಮಹಾತ್ಮರು ಅಂದು ಸಂಜೆ ಸ್ವಲ್ಪ ನಡೆದಾಡಿ, ನಂತರ ಏಳು ಗಂಟೆಗೆ ಸರಿಯಾಗಿ ಚಪ್ಪರದಲ್ಲಿ ಕೆಲವೇ ಜನರೊಂದಿಗೆ ಪ್ರಾರ್ಥನೆ ನಡೆಸಿದರು. ರಾತ್ರಿ ಕೊಠಡಿಯ ಹೊರಗಡೆ ಮಲಗಲು ಗಾಂಧೀಜಿ ನಿರ್ಧರಿಸಿದಾಗ ಅಲ್ಲಿದ್ದವರೆಲ್ಲರೂ "ಗಾಳಿಯ ರಭಸವು ಜಾಸ್ತಿ ಇದೆ, ಒಳಗಡೆಯೇ ಮಲಗಬೇಕು" ಎಂದರು. "ಹಾಗೆಯೇ ಆಗಲಿ" ಎಂದು ಮಗುವಿನ ಹಾಗೆ ಗಾಂಧಿ ಉತ್ತರಿಸಿದರು. ಕನ್ನಿಂಗ್‌ಹ್ಯಾಂ ಭವನದ ಹೊರಗಿನ ಕೊಠಡಿಗಳಲ್ಲಿ ಮಹದೇವ ದೇಸಾಯಿ, ರಾಜರಾಮ ಅಯ್ಯಂಗಾರ್ ಇನ್ನಿತರರು ವಾಸ್ತವ್ಯ ಹೂಡಿದ್ದರು. ಗಾಂಧೀಜಿ ಅವರು ಮಲಗುವ ಪೂರ್ವದ ಒಂದೂವರೆ ಗಂಟೆಗಳ ಕಾಲ ಯೋಗ ಸಾಧನೆ ಮತ್ತು ರೋಗ ನಿವಾರಣೆಗಳಿಗೆ ಇರುವ ಸಂಬಂಧ ಕುರಿತು ಪಂಡಿತ್ ತಾರಾನಾಥರೊಂದಿಗೆ ಚರ್ಚಿಸಿದ್ದರು. ಚಿಕ್ಕಬಳ್ಳಾಪುರ ಜನರು ಸಣ್ಣ ಪುಟ್ಟ ವಿಷಯಗಳಿಗೂ ಅಧಿಕ ಗಮನಕೊಡುತ್ತಿದ್ದರು. ಔಂದ್ ಸಂಸ್ಥಾನದಲ್ಲಿ

ಮಹಾ ಪಂಡಿತರಾಗಿದ್ದ ಶ್ರೀಪಾದ ಸಾತವಳೇಕರ್ ಅವರನ್ನು ಗಿರಿಧಾಮಕ್ಕೆ ಆಹ್ವಾನಿಸಿ ಗಾಂಧೀಜಿ ಪತ್ರ ಬರೆದರು. ಅಸ್ವಸ್ಥರಾಗಿದ್ದ ಕಾರಣ ಗಾಂಧಿ ಪ್ರಥಮ ಬಾರಿಗೆ ಗಿರಿಧಾಮದಲ್ಲಿ ಊರುಗೋಲನ್ನು ಉಪಯೋಗಿಸಲು ಪ್ರಾರಂಭಿಸಿದರು. ಎಲ್ಲಾ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಟಿ. ರಾಮಚಂದ್ರನನ್ನು ಗಾಂಧೀಜಿ ಪ್ರೀತಿಯಿಂದ 'ರಾಮ್‌ಜೀ' ಎಂದು ಕರೆಯುತ್ತಿದ್ದರು. ಗಿರಿಧಾಮಕ್ಕೆ ಬಂದವರು ಅಲ್ಲಿನ ವ್ಯವಸ್ಥೆಯ ಬಗ್ಗೆ ಗಾಂಧಿಯವರನ್ನು ಕೇಳಿದರೆ "ರಾಮ್‌ಜೀ ಕೊ ಪೂಚೋ" ಎಂದು ಹೇಳುತ್ತಿದ್ದರಂತೆ.

ಗಾಂಧಿ ಅವರಿಗೆ ಪ್ರತಿ ದಿನ ಮೇಕೆ ಹಾಲು ಅಗತ್ಯವಿದ್ದರಿಂದ ಮಿರ್ಜಾ ಇಸ್ಮಾಯಿಲ್ ಅವರು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಪತ್ರ ಬರೆದು ಅವರ ಜಿಲ್ಲೆಗಳಲ್ಲಿ ಉತ್ತಮ ಜಾತಿಯ ಹಾಲು ಕರೆಯುವ ಮೇಕೆಗಳನ್ನು ನಂದಿ ಗಿರಿಧಾಮಕ್ಕೆ ಕಳುಹಿಸಲು ಮೊದಲೇ ತಿಳಿಸಿದ್ದರು. ಈ ನಿರೂಪದಂತೆ ಹಲವಾರು ಮೇಕೆಗಳು ಗಿರಿಧಾಮಕ್ಕೆ ಬಂದಿದ್ದವು. ಸುಲ್ತಾನ್‌ಪೇಟೆಯ ಕೆಲವು ಹುಡುಗರನ್ನು ಮೇಕೆಗಳ ಉಸ್ತುವಾರಿಗೆ ನೇಮಿಸಿಕೊಳ್ಳಲಾಗಿತ್ತು.

ಉತ್ಸಾಹಿ ತರುಣರು

ಸೇವಾದಳದ ತಂಡದಲ್ಲಿ ಬೆಂಗಳೂರಿನ ಬಾಲಕ ನುಗ್ಗೇಹಳ್ಳಿ ಗೋವರ್ಧನ್ ಇದ್ದನು. ಗೋವರ್ಧನ್ ಕೆಲಸಗಳನ್ನು ಆಸಕ್ತಿಯಿಂದ ಮಾಡುತ್ತಿದ್ದ. ಆದಕಾರಣ ಅವನನ್ನು ಗಾಂಧಿ ಅವರ ಸಹಾಯಕ್ಕಾಗಿ ನೇಮಿಸಲಾಗಿತ್ತು. ಕಸ್ತೂರಿಬಾ ಆತನನ್ನು "ಗೋವರ್ಧನ್" ಎಂದೇ ಬಹಳ ಪ್ರೀತಿಯಿಂದ ಕರೆಯುತ್ತಿದ್ದರು. ಈತ ಬೆಳಗಿನ ಜಾವ ಮೂರು ಗಂಟೆಗೆ ಲಾಟೀನ್ ಹಿಡಿದುಕೊಂಡು ಸ್ಯಾಂಕಿ ಲಾಡ್ಜ್ ಬಳಿಯ ಮೇಕೆಗಳ ಕೊಟ್ಟಿಗೆಯ ಕುರುಬನಿಂದ ಹಾಲನ್ನು ಹಿಂಡಿಸಿ ಗಾಂಧೀಜಿ ಅವರಿಗೆ ತಂದು ಕೊಡುತ್ತಿದ್ದ. ನಂತರ ಸ್ನಾನಕ್ಕೆ ಅಣಿ ಮಾಡುವುದು ಹಲ್ಲು ಉಜ್ಜಲು ಬೇವಿನ ಕಡ್ಡಿಗಳನ್ನು ಅಣಿಮಾಡುವುದೂ ಸೇರಿದಂತೆ

ಹಲವಾರು ಕೆಲಸಗಳನ್ನು ಮಾಡುತ್ತಿದ್ದ. ಮನೆಯವರೆಲ್ಲರೂ ನಗರದಿಂದ ಆಗಾಗ್ಗೆ ನಂದಿ ಗಿರಿಧಾಮಕ್ಕೆ ಆಗಮಿಸಿ ಗಾಂಧಿ ಅವರ ದರ್ಶನ ಪಡೆದು ಹೋಗುತ್ತಿದ್ದರು. ಗಾಂಧಿ ಅವರ ದರ್ಶನಕ್ಕಾಗಿ ಒಂದು ಮಧ್ಯಾಹ್ನ ನುಗ್ಗೇಹಳ್ಳಿ ಮನೆಯವರೆಲ್ಲರೂ ಗೋವರ್ಧನ್ ಜೊತೆ ಬಂದಿದ್ದರು. ಮಾತಿನ ನಡುವೆ ಗಾಂಧೀಜಿ ಗೋವರ್ಧನನ ತಾಯಿಯನ್ನು 'ನೀವು ರೇಷ್ಮೆ ಸೀರೆ ಏಕೆ ಉಟ್ಟಿದ್ದೀರಿ?' ಎಂದು ಪ್ರಶ್ನಿಸಿದರು. 'ಅದು ಮಡಿಗೆ ಬರುತ್ತದೆ' ಎಂದರು. ಅದಕ್ಕೆ ಗಾಂಧೀಜಿ ನಗುತ್ತಾ 'ರೇಷ್ಮೆ ಸೀರೆಯನ್ನು ಸಾವಿರಾರು ರೇಷ್ಮೆ ಹುಳುಗಳನ್ನು ಸಾಯಿಸಿ ತಯಾರು ಮಾಡುತ್ತಾರೆ. ಇದರಲ್ಲಿ ಹಿಂಸೆಯೇ ಹೆಚ್ಚು, ಮಡಿ ಎಲ್ಲಿಂದ ಬಂತು, ನೀವು ಖಾದಿಯನ್ನೇ ಧರಿಸಿರಿ, ಅದು ಹೆಚ್ಚು ಪವಿತ್ರ ಆದೀತು' ಎಂದು ಹೇಳಿದರು. ಅವರ ಮನೆ ಶೇಷಾದ್ರಿಪುರದಲ್ಲಿತ್ತು. ಮನೆಯ ಮೇಲೆ ನಿರಂತರವಾಗಿ ಕಾಂಗ್ರೆಸ್ ಬಾವುಟ ಹಾರಾಡುತ್ತಿದ್ದುದರಿಂದ "ಬಾವುಟದ ಮನೆ" ಎಂದು ಹೆಸರು ಪಡೆದಿತ್ತು. ಅವರ ಮನೆಯಲ್ಲಿ ಯಾರು ಕಾಫಿ, ಟೀ ಸಹ ಕುಡಿಯುತ್ತಿರಲಿಲ್ಲ. ಎಲ್ಲರೂ ನೂಲುತ್ತಿದ್ದವರೆ, ಯಾರು ಚೆನ್ನಾಗಿ ನೂಲುತ್ತಾರೆ, ಹೆಚ್ಚು ನೂಲುತ್ತಾರೆ ಎಂದು ಅವರವರಲ್ಲಿಯೇ ಪೈಪೋಟಿ ನಡೆಯುತ್ತಿತ್ತು.

ಗೋವರ್ಧನ್ ಅವರ ತಂದೆ ನರಸಿಂಹ ಅಯ್ಯಂಗಾರ್ ಅವರು ಗಿರಿಧಾಮಕ್ಕೆ ಆಗಮಿಸಿ ಗಾಂಧಿ ಅವರನ್ನು ಭೇಟಿ ಮಾಡಿದಾಗ "ಗೋವರ್ಧನನನ್ನು ನಮ್ಮ ಆಶ್ರಮಕ್ಕೆ ಕಳುಹಿಸಿಕೊಡಿ" ಎಂದು ಕೇಳಿದರಂತೆ. ಅದಕ್ಕೆ ನರಸಿಂಹ ಅಯ್ಯಂಗಾರ್ ಅವರು "ಓದು ಮುಗಿಯಲಿ, ಮೆಟ್ರಿಕ್ಯುಲೇಶನ್ ಆಗಲಿ" ಎಂದರಂತೆ.

ನ್ಯಾಷನಲ್ ಹೈಸ್ಕೂಲಿನ ಅಧ್ಯಾಪಕರು "ಬ್ರಿಟಿಷರ ಅಧೀನದಲ್ಲಿ ಕೆಲಸಮಾಡುವುದು ಗುಲಾಮಗಿರಿ ಒಪ್ಪಿಕೊಂಡಂತೆ, ನಾವು ಸ್ವತಂತ್ರವಾಗಿ ಕೆಲಸ ಮಾಡಿ ನಮ್ಮ ಬುದ್ಧಿ ಶಕ್ತಿಯಿಂದ ನಮ್ಮ ಕಾಲಿನ ಮೇಲೆ ನಾವು ನಿಂತುಕೊಳ್ಳಬೇಕು" ಎಂದು ಹೇಳುತ್ತಿದ್ದರು. ಈ ಕಾರಣಕ್ಕಾಗಿಯೇ

ರಾಷ್ಟ್ರೀಯ ಶಾಲೆಗಳು ದೇಶದಾದ್ಯಂತ ಆರಂಭವಾದವೆಂಬುದು ಉಲ್ಲೇಖಾರ್ಹ ವಿಚಾರವಾಗಿದೆ. ಈ ಪರಿಕಲ್ಪನೆಯಲ್ಲಿಯೇ ದೇಶೀಯ ವಿದ್ಯಾಶಾಲೆ (National High School) 1917ರಲ್ಲಿ ಬೆಂಗಳೂರಿನಲ್ಲಿ ಆರಂಭವಾಗಿದ್ದು ಗಮನಾರ್ಹವಾದ ಸಂಗತಿಯಾಗಿದೆ.

ಹೋಟೆಲ್ ರಾಮಚಂದ್ರ ಅಯ್ಯರ್

ನಗರದಲ್ಲಿನ ದಿವಾನ್ ಶೇಷಾದ್ರಿಅಯ್ಯರ್ ಅವರ ಬಂಗಲೆಯಾಗಿದ್ದ ಕುಮಾರಕೃಪಾ ಭವನದಲ್ಲಿ ಶಾಮಅಯ್ಯರ್ ಅವರು ಬಾಣಸಿಗರಾಗಿದ್ದರು. ಅವರನ್ನು 1915ರಲ್ಲಿ ದಿವಾನ್ ವಿಶ್ವೇಶ್ವರಯ್ಯನವರು ನಂದಿ ಗಿರಿಧಾಮದಲ್ಲಿ ಸಸ್ಯಾಹಾರಿ ಹೋಟೆಲನ್ನು, ಸ್ಯಾಂಕಿ ಲಾಡ್ಜ್‌ನಲ್ಲಿ ಆರಂಭಿಸಲು ಕರೆಯಿಸಿಕೊಂಡಿದ್ದರು. ಅನಾರೋಗ್ಯದ ಕಾರಣದಿಂದಾಗಿ ಶಾಮ ಅಯ್ಯರ್ 1923ರಲ್ಲಿ ನಂದಿ ಗಿರಿಧಾಮದಲ್ಲಿದ್ದ ರಾಜವೈದ್ಯ ಪಂಡಿತ್ ನಾರಾಯಣ ಅಯ್ಯರ್ ಅವರಿಗೆ ಹೋಟೆಲ್ ವಹಿಸಿಕೊಟ್ಟು ತಮ್ಮ ಸ್ವಂತ ಊರಿಗೆ ಹೊರಟರು. ನಾರಾಯಣ ಅಯ್ಯರ್ ಆಯುರ್ವೇದ ಪಂಡಿತರಾಗಿದ್ದ ಕಾರಣ ಸುಲ್ತಾನ್‌ಪೇಟೆಯ ಪಂಡಿತ್ ತತ್ವವಾದಿ ಸುಬ್ಬಣ್ಣಾಚಾರ್ಯರ ಜೊತೆಗೂಡಿ ಆಯುರ್ವೇದ ವೈದ್ಯಶಾಲೆಯನ್ನೂ ಗಿರಿಧಾಮದಲ್ಲಿ ತೆರೆದರು ಮತ್ತು ಪುತ್ರ ರಾಮಚಂದ್ರ ಅಯ್ಯರ್‌ರೊಂದಿಗೆ ಹೋಟಲನ್ನೂ ನಡೆಸುತ್ತಿದ್ದರು. ಗಾಂಧೀಜಿ ಗಿರಿಧಾಮದಲ್ಲಿದ್ದ ಸಮಯದಲ್ಲಿ ಬರುತ್ತಿದ್ದ ಹೆಚ್ಚಿನ ಜನರು ಅಯ್ಯರ್ ಹೋಟೆಲಿಗೇ ಬರುತ್ತಿದ್ದರು. ಆ ಕಾರಣದಿಂದ ಕಾಫಿಗೆ ಹಸುವಿನ ಹಾಲು ಸಾಕಾಗುತ್ತಿರಲಿಲ್ಲ, ಹೋಟೆಲ್ ಬಳಿ ಮೇಕೆಗಳ ಕೊಟ್ಟಿಗೆ ಇತ್ತು. ಹೋಟೆಲಿನಲ್ಲಿ ಉಳಿದುಬಿಡುತ್ತಿದ್ದ ತಿಂಡಿ ಪದಾರ್ಥಗಳನ್ನು ರಾತ್ರಿ ವೇಳೆ ಮೇಕೆಗಳನ್ನು ನೋಡಿಕೊಳ್ಳುತ್ತಿದ್ದ ಹುಡುಗರಿಗೆ ಕೊಟ್ಟುಬಿಡುತ್ತಿದ್ದರು. ಗಾಂಧಿ ಅವರಿಗೆ ಪ್ರತಿದಿನ ಬೇಕಾಗಿದ್ದದ್ದು ಎರಡು ಅಥವಾ ಮೂರು ಪಾವು ಹಾಲು ಮಾತ್ರ, ಆ ಹುಡುಗರು ಅಷ್ಟನ್ನು ಮಾತ್ರ ಗಾಂಧೀಜಿಗೆ ಕಳುಹಿಸಿ ಉಳಿದ ಹಾಲನ್ನು ಗುಟ್ಟಾಗಿ ಹೋಟೆಲಿಗೆ ಕೊಟ್ಟುಬಿಡುತ್ತಿದ್ದರು.

ಅಯ್ಯರ್ ಈ ಹಾಲನ್ನೇ ಕಾಫಿಗೆ ಉಪಯೋಗಿಸಲು ಪ್ರಾರಂಭಿಸಿದರು. ಹೋಟೆಲಿಗೆ ಬರುತ್ತಿದ್ದವರೆಲ್ಲರೂ ಮೇಕೆ ಹಾಲಿನ ಕಾಫಿಯನ್ನು "ಚೆನ್ನಾಗಿದೆ" ಎಂದು ಕುಡಿಯುತ್ತಿದ್ದರು, ಕಾಫಿ ಕುಡಿಯುವ ಚಟವಿದ್ದ ರಾಜಗೋಪಾಲಾಚಾರಿಯವರು ಪ್ರತಿದಿನ ಏಳೆಂಟು ಸಲ ಬಂದು ಈ ಕಾಫಿಯನ್ನು ಕುಡಿಯುತ್ತಿದ್ದರು. ಇದು ಮೇಕೆ ಹಾಲಿನ ಕಾಫಿ ಎಂದು ರಾಜಾಜಿಯವರಿಗೆ ತಡವಾಗಿ ತಿಳಿಯಿತು. ನಂತರ ರಾಜಾಜಿ; ಗಾಂಧಿ ಅವರಿಗೆ ಈ ವಿಷಯವನ್ನು ತಿಳಿಸಿದರು. ಇದಕ್ಕೆ ಗಾಂಧಿ "ನನ್ನಿಂದ ಎಲ್ಲರೂ ಮೇಕೆ ಹಾಲು ಕುಡಿಯುವಂತಾಯಿತಲ್ಲ" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ರಾಜಾಜಿಯವರ ಮಗಳು ಲಕ್ಷ್ಮಿ ನಂತರ ಗಿರಿಧಾಮಕ್ಕೆ ಆಗಮಿಸಿದಳು.

ವೈದ್ಯರ ತಂಡ

ಮಹಾತ್ಮರ ಗಿರಿಧಾಮದ ವಾಸ್ತವ್ಯದ ವೇಳೆಯಲ್ಲಿ ಕ್ರಮೇಣ ಬಂದು ಹೋಗುವವರ ಸಂಖ್ಯೆ ಜಾಸ್ತಿಯಾಗಿ ಸಂಭಾಷಣೆ, ಚರ್ಚೆ, ಗದ್ದಲ ಹೆಚ್ಚುವುದರೊಂದಿಗೆ, ಮಹಾತ್ಮರ ದೇಹಾಲಸ್ಯವೂ ಹೆಚ್ಚಿತು. ಇದನ್ನು ಕಂಡು ಹಂಜಾ ಹುಸೇನರು ನಗರದ ವಿಕ್ಟೋರಿಯ ಆಸ್ಪತ್ರೆಯಲ್ಲಿ ಪ್ರಸಿದ್ಧ ವೈದ್ಯರುಗಳಾಗಿದ್ದ ಡಾ. ಎನ್. ಎಸ್. ಸುಬ್ಬರಾವ್ ಮತ್ತು ಡಾ. ವೈ. ಎನ್. ಕೃಷ್ಣಮೂರ್ತಿ ರಾಯರನ್ನು ಕರೆತಂದರು. ಈ ವೈದ್ಯರು ಕೆಲ ದಿನಗಳ ನಂತರ ಗಿರಿಧಾಮಕ್ಕೆ ನಡೆದುಕೊಂಡು, ಹತ್ತಿ ಹೋಗಿ ಬರಲು ಕಷ್ಟವಾಗುತ್ತದೆಂದು ಗಾಂಧಿ ಅವರನ್ನೇ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲು ಗುಟ್ಟಾಗಿ ಸನ್ನಾಹ ನಡೆಸಿದರು. ಆದರೆ ಗಾಂಧೀಜಿ ಇದಕ್ಕೆ ಸಮ್ಮತಿಸಲಿಲ್ಲ.

ನಿವೃತ್ತರಾಗಿದ್ದ ಡಾ. ಸಿ. ಬಿ. ರಾಮರಾಯರು ಹಾಗು ವೃದ್ದರಾಗಿದ್ದ ಡಾ. ಆರುಮುಗಂ ಮೊದಲಿಯಾರ್ ಆಗಾಗ್ಗೆ ಗಾಂಧಿ ಅವರನ್ನು ಪರೀಕ್ಷಿಸಲು ನಗರದಿಂದ ಬರುತ್ತಿದ್ದರು. ಮೊದಲ ಸಲ ಬಂದಾಗ ಗಾಂಧಿ ಅವರಿಗೆ ಈ ರೀತಿ ಸಲಹೆ ನೀಡಿದರು. "ನಿಮಗೆ ಈಗ ಆರೋಗ್ಯ

ಚೆನ್ನಾಗಿದೆ, ನೀವು ಎಷ್ಟು ಬೇಕಾದರು ಓಡಾಡಬಹುದು, ನಿಮಗೆ ಇಷ್ಟ ಬಂದ ಕೆಲಸ ಮಾಡಬಹುದು. ನಿಮಗೆ ಆರೈಕೆ ಮಾಡುವವರು ಯಾರು ಅಡ್ಡಿ ಮಾಡಬಾರದು, ಯಾರು ಅಡ್ಡಿ ಮಾಡುತ್ತಾರೋ ಅವರಿಗೆ ಮೊದಲು ಚಿಕಿತ್ಸೆ ಆಗಬೇಕು" ಎಂದರು. ಈ ಮಾತಿನಿಂದ ಗಾಂಧೀಜಿಗೆ ಇನ್ನಷ್ಟು ಶಕ್ತಿಬಂದ ಹಾಗಾಯಿತು. ಬರುವ ಎಲ್ಲಾ ವೈದ್ಯರೊಡನೆ ಗಾಂಧೀಜಿ ಸಂತೋಷದಿಂದ ಚರ್ಚೆ ನಡೆಸುತ್ತಿದ್ದರು. ಚಿಕ್ಕಬಳ್ಳಾಪುರದ ಲಂಡನ್ ಮಿಷನ್ ಆಸ್ಪತ್ರೆಯ ಡಾ. ಥಾಮ್ಸನ್ ಎರಡು ಬಾರಿ ಆಗಮಿಸಿದ್ದರು. ಭಾರತದ ಪ್ರಸಿದ್ಧ ಶಸ್ತ್ರ ವೈದ್ಯರಾಗಿದ್ದ ಡಾ. ಮುಖ್ತಾರ್ ಅಹಮದ್ ಅನ್ಸಾರಿ ದೆಹಲಿಯಿಂದ ಪತ್ರಗಳ ಮುಖೇನ ಗಾಂಧಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿಕೊಂಡು ಅಲ್ಲಿಂದಲೇ ಸಲಹೆಗಳನ್ನು ಕೊಡುತ್ತಿದ್ದರು.

ರಾತ್ರಿ ವೇಳೆ ಗಾಂಧೀಜಿ ಕಸ್ತೂರಿಬಾ ಅವರೊಡನೆ ಹಾಸ್ಯಮಿಶ್ರಿತವಾಗಿ ಮಾತನಾಡುತ್ತಾ ತಡವಾಗಿ ಮಲಗುತ್ತಿದ್ದರು. ಗಿರಿಧಾಮಕ್ಕೆ ಬರುತ್ತಿದ್ದ ಜನರು ತಾವೇ ಬೆಳೆಯುತ್ತಿದ್ದ ಹಣ್ಣುಗಳನ್ನು ಮತ್ತು ಕಡಲೆಕಾಯಿಯನ್ನು ತಂದುಕೊಡುತ್ತಿದ್ದರು. ಪ್ರತಿ ದಿನ ಎಲ್ಲಾ ವರ್ಗದ ಜನರು ಬರುತ್ತಿದ್ದರು. ಪ್ರತಿ ವಾರವೂ ಸ್ವಯಂ ಸೇವಕರ ಹೊಸ ತಂಡ ಆಗಮಿಸಿ ಹಳೆಯ ತಂಡಕ್ಕೆ ವಿರಾಮ ದೊರಕಿಸಿಕೊಡುತ್ತಿದ್ದರು. ಗಾಂಧೀಜಿ ಒಂದು ಕ್ಷಣವೂ ಸುಮ್ಮನೆ ಇರುತ್ತಿರಲಿಲ್ಲ. ಯಾವುದಕ್ಕೂ ಕೋಪಗೊಳ್ಳುತ್ತಿರಲಿಲ್ಲ. ಎಲ್ಲ ಕೆಲಸ ಅವರೇ ಮಾಡಿಕೊಳ್ಳುತ್ತಿದ್ದರು.

ನಿಟ್ಟೂರು ಶ್ರೀನಿವಾಸರಾಯರು

ನಿಟ್ಟೂರು ಶ್ರೀನಿವಾಸರಾಯರು ಬಾಲಕರಾಗಿದ್ದಾಗ ಗಾಂಧಿ ಅವರ ಬಗ್ಗೆ ವೃತ್ತಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಾರ್ತೆಯೊಂದನ್ನು ಓದಿ ಅವರ ಪ್ರಭಾವಕ್ಕೆ ಒಳಗಾದವರಾಗಿದ್ದಾರೆ. ಗಾಂಧೀಜಿ ನಂದಿಯಲ್ಲಿದ್ದಷ್ಟು ದಿವಸವೂ ಅವರ ನಿಕಟ ಸಂಪರ್ಕ ಹೊಂದಿದ್ದರು. ಆಗ ಅವರ ವಯಸ್ಸು 24 ಮಾತ್ರ ಆಗಿತ್ತು.

ಪ್ರಚಾರ

ಗಾಂಧಿ ಅವರ ಆಪ್ತ ಕಾರ್ಯದರ್ಶಿ ಮಹಾದೇವ ದೇಸಾಯಿ ಗಾಂಧಿ ಅವರ ಆರೋಗ್ಯದ ಹಾಗೂ ಗಿರಿಧಾಮದಲ್ಲಿ ನಡೆಯುತ್ತಿದ್ದ ಚಟುವಟಿಕೆಗಳ ಬಗ್ಗೆ "ಯಂಗ್ ಇಂಡಿಯಾ" ವಾರಪತ್ರಿಕೆಯಲ್ಲಿ ಪ್ರತಿ ವಾರವೂ "ವೀಕ್ಲಿ ಲೆಟರ್ಸ್" ಶಿರೋನಾಮೆಯಲ್ಲಿ ಬರೆಯುತ್ತಿದ್ದರು. ತಿ. ತಾ. ಶರ್ಮರ ವಿಶ್ವಕರ್ನಾಟಕ ವಾರಪತ್ರಿಕೆಯಲ್ಲಿ ವಿವರವಾಗಿ ವರದಿಗಳು ಪ್ರಕಟವಾಗುತ್ತಿತ್ತು. ನಗರದ ಬಳೇಪೇಟೆಯಲ್ಲಿ ಜಮಖಂಡಿ ಭೀಮರಾಯರು ಸ್ವದೇಶಿ ಪರ್‌ಫ್ಯೂಮರಿ ವರ್ಕ್ಸ್ ಎಂಬ ಹೆಸರಿನ ಅಂಗಡಿಯನ್ನು ಈಗಿನ ಉಡುಪಿ ಕೃಷ್ಣಭವನ್ ಪಕ್ಕದಲ್ಲಿ ತೆರೆದಿದ್ದರು. ಈ ಅಂಗಡಿ ಕಾಂಗ್ರೆಸ್ ಕಚೇರಿಯೂ ಆಗಿತ್ತು. ಈ ಕಟ್ಟಡದ ಮುಂದೆ ಕಪ್ಪು ಹಲಗೆಯ ಮೇಲೆ "ದಿನದ ವಾರ್ತೆ" ಎಂಬ ತಲೆ ಬರಹದಡಿ ಗಾಂಧಿ ಅವರ ದೇಹಸ್ಥಿತಿ ಮತ್ತು ಗಾಂಧಿ ಅವರಿಗೆ ಸಂಬಂಧಪಟ್ಟ ಇತರ ಸುದ್ದಿಗಳನ್ನು ಭೀಮರಾಯರು ಸಾರ್ವಜನಿಕರ ತಿಳುವಳಿಕೆಗಾಗಿ ಪ್ರತಿ ದಿನ ಸೀಮೆ ಸುಣ್ಣದಿಂದ ಬರೆಯುತ್ತಿದ್ದರು. ಆ ರಸ್ತೆಯಲ್ಲಿ ಹೋಗುವವರೆಲ್ಲರೂ ಸ್ವಲ್ಪ ಹೊತ್ತು ಅಲ್ಲಿಯೇ ನಿಂತು ಸುದ್ದಿ ಓದಿಕೊಂಡು ಮುಂದಕ್ಕೆ ಹೋಗುತ್ತಿದ್ದರು.

ಪ್ರಾರ್ಥನೆ

ಗಾಂಧೀಜಿ ಅವರು ಗಿರಿಧಾಮದಲ್ಲಿ ಇದ್ದಷ್ಟು ದಿನಗಳ ಸಂಜೆಯ ಸಾಮೂಹಿಕ ಪ್ರಾರ್ಥನೆಗೆ ಸುಮಾರು ಇನ್ನೂರರಿಂದ ಮುನ್ನೂರು ಜನ (ಮಹಿಳೆಯರು ಸೇರಿದಂತೆ) ಸೇರುತ್ತಿದ್ದರು. ಯಾರು ಬೇಕಾದರೂ ಪ್ರಾರ್ಥನೆಯಲ್ಲಿ ಭಾಗವಹಿಸಬಹುದಾಗಿತ್ತು. ಪ್ರತಿ ದಿನ ಮೂರ್ನಾಲ್ಕು ಜನ ಮಹಿಳೆಯರು ಒಂದೊಂದು ಭಾಷೆಯಲ್ಲಿ ಹಾಡುಗಳನ್ನು ಹಾಡುತ್ತಿದ್ದರು. ಪಂಡಿತ ತಾರಾನಾಥರು ಬೆಟ್ಟದಲ್ಲಿ ಇದ್ದಷ್ಟು ದಿನವೂ ಕಬೀರದಾಸರ ದೋಹೆಗಳನ್ನು ಹಾಡುತ್ತಿದ್ದರು. ಒಂದು ದಿನ ಬೆಂಗಳೂರು ಜಿಲ್ಲಾ ನ್ಯಾಯಾಧೀಶರಾಗಿದ್ದ

ಎ. ಕೆ. ಸೈಯದ್ ತಾಜ್‌ಪೀರಾನ್ ಅವರು ಕುರಾನಿನ ಶ್ಲೋಕಗಳನ್ನು ಹಾಡಿ ಇಂಗ್ಲಿಷ್‌ನಲ್ಲಿ ಅರ್ಥ ತಿಳಿಸಿದರು. ಇದೇ ರೀತಿ ಒಂದು ಬಾರಿ ರೆವರೆಂಡ್ ವಾಲ್ಡನ್‌ರು ಇಂಗ್ಲಿಷ್‌ನಲ್ಲಿ ಬೈಬಲ್ ಪ್ರಾರ್ಥನೆ ಸಲ್ಲಿಸಿ "ಜಾತಿ ಮತ್ತು, ವರ್ಣಭೇದಗಳಿಲ್ಲದೆ ಭಕ್ತರೆಲ್ಲರೂ ಕೂಡಿ ದೇವರನ್ನು ಸ್ಮರಿಸಲು ಸೇರುವ ಈ ಬಯಲೇ ದಿವ್ಯ ದೇವಾಲಯ" ಎಂದು ವಿವರಿಸಿದರು. ಗಾಂಧಿ ಅವರ ಇಷ್ಟದಂತೆ ಗೋವರ್ಧನನ ತಂಗಿ ಮತ್ತು ಅತ್ತಿಗೆಯವರು ಸೇರಿ ಸಂತ ನಂದನಾರ್ ಅವರ ಚಿದಂಬರಂ ಎಂಬ ತಮಿಳು ಗೀತೆಯನ್ನು ಹಾಡಿದರು. ಈ ರೀತಿ ಒಂದು ಗಂಟೆ ಕಾಲ ಪ್ರತಿ ದಿನ ಯಾರಾದರೂ ದೇವರ ನಾಮಗಳನ್ನೋ, ರಾಮ ಸ್ತೋತ್ರಗಳನ್ನೋ ಹಾಡುತ್ತಿದ್ದರು. ಈ ಪ್ರಾರ್ಥನಾ ಸಭೆಯ ಕೊನೆಯಲ್ಲಿ ಗಾಂಧೀಜಿ ಹಿಂದಿಯಲ್ಲಿ ಅಥವಾ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದರು. ಇವರು ಮಾತನಾಡಿದ್ದನ್ನು ಗಂಗಾಧರರಾಯರು ಕನ್ನಡಕ್ಕೆ ಅನುವಾದಿಸಿ ತಿಳಿಸುತ್ತಿದ್ದರು. ಬಂದವರು ಯಾರಾದರೂ ಕನ್ನಡದಲ್ಲಿ ಮಾತನಾಡಿದರೆ ಅದನ್ನು ಅವರು ಅನುವಾದಿಸಿ ಗಾಂಧಿ ಅವರಿಗೆ ಕನ್ನಡದಲ್ಲಿ ವಿವರಿಸುತ್ತಿದ್ದರು.

ಬೆಂಗಳೂರಿನ ಒಬ್ಬ ವಕೀಲರು ಹಾಗೂ ಇಬ್ಬರು ಇಂಜಿನಿಯರ್ ಗಿರಿಧಾಮದಲ್ಲಿ ಬಹಳ ದಿವಸಗಳಿಂದ ವಿಶ್ರಮಿಸುತ್ತಿದ್ದರು. ಅವರ ಪತ್ನಿ ಪ್ರತಿನಿತ್ಯ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ಪಿಟೀಲು ನುಡಿಸುತ್ತಾ ಕನ್ನಡದಲ್ಲಿ ಹಾಡುತ್ತಿದ್ದರು. ಇವರು ಅಕಸ್ಮಾತ್ತಾಗಿ ಒಂದು ದಿನ ಪ್ರಾರ್ಥನೆಗೆ ಬರಲಿಲ್ಲ. ಗಾಂಧೀಜಿ "ನಿನ್ನೆ ಯಾಕೆ ಬರಲಿಲ್ಲ" ಎಂದು ಕೇಳಿದಾಗ "ಆರೋಗ್ಯ ಸರಿಯಿರಲಿಲ್ಲ" ಎಂದು ಉತ್ತರಿಸಿದರು. ಅದಕ್ಕೆ ಗಾಂಧೀಜಿ "ಇಂತಹ ಸ್ಥಳದಲ್ಲಿಯೂ ನಿಮ್ಮ ಆರೋಗ್ಯ ಕೆಡಬೇಕೆ?" ಎಂದು ನಕ್ಕರು.

ಒಂದು ದಿನ ಸಂಜೆ ಮಳೆ ಬಂದುದರಿಂದ ಪ್ರಾರ್ಥನಾ ಸಭೆ ಭವನದ ಒಳಗೆ ನಡೆಯಿತು. ಅಂದು ಆ ಮಹಿಳೆಯರು ಬಾಲಕಾಂಡದ ಪ್ರಥಮ ಸರ್ಗದ ಕೆಲವು ಶ್ಲೋಕಗಳನ್ನು ಹಾಡಿ ನಿಲ್ಲಿಸಿದಾಗ

ಗೃಹಸ್ಥರೊಬ್ಬರು "ಮುಂದಕ್ಕೆ ಹಾಡಬೇಕು" ಎಂದು ಕೇಳಿಕೊಂಡರು ಕಡೆಯವರೆಗೆ ಅನುಷ್ಟುಪ್ ಛಂದಸ್ಸಿನ ನೂರು ಶ್ಲೋಕಗಳನ್ನು ಆನಂದವಾಗಿ ಸ್ವರವೆತ್ತಿ ಹಾಡಿದರು. "ಅತ್ಯದ್ಭುತ" ಎಂದರು ಗಾಂಧೀಜಿ.

ಮತ್ತೊಂದು ದಿನ ಸಂಜೆ ಗ್ರಾಮಾಸ್ಥರೊಬ್ಬರು ಮರದ ಕೆಳಗೆ ಕರ್ಪೂರ ಹಚ್ಚುತ್ತಿದ್ದ. ಒಬ್ಬರು ಯಾಕಯ್ಯ ಎಂದು ಕೇಳಲು "ಕರ್ಪೂರ ಹಚ್ಚಿ ನಮಸ್ಕಾರ ಹಾಕಿ ಗಾಂಧಿ ಅವರ ದರ್ಶನ ತಗೋಬೇಕು ಬುದ್ಧಿ, ಮಹಾತ್ಮರು ಎಲ್ಲಿದ್ದಾರೆ ಎಂದು ಕೇಳಿಕೊಂಡು ಎಷ್ಟೊಂದು ಜನ ಬರುತ್ತಿದ್ದಾರೆ" ಎಂದು ಭಕ್ತಿಭಾವದಿಂದ ನುಡಿದನು.

ಪ್ರಕೃತಿ ಚಿಕಿತ್ಸೆ

ಪ್ರಕೃತಿ ಚಿಕಿತ್ಸೆಯನ್ನು ಅವಲಂಬಿಸಿದ ಗಾಂಧೀಜಿ ನಿತ್ಯ ಬೆಳಗ್ಗೆ ಕುಡಿಯುತ್ತಿದ್ದ ಮೇಕೆ ಹಾಲಿಗೆ ಬಲಿತ ಬೇವಿನ ಹತ್ತು ಎಲೆಗಳ ರಸವನ್ನು ಬೆರೆಸಿ ಕುಡಿಯುತ್ತಿದ್ದರು. ಮೇಕೆ ಹಾಲಿಂದಲೇ ಬೆಣ್ಣೆಯನ್ನು ತೆಗೆದು ಉಪಯೋಗಿಸುತ್ತಿದ್ದರು, ಬ್ರೆಡ್ ಸಹ ಈ ಹಾಲಿನೊಂದಿಗೆ ಸೇವಿಸುತ್ತಿದ್ದರು. ಬೆಳ್ಳುಳ್ಳಿಯನ್ನು ಹೆಚ್ಚಿಗೆ ಸೇವಿಸುತ್ತಿದ್ದರು.

ಹಠಯೋಗದಲ್ಲಿ ಒಂದಾದ ನೇತಿ ಪದ್ಧತಿಯನ್ನು ಪ್ರತಿ ಭಾನುವಾರ ಅನುಸರಿಸುತ್ತಿದ್ದರು. ಅಂದರೆ ಶುಭ್ರವಾದ ಬಟ್ಟೆಯ ಎಳೆಯನ್ನು ಮೂಗಿನ ಎಡ ರಂಧ್ರದಲ್ಲಿ ಒಳಬಿಟ್ಟು ಬಲರಂಧ್ರದಿಂದ ಹೊರ ತೆಗೆದು ಶುದ್ಧಿ ಮಾಡಿಕೊಳ್ಳುವುದು, ರಕ್ತದೊತ್ತಡ ಕಡಿಮೆ ಮಾಡಿಕೊಳ್ಳಲು ಶೀರ್ಷಾಸನ ಮಾಡುತ್ತಿದ್ದರು. ಮಧ್ಯಾಹ್ನ ಒಂದೂವರೆ ಗಂಟೆ ಕಾಲ ತಲೆಗೆ ಮಣ್ಣಿನ ಕಟ್ಟನ್ನು ಕಟ್ಟಿಕೊಂಡು ಮಲಗುತ್ತಿದ್ದರು. ಈ ಎಲ್ಲಾ ಚಿಕಿತ್ಸಾಕ್ರಮಗಳ ಮೇಲ್ವಿಚಾರಣೆ ಪಂಡಿತ ತಾರಾನಾಥರ ನೇತೃತ್ವದಲ್ಲಿ ನಡೆಯುತ್ತಿತ್ತು, ಪುಣೆ ಬಳಿ ಲೋನವಾಲದಲ್ಲಿನ ಕೈವಲ್ಯಧಾಮದಲ್ಲಿ ಭಾರತದ ಪ್ರಸಿದ್ಧ ಹಠಯೋಗಿವರ್ಯರಾದ ಸ್ವಾಮಿ ಕುವಲಯಾನಂದ ಮತ್ತು ಅವರ ಶಿಷ್ಯರನ್ನು ಗಾಂಧೀಜಿ ನಂದಿ ಗಿರಿಧಾಮಕ್ಕೆ ಬರಮಾಡಿಕೊಂಡರು. ಇವರು ಸುಮಾರು ಎಂಟು ದಿನಗಳು, ಗಾಂಧೀಜಿ ಅನುಸರಿಸುತ್ತಿದ್ದ

ಎಲ್ಲ ಚಿಕಿತ್ಸಾ ಕ್ರಮಗಳನ್ನು ಗಮನಿಸಿದರು. ಅಲ್ಲದೆ ಗಿರಿಧಾಮದಲ್ಲಿ ಸೇರಿದವರೆಲ್ಲರಿಗೂ ಯೋಗಾಸನದ ಅಭ್ಯಾಸವನ್ನು ಮಾಡಿಸಿ ಈ ಸಾಧನೆಯಿಂದ ದೇಹಾಲಸ್ಯ ಹೋಗಲಾಡಿಸುವ ಮಾರ್ಗವನ್ನು ವಿವರವಾಗಿ ತಿಳಿಸಿದರು. ಇವರು ನಂದಿಬೆಟ್ಟದಲ್ಲಿದ್ದಷ್ಟು ದಿನ ಎಲ್ಲರ ಬಾಯಲ್ಲೂ ಯೋಗ, ಆಸನಗಳ ಮಾತೇ. ಯಾವ ಮರದ ಕೆಳಗೆ ನೋಡಿದರೂ ವಿವಿಧ ಆಸನಗಳನ್ನು ಹಾಕುತ್ತಿದ್ದ ದೃಶ್ಯವನ್ನೇ ಕಾಣಬಹುದಿತ್ತು.

ಸ್ವಾಮಿ ಕುವಲಯಾನಂದರು ಕೆ. ಸಂಪದ್ಗಿರಿರಾಯರೊಂದಿಗೆ ಮಾತನಾಡುತ್ತಾ "ಮಹಾತ್ಮರು ಆಸನವನ್ನು ಮತ್ತು ನೇತಿ ಕ್ರಿಯೆಯನ್ನು ಶಾಸ್ತ್ರೀಯ ರೀತಿಯಲ್ಲಿ ತಾವೇ ಮಾಡಿಕೊಳ್ಳುತ್ತಾರೆ. ಅವರಿಗೆ ಯಾವ ಸಲಹೆಯನ್ನು ನಾನು ಕೊಡಬೇಕಾಗಿಲ್ಲ" ಎಂದರು. ಮಹಾತ್ಮಾಜಿ ಅವರ ಆಹ್ವಾನದ ಮೇರೆಗೆ ಔಂದ್ ಸಂಸ್ಥಾನದಿಂದ ಶ್ರೀಪಾದ ಸಾತವಾಳೇಕರ್ ಗಿರಿಧಾಮಕ್ಕೆ ಆಗಮಿಸಿದ್ದರು. ಇವರು ವೇದಾಧ್ಯಯನದಲ್ಲಿ ನಿಷ್ಣಾತರಾಗಿದ್ದು ಸೂರ್ಯ ನಮಸ್ಕಾರ, ಅಂಗಸಾಧನೆ ಮುಂತಾದ ವಿದ್ಯೆಗಳಲ್ಲಿ ಪರಿಣಿತರಾಗಿ ವಿದೇಶಗಳಲ್ಲೂ ಪ್ರಸಿದ್ಧಿ ಹೊಂದಿದ್ದರು. ಚಿತ್ರ ಕಲಾವಿದರೂ ಆಗಿದ್ದ ಇವರು ಗಿರಿಧಾಮದಲ್ಲಿದ್ದವರೆಲ್ಲರಿಗೂ ಆ ಎಲ್ಲಾ ವಿದ್ಯೆಗಳನ್ನು ಅಭ್ಯಾಸ ಮಾಡಿಸುತ್ತಿದ್ದರು. ಅವರಿದ್ಧಷ್ಟು ದಿವಸ ಗಿರಿಧಾಮವೆಲ್ಲಾ ವಿವಿಧ ಚಟುವಟಿಕೆಗಳಿಂದ ಕೂಡಿತ್ತು. ಕರಾಚಿ ಕೃಷ್ಣರಾವ್ ಎಂಬುವರು ಗಿರಿಧಾಮಕ್ಕೆ ಆಗಮಿಸಿ ಮೂರು ದಿನವಿದ್ದು ಬೆಳಗ್ಗೆ ಸಾಯಂಕಾಲ ಮಹಾತ್ಮರ ಕೈಕಾಲು ಮೈಯನ್ನುಜ್ಜಿ ಬಿಸಿನೀರಿನ ಟಬ್ ಬಾತನ್ನು ಮಾಡಿಸುತ್ತಿದ್ದರು.

ಸಂಜೆ ಐದು ಗಂಟೆ ವೇಳೆಗೆ ಗಾಂಧೀಜಿ ಗಿರಿಧಾಮವನ್ನು ಒಂದು ಸುತ್ತು ಸುತ್ತಿ ಬರುತ್ತಿದ್ದರು. ಸಾಕಷ್ಟು ಜನರು ಗಾಂಧೀಜಿ ಬರುವ ದಾರಿಯಲ್ಲಿ ಕಾದು ನಿಂತಿರುತ್ತಿದ್ದರು. ಗಾಂಧೀಜಿ ಶಾಲು ಹೊದ್ದುಕೊಂಡು ನಡೆಯುತ್ತಿದ್ದರೆ ಜೊತೆಯಲ್ಲಿರುವವರು ಓಡಬೇಕಾಗಿತ್ತು. ಅಷ್ಟು

ವೇಗವಾಗಿ ಅವರು ನಡೆಯುತ್ತಿದ್ದರು. ಒಂದು ದಿವಸ ಸಂಜೆ ಮಹಾದೇವ ದೇಸಾಯಿ ಜೊತೆಗಾರರೊಡನೆ ಗಾಳಿ ಸಂಚಾರ ಮಾಡುತ್ತಿದ್ದಾಗ ನಡುವೆ ಗಾಂಧೀಜಿ ಸಿಕ್ಕಿದ್ದರು. ಗಾಂಧೀಜಿ ನಗುತ್ತಾ "ನಾನು ನಡೆಯುವುದರ ಅರ್ಧದಷ್ಟು ವೇಗ ಕೂಡ ಇಲ್ಲವಲ್ಲ ನಿಮ್ಮದು" ಎಂದು ತಮಾಷೆ ಮಾಡಿದರು.

ಮೇ ಎರಡರಂದು ರಕ್ತದೊತ್ತಡ ಪರೀಕ್ಷೆ ಮಾಡಿದಾಗ 180 ಕ್ಕೆ ಏರಿದ್ದದ್ದು 155 ಕ್ಕೆ ಇಳಿದಿತ್ತು. ಗಿರಿಧಾಮದ ವಾಯುಗುಣ ಗಾಂಧೀಜಿಗೆ ಒಗ್ಗಿದ್ದು ಮನಸ್ಸಿಗೆ ಉಲ್ಲಾಸವನ್ನುಂಟುಮಾಡಿತ್ತು. ಆರೋಗ್ಯವೂ ಬಹಳಷ್ಟು ಸುಧಾರಿಸಿತ್ತು.

ಬೆಟ್ಟದಲ್ಲಿದ್ದವರೆಲ್ಲರೂ ಅಮೃತ ಸರೋವರದ ನೀರನ್ನೇ ಉಪಯೋಗಿಸುತ್ತಿದ್ದರು. ಎತ್ತಿನ ಮೇಲೆ ಕೊಡಗಳಲ್ಲಿ ಗಿರಿಧಾಮದ ಎಲ್ಲಾ ಕಡೆಗೆ ನೀರನ್ನು ಸಾಗಿಸುತ್ತಿದ್ದರು. ಗಾಂಧೀಜಿ ಇದ್ದ ಸಮಯದಲ್ಲಿ ಹೆಚ್ಚಿನ ಜನರು ಬರುತ್ತಿದ್ದ ಕಾರಣ ಮಿತವಾಗಿ ನೀರನ್ನು ಬಳಸಬೇಕೆಂಬ ನಿಯಮವಿತ್ತು. ಗಿರಿಧಾಮದಲ್ಲಿ ಆಗ ವಿದ್ಯುತ್ ಸಂಪರ್ಕ ಬಂದಿರಲಿಲ್ಲ.

ಕ್ಷೌರಿಕ ವೆಂಕಟಪ್ಪ

ಗಾಂಧೀಜಿ ಪ್ರತಿ ಭಾನುವಾರ ಪೂರ್ಣ ತಲೆ ಮತ್ತು ಗಡ್ಡವನ್ನು ಕ್ಷೌರ ಮಾಡಿಸಿಕೊಳ್ಳುತ್ತಿದ್ದರು. ಇದಕ್ಕಾಗಿ ಸುಲ್ತಾನ್ ಪೇಟೆಯಲ್ಲಿದ್ದ ಕ್ಷೌರಿಕ ವೆಂಕಟಪ್ಪನನ್ನು ನೇಮಿಸಿದ್ದರು. ವೆಂಕಟಪ್ಪ ಭಾನುವಾರ ಬಂತೆಂದರೆ ಖಾದಿ ಉಡುಪನ್ನು ಧರಿಸಿಕೊಂಡು ಕಂಕುಳಲ್ಲಿ ಆಯುಷ್ಕರ್ಮದ ಪೆಟ್ಟಿಗೆಯೊಂದಿಗೆ ಹೆಗಲಿಗೆ ಒಂದು ಚೀಲವನ್ನು ಏರಿಸಿ ಬೆಟ್ಟವನ್ನು ಸರಸರನೆ ಹತ್ತಿ ಕನ್ನಿಂಗ್‌ಹ್ಯಾಂ ಭವನದ ಬಳಿ ಇದ್ದ ಕಲ್ಲು ಬೆಂಚಿನ ಮೇಲೆ ಕುಳಿತು ಗಾಂಧೀಜಿಗೆ ಕ್ಷೌರ ಮಾಡುತ್ತಿದ್ದ. ಗಾಂಧೀಜಿಗೆ ಚೆನ್ನಾಗಿ ಕ್ಷೌರ ಮಾಡಬೇಕೆಂಬ ಆಸೆಯಿಂದ ವೆಂಕಟಪ್ಪ ಆಗಾಗ್ಗೆ ಹೋಟೆಲ್ ರಾಮಚಂದ್ರ ಅಯ್ಯರ್‌ಗೆ "ಬೆಂಗಳೂರಿನಿಂದ

ಒಂದು ಹೊಸ ಕತ್ತಿಯನ್ನು ತಂದು ಕೊಡಿ" ಎಂದು ಕೇಳಿಕೊಂಡ. ಅಯ್ಯರ್ ಬೆಂಗಳೂರಿನ ಚಿಕ್ಕಪೇಟೆಗೆ ಹೋಗಿ ಎರಡು ರೂಪಾಯಿ ನಾಲ್ಕು ಆಣೆ ಕೊಟ್ಟು ಹೊಸ ಕತ್ತಿಯನ್ನು ತಂದು ಕೊಟ್ಟರು. ವೆಂಕಟಪ್ಪನು ಗಾಂಧಿ ಅವರಿಗೆ ಕ್ಷೌರ ಮಾಡಲು ಹೋದಾಗ ಗಾಂಧೀಜಿ ಆ ಹೊಸ ಕತ್ತಿಯನ್ನು ತೆಗೆದುಕೊಂಡು ನೋಡಿದರು. ಅದು ವಿದೇಶಿ ಕತ್ತಿಯಾಗಿದ್ದು ಅದರ ಮೇಲೆ "ಮೇಡ್ ಇನ್ ಜರ್ಮನಿ, ಕಾಫ್‌ಮೆನ್ ಕಂಪೆನಿ" ಎಂದಿತ್ತು. ಅದನ್ನು ನೋಡಿದ ಗಾಂಧೀಜಿ "ಈ ವಿದೇಶಿ ಕತ್ತಿ ಬೇಡ, ಸ್ವದೇಶಿ ಕತ್ತಿಯಿಂದಲೇ ಮಾಡು" ಎಂದು ಹೇಳಿದರು. ಅಂದಿನಿಂದ ವೆಂಕಟಪ್ಪ ಸ್ವದೇಶಿ ಕತ್ತಿಯಿಂದಲೇ ಮಾಡತೊಡಗಿದ. ನಂತರ ಆ ವಿದೇಶಿ ಕತ್ತಿಯನ್ನು ತಂದುಕೊಟ್ಟ ಅಯ್ಯರ್‌ಗೆ ವಾಪಸ್ಸು ಕೊಟ್ಟುಬಿಟ್ಟ, ಗಾಂಧೀಜಿ ವೆಂಕಟಪ್ಪನನ್ನು "ನಮ್ಮ ಆಶ್ರಮಕ್ಕೆ ಬಂದುಬಿಡು" ಎಂದು ಕೇಳಿದರಂತೆ. ಆದರೆ ವೆಂಕಟಪ್ಪ ಒಪ್ಪಲಿಲ್ಲ. ನಂದಿ ಗಿರಿಧಾಮವನ್ನು ಬಿಡುವ ಸಮಯದಲ್ಲಿ ಒಂದು ರೂಪಾಯಿಯ ಐದು ಬೆಳ್ಳಿ ನಾಣ್ಯಗಳನ್ನು ಗಾಂಧೀಜಿ ಉಡುಗೊರೆಯಾಗಿ ವೆಂಕಟಪ್ಪನಿಗೆ ಕೊಟ್ಟಿದ್ದರು.

ನಂತರದಲ್ಲಿ ವೆಂಕಟಪ್ಪನಿಗೆ ಸುಲ್ತಾನ್‌ಪೇಟೆಯಲ್ಲಿ ಯಾರಾದರೂ ಗಿರಾಕಿಗಳು "ಬಾಗ ಕಟಿಂಗ್ ಚೇಯಲ್ಲಪ್ಪ" ಎಂದು ಹೇಳಿದರೆ "ಏಮಿ ಸ್ವಾಮಿ ನೇನು ಗಾಂಧೀಕಿ ಕಟಿಂಗ್ ಚೇಸಿಂಡೇವಾಡು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನೆಂದು ಸುಲ್ತಾನ್‌ಪೇಟೆಯ ನರಸಪ್ಪನವರು ತಿಳಿಸಿದರು.

ಸೊಂಟದ ಗಡಿಯಾರ

ಗಾಂಧೀಜಿ ಸೊಂಟದ ಭಾಗದಲ್ಲಿ ಕಟ್ಟಿಕೊಳ್ಳುತ್ತಿದ್ದ ಗಡಿಯಾರ ಗಿರಿಧಾಮದಲ್ಲಿದ್ದಾಗ ಕೆಟ್ಟುಹೋಗಿದ್ದರಿಂದ ಚಿಕ್ಕಬಳ್ಳಾಪುರಕ್ಕೆ ಆಗಾಗ್ಗೆ ಹೋಗುತ್ತಿದ್ದ ರಾಮಚಂದ್ರ ಅಯ್ಯರ್ ಅವರಿಗೆ "ರಿಪೇರಿ ಮಾಡಿಸಿ ತಂದುಕೊಡಿ" ಎಂದು ಗಾಂಧೀಜಿ ಕೊಟ್ಟಿದ್ದರು. ಚಿಕ್ಕಬಳ್ಳಾಪುರದಲ್ಲಿ ಗಡಿಯಾರ ರಿಪೇರಿ ಮಾಡುವ ಅಂಗಡಿ

ಇಟ್ಟುಕೊಂಡಿದ್ದ ನಂದೀಶಯ್ಯ ಎಂಬುವವರಿಗೆ ಅಯ್ಯರ್ ಕೊಟ್ಟರು. ಆ ಗಡಿಯಾರದಲ್ಲಿ ಬ್ಯಾಲೆನ್ಸ್ ಸ್ಪ್ರಿಂಗ್ ಕೆಲಸ ಮಾಡುತ್ತಿರಲಿಲ್ಲ. ಆ ಸ್ಪ್ರಿಂಗ್ ತರಲು ಬೆಂಗಳೂರಿಗೆ ಹೋಗಬೇಕಾಗಿದ್ದರಿಂದ ಗಡಿಯಾರ ರಿಪೇರಿಯಾಗಲು ಬಹಳ ತಡವಾಯಿತು. ಕೊನೆಗೆ ಗಾಂಧೀಜಿ "ಆ ಗಡಿಯಾರವನ್ನು ನೀವೇ ಇಟ್ಟುಕೊಳ್ಳಿ" ಎಂದು ಅವರಿಗೆ ಹೇಳಿದರು. ವೆಸ್ಟೆಂಡ್ ಕಂಪೆನಿಯ ಆ ಗಡಿಯಾರ ಮತ್ತು ಕ್ಷೌರದ ಕತ್ತಿ ಈಗಲೂ ರಾಮಚಂದ್ರ ಅಯ್ಯರ್ ಅವರ ಮಕ್ಕಳ ಬಳಿ ಇದೆ.

ಹರಿಜನ ಪ್ರವೇಶ

ಶ್ರೀ ಯೋಗಾನಂದೀಶ್ವರ ದೇವಾಲಯಕ್ಕೆ ಗಾಂಧೀಜಿ ಅವರನ್ನು ದೇವಾಲಯ ಧರ್ಮದರ್ಶಿಗಳು ಆಹ್ವಾನಿಸಿದರು. ಗಾಂಧೀಜಿ ಹರಿಜನರಿಗೆ ದೇವಾಲಯದ ಪ್ರವೇಶಕ್ಕೆ ಅವಕಾಶವಿದ್ದರೆ ಮಾತ್ರ ಬರುವುದಾಗಿ ತಿಳಿಸಿದರು. ಧರ್ಮದರ್ಶಿಗಳು ಅದಕ್ಕೆ ಒಪ್ಪಲಿಲ್ಲ, ಗಾಂಧೀಜಿ ಹೋಗಲಿಲ್ಲ. ಈ ದೇವಾಲಯದ ಹೊರ ಭಾಗದಲ್ಲಿ ಸುಮಾರು 1850ರಲ್ಲಿ ಶಿರಸ್ತೆದಾರರಾಗಿದ್ದ ನರಸಿಂಹ ಅಯ್ಯಂಗಾರ್ ನಿರ್ಮಿಸಿದ್ದ ಆಂಜನೇಯ ದೇವಾಲಯಕ್ಕೆ ಅಯ್ಯರ್ ಅವರು ಹರಿಜನರಿಗೆ ಪ್ರವೇಶ ಕಲ್ಪಿಸಿ ವಿಶೇಷ ಪೂಜೆಯನ್ನು ಏರ್ಪಡಿಸಿ ಗಾಂಧಿ ಅವರನ್ನು ಆಹ್ವಾನಿಸಿದರು. ಗಾಂಧೀಜಿ ಸಂತೋಷದಿಂದ ಆಗಮಿಸಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ನೈರ್ಮಲ್ಯ

ಗಾಂಧೀಜಿ ಯಾವಾಗಲೂ ನೈರ್ಮಲ್ಯದ ಕಡೆ ಹೆಚ್ಚಿನ ಲಕ್ಷ್ಯ ಕೊಡುತ್ತಿದ್ದರು. ಅವರ ಆವರಣದಲ್ಲಿ ಎಲ್ಲಾ ಪದಾರ್ಥಗಳು ಶುಚಿಯಾಗಿ ಅಚ್ಚುಕಟ್ಟಾಗಿ ಇರುತ್ತಿತ್ತು. ಒಂದು ದಿನ ಸಾಯಂಕಾಲ ಪ್ರಾರ್ಥನೆಯ ಪ್ರಾರಂಭದಲ್ಲಿ ಕೆಲವು ನೊಣಗಳು ಕಾಣಿಸಿಕೊಂಡಿದ್ದನ್ನು ಗಾಂಧೀಜಿ ಕಂಡರು. ಆಗ ಸುತ್ತ ಕುಳಿತಿದ್ದವರನ್ನು ಕರೆದು "ಇಲ್ಲಿ ಸಮೀಪದಲ್ಲಿ

ಎಲ್ಲಿಯೋ ಕೊಳೆ ಸೇರಿರಬೇಕು, ಅದಕ್ಕೆ ನೊಣಗಳು ಬಂದಿವೆ" ಎಂದರು. ಅಲ್ಲಿದ್ದವರು "ಇಲ್ಲಿ ಎಲ್ಲವೂ ಶುಚಿಯಾಗಿದೆ, ಎಲ್ಲೂ ಕೊಳೆ ಇಲ್ಲ" ಎಂದರು. ಗಾಂಧೀಜಿ "ಹಾಗೆ ಇರಲು ಸಾಧ್ಯವಿಲ್ಲ, ಹೋಗಿ ನೋಡಿ" ಎನ್ನಲು ಕಟ್ಟಡಕ್ಕೆ ಸ್ವಲ್ಪ ದೂರದಲ್ಲಿ ಪಾತ್ರೆಗಳನ್ನು ತೊಳೆದು ಮುಸುರೆ ಬಿದ್ದಿತ್ತು. ನೊಣಗಳು ಅದನ್ನು ಮುತ್ತಿದ್ದವು. ಅದನ್ನು ತೆಗೆದುಹಾಕಿದ ಮೇಲೆ ನೊಣಗಳು ಮಾಯವಾದವು. ಈ ಕಾರಣದಿಂದಾಗಿ ಗಾಂಧೀಜಿ ನೊಣಗಳನ್ನು 'ಸ್ಯಾನಿಟರಿ ಇನ್ಸ್‌ಪೆಕ್ಟರ್ಸ್' ಎಂದು ಕರೆಯುತ್ತಿದ್ದರು.

ಒಂದು ರಾತ್ರಿ ಸೊಳ್ಳೆಯ ಕಾಟ ಹೆಚ್ಚಾಗಲು ಮರುದಿನ ಸುತ್ತಮುತ್ತಲಿನ ಚರಂಡಿಗಳನ್ನು ತೊಳೆಸಿದರು. ಪಕ್ಕದಲ್ಲಿದ್ದ ತಿಪ್ಪೆಯೊಂದಕ್ಕೆ ಬೆಂಕಿ ಹಚ್ಚಿ ಮುಚ್ಚಿಸಿದರು. ಅದಕ್ಕೆ ಬದಲಾಗಿ ಬೇರೊಂದು ಗುಂಡಿಯನ್ನು ತೋಡಿಸಿ ಪ್ರತಿ ಸಲ ಕಸ ಹಾಕುವಾಗಲೂ ಅದರ ಮೇಲೆ ಮಣ್ಣು ಮುಚ್ಚುವ ಏರ್ಪಾಡು ಮಾಡಿದರು. ಅಲ್ಲಿಂದಾಚೆಗೆ ಸೊಳ್ಳೆಗಳು ಕಾಣಿಸಿಕೊಳ್ಳಲಿಲ್ಲ.

ಮೌನ ದಿನ

ಪ್ರತಿ ಸೋಮವಾರದಂದು ಗಾಂಧೀಜಿ ಮೌನ ಆಚರಿಸುತ್ತಿದ್ದರು. ಒಂದು ಸೋಮವಾರ ಕೆಂಗೇರಿ ಗುರುಕುಲ ಸೇವಾ ಸಂಘದ ಸಹಾಯಕ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ವಿಶ್ವಾನಂದರು (ಹಿಂದಿನ ಹೆಸರು ಬ್ರಹ್ಮಚಾರಿ ನಾರಾಯಣ) ಕೆಂಗೇರಿಯಿಂದ 45 ಮೈಲಿ ದೂರದಲ್ಲಿರುವ ನಂದಿ ಗಿರಿಧಾಮಕ್ಕೆ ಕಾಲ್ನಡಿಗೆಯಲ್ಲಿಯೇ ಮತ್ತಿಬ್ಬರ ಜೊತೆಯಲ್ಲಿ ಆಗಮಿಸಿದರು. ಸಂಜೆ ಐದು ಗಂಟೆಯವರೆಗೂ ಗಾಂಧಿ ಅವರ ದರ್ಶನವಾಗಲಿಲ್ಲ. ವಾಯುವಿಹಾರಕ್ಕೆ ಗಾಂಧೀಜಿ ಸಂಜೆ ಹೊರಗೆ ಬಂದಾಗ ವಿಶ್ವಾನಂದರು ಮಹಾತ್ಮರಿಗೆ ತಲೆಬಾಗಿ ನಮಸ್ಕರಿಸಿದರು. ಗುಂಗುರು ಕೂದಲಿನ ಅವರ ತಲೆಯನ್ನು ಗಾಂಧೀಜಿ ನೇವರಿಸಿ ನಗುಮುಖದಿಂದ ಮೌನ ದಿನವಾದ್ದರಿಂದ "ಬಂದ ಕೆಲಸವಾಯಿತು

ಹೊರಡಿ" ಎಂಬಂತೆ ಸಂಜ್ಞೆ ಮಾಡಿದರು. "ಗಾಂಧಿ ಅವರ ಅಭಯ ಹಸ್ತ ನಗುಮುಖ ನನ್ನ ಜೀವನದ ಅಮೂಲ್ಯ ನೆನಪು" ಎಂದು ಸ್ವಾಮಿಗಳು ದಾಖಲಿಸಿದ್ದಾರೆ.

ಸಿ. ರಾಜಗೋಪಾಲಾಚಾರಿ ಅವರು 1927ರ ಮೇ 13ರಂದು ಪತ್ರಿಕಾ ಪ್ರಕಟಣೆಗಾಗಿ ಬರೆದ ಪತ್ರವನ್ನು ಇಲ್ಲಿ ಅಳವಡಿಸಿದೆ.

ನಂದಿಯಲ್ಲಿ ಮಹಾತ್ಮರಿರುವಾಗ ನಮ್ಮ ಕರ್ತವ್ಯ

"ಆರೋಗ್ಯ ರಕ್ಷಣೆ-ಸಂವರ್ಧನೆ ಮಹಾತ್ಮರು ಎಲ್ಲಿಗೆ ಹೋಗಬೇಕೆಂಬ ಪ್ರಸ್ತಾಪ ಬಂದಾಗ ಎಷ್ಟೆಷ್ಟೋ ಸಲಹೆಗಳು ಬಂದವು. ನಂದಿ ಗಿರಿಧಾಮಕ್ಕೆ ತಾವು ಬರುವುದಾದರೆ ದಕ್ಷಿಣ ದೇಶದ ಖಾದಿ ಪ್ರೇಮಿಗಳಿಗೆ ಉತ್ಸಾಹ ಉಂಟಾಗುತ್ತದೆಂದು ಶಕ್ತಿ ಬರುತ್ತದೆಯೆಂದು ನಾವು ಹೇಳಿದ್ದೆವು. ದಕ್ಷಿಣ ಭಾರತದವರ ಖಾದಿಯ ಬಗ್ಗೆ ತುಂಬ ಆಸಕ್ತಿ ವಹಿಸುತ್ತಾರೆ ಎಂಬ ಭರವಸೆಯಿಂದ ಮಹಾತ್ಮರು ಇಲ್ಲಿಗೆ ಬಂದಿದ್ದಾರೆ. ದಕ್ಷಿಣ ದೇಶದ ಸ್ತ್ರೀ ಪುರುಷರೆಲ್ಲರೂ ತಮ್ಮಲ್ಲಿ ಮಹಾತ್ಮನನ್ನು ಉಳಿಸಿಕೊಳ್ಳಲು ಆನಂದಭರಿತರಾಗಿರುವರು. ಪ್ರತಿ ದಿನವೂ ಅವರ ಆರೋಗ್ಯ ಸುಧಾರಿಸಲೆಂದು ಪ್ರಾರ್ಥಿಸುತ್ತಿರುವರು. ನಮ್ಮ ಆತಿಥ್ಯದಿಂದಲೂ, ನಮ್ಮ ನಾಡಿನ ವಾಯುಗುಣದಿಂದಲೂ ಮಹಾತ್ಮರು ದೃಢಕಾಯರೂ, ಆರೋಗ್ಯ ಸಂಪನ್ನರು ಆದರೆಂದರೆ ಅದು ನಮ್ಮ ಹೆಮ್ಮೆಗೆ ಕಾರಣವಲ್ಲವೇ? ನಾವು ಖಾದಿಯ ಕೆಲಸವನ್ನು ಮಾಡಬೇಕು. ಹೆಚ್ಚು ಹೆಚ್ಚಾಗಿ ಖಾದಿಯನ್ನು ಕೊಳ್ಳಬೇಕು. ಬಡಜನರ ಮನೆಯಲ್ಲೆಲ್ಲಾ ಚರಕ ಸ್ಥಾಪಿಸಬೇಕು. ಮಹಾತ್ಮರು ಆರೋಗ್ಯ ಹೊಂದಿ ನಂದಿ ಬೆಟ್ಟದಿಂದ ತೆರಳುವಾಗ ಅವರಿಗೆ ದ್ರವ್ಯವನ್ನು ಕೂಡಿಸಿ ಕೊಡಬೇಕು. ನಂದಿ ಗಿರಿಧಾಮಕ್ಕೆ ತಾವು ಬಂದುದು ಫಲಪ್ರದವಾಯಿತೆಂದು ಅವರಿಗೆ ಅನ್ನಿಸುವ ಹಾಗೆ ನಾವು ನಡೆದುಕೊಳ್ಳಬೇಕು" ಎಂದೆಲ್ಲಾ ಬರೆದಿರುವುದು ಉಲ್ಲೇಖಾರ್ಹವಾಗಿದೆ.

ಮಾವಿನಹಣ್ಣು

ಒಂದು ದಿನ ಚಿಕ್ಕಬಳ್ಳಾಪುರದ ರೆಡ್ಡಿ ಜನಾಂಗದವರು ತಾವೇ ಬೆಳೆದಿದ್ದ ಮಾವಿನ ಹಣ್ಣನ್ನು ಗಾಂಧಿ ಅವರಿಗೆ ಅರ್ಪಿಸಬೇಕೆಂದು ಪ್ರಾರ್ಥನಾ ಸಮಯಕ್ಕೆ ತೆಗೆದುಕೊಂಡು ಬಂದಿದ್ದರು. ರಾಜಾಜಿ ಅವರು ಗಾಂಧಿ ಅವರ ಪಕ್ಕದಲ್ಲಿ ಕುಳಿತಿದ್ದರು. ಸ್ವಯಂ ಸೇವಕರು ಆ ಹಣ್ಣಿನ ತಟ್ಟೆಯನ್ನು ತೆಗೆದುಕೊಂಡು ಒಳಗಿಡಲು ಹೋಗುತ್ತಿದ್ದಾಗ ಗಾಂಧೀಜಿ "ರಾಜಾಜಿಯವರ ಕಣ್ಣುಗಳು ಈ ಹಣ್ಣಿನ ಮೇಲೆಯೇ ಇದೆ, ಆದ್ದರಿಂದ ಈ ಹಣ್ಣುಗಳನ್ನು ಅವರಿಗೆ ಕೊಡದೆ ನೀವು ಒಳಕ್ಕೆ ಒಯ್ದರೆ ಅವರಿಗೆ ಸಂಕಟವಾಗುತ್ತದೆ" ಎಂದು ಹಾಸ್ಯ ಮಾಡಿದರು. ರಾಜಾಜಿಯವರು ನಕ್ಕರು. ರಾಜಾಜಿಯವರಿಗೆ ಬಾಯಿಚಪಲ ಜಾಸ್ತಿ ಎಂದು ಗಾಂಧಿಯವರಿಗೂ ತಿಳಿದಿತ್ತು.

ಮಕ್ಕಳಿಗೆ ಉಪದೇಶ

ಮಕ್ಕಳ ಸಾನ್ನಿಧ್ಯ ಗಾಂಧೀಜಿಗೆ ಪೌಷ್ಠಿಕ ಔಷಧವಾಗಿತ್ತು. ಬೆಂಗಳೂರಿನ ಮೆಥೋಡಿಸ್ಟ್ ಮಿಷನ್ ಶಾಲೆಯ ಪ್ರಾಂಶುಪಾಲರಾಗಿದ್ದ ರುತ್ ಇ ರಾಬಿನ್‌ಸನ್ ಅವರು ತಮ್ಮ ಶಾಲೆಯ ಹೆಣ್ಣು ಮಕ್ಕಳನ್ನು ಗಿರಿಧಾಮಕ್ಕೆ ಕರೆದುಕೊಂಡು ಬಂದಿದ್ದರು. ಈಕೆ ಬೆಂಗಳೂರು ನಗರದಲ್ಲಿ ಉತ್ತಮ ಸಮಾಜ ಸೇವಕಿಯಾಗಿಯೂ, 'ಚಿಲ್ಡ್ರನ್ಸ್ ಚಸ್ಟ್' ಎಂಬ ಮಾಸ ಪತ್ರಿಕೆ ಸಂಪಾದಕಿಯೂ ಆಗಿದ್ದರು. ಈ ಹೆಣ್ಣು ಮಕ್ಕಳನ್ನೆಲ್ಲಾ ಕಂಡು ಬಾಪುಗೆ ಸ್ವರ್ಗ ಸಿಕ್ಕಂತಾಯಿತು. ಬಹಳಷ್ಟು ಸಮಯ ಅವರೊಂದಿಗೆ ಸಂತೋಷದಿಂದ ಕಳೆದರು. ನಗರಕ್ಕೆ ಹಿಂತಿರುಗಿದ ನಂತರ ಬಾಪುವಿಗೆ ಇವರೆಲ್ಲರೂ ಸೇರಿ ಒಂದು ಪತ್ರವನ್ನು ಬರೆದರು. ಅದರಲ್ಲಿ "ಪ್ರತಿ ದಿನವೂ ನಮ್ಮ ಸಾಮೂಹಿಕ ಪ್ರಾರ್ಥನೆ ಸಮಯದಲ್ಲಿ ನಿಮಗೆ ಬೇಗ ಗುಣವಾಗಲಿ ಎಂದು ದೇವರನ್ನು ಬೇಡಿಕೊಳ್ಳುತ್ತೇವೆ" ಎಂದು ಬರೆದಿದ್ದರು. ಬಾಪು ಈ ಪತ್ರಕ್ಕೆ ಉತ್ತರ ಬರೆಯುತ್ತಾ ಆ ಮಕ್ಕಳನ್ನು 'ಪ್ರೀತಿಯ ಪುಟ್ಟ ಹಕ್ಕಿಗಳೇ' ಎಂದು ಕರೆದು ಮತ್ತೊಂದು ಸಲ ನಂದಿ ಗಿರಿಧಾಮಕ್ಕೆ ಆಹ್ವಾನಿಸಿದರು. ಆ ತಂಡ ಮತ್ತೆ ಬಂದಿತು. ಪ್ರಾಂಶುಪಾಲರು 'ನಮ್ಮ ಹುಡುಗಿಯರು

ಈಗ ನೂಲುವುದನ್ನು ಕಲಿತಿದ್ದಾರೆ' ಎಂದು ಬಾಪುವಿಗೆ ತಿಳಿಸಿದರು. ಗಾಂಧೀಜಿ ಸಂತೋಷದಿಂದ ಮಕ್ಕಳನ್ನು ಉದ್ದೇಶಿಸಿ 'ಖಾದಿ ಎಂದರೆ ನಿಮಗೆ ಏನು ಗೊತ್ತಿದೆ' ಎಂದು ಕೇಳಿದರು. ಆ ಪ್ರಶ್ನೆಗೆ ಮಕ್ಕಳೆಲ್ಲರೂ ನಗುತ್ತಾ 'ಖಾದಿ ಎಂದರೆ ಬಟ್ಟೆ" ಎಂದರು, ಎಂತಹ ಬಟ್ಟೆ ಅದು? "ಒರಟು ಬಟ್ಟೆ" ಎಂದು ಮಕ್ಕಳು ಉತ್ತರ ಕೊಟ್ಟರು. ಕೊನೆಗೆ ಬಾಪು ಅವರೇ 'ಖಾದಿ ಎಂದರೆ ಕೈ ನೂಲಿನ ಹಾಗೂ ಕೈ ನೇಯ್ಗೆಯ ಬಟ್ಟೆ' ಎಂದು ತಿಳಿಸಿದರು.

"ಸರಿ ಆ ಬಟ್ಟೆ ಯಾಕೆ ಉಡಬೇಕು ಗೊತ್ತೆ? ಹೇಳಿ ನೋಡೋಣ?"

'ಬಾಳಿಕೆ ಬರುತ್ತದೆ' ಎಂದು ಒಂದು ಹುಡುಗಿ ಉತ್ತರವಿತ್ತಳು. 'ಇದು ಸರಿಯಾದ ಕಾರಣವಲ್ಲ. ಅದಕ್ಕಿಂತ ಒಳ್ಳೆಯ ಕಾರಣ ಹೇಳಬೇಕು.'

"ಆ ಬಟ್ಟೆ ಒಗೆದರೆ ಬೆಳ್ಳಗೆ ಆಗುತ್ತದೆ' ಎಂದು ಇನ್ನೊಬ್ಬ ಹುಡುಗಿ ಉತ್ತರ.

''ಅದೂ ಸರಿಯಲ್ಲ; ಚನ್ನಾಗಿ ಯೋಚನೆ ಮಾಡಿ ಉತ್ತರ ಹೇಳು?" 'ನಿಮ್ಮಲ್ಲಿ ಯಾರು ಬುದ್ಧಿವಂತರು ಹೇಳಿ ನೋಡೋಣ, ಈ ಖಾದಿ ದಾರವನ್ನು ಯಾರು ತೆಗೆಯುತ್ತಾರೆ ಗೊತ್ತೇ? ಹಳ್ಳಿಯ ಜನರು. ನಮ್ಮ ದೇಶದ ಇವರು ತೀರಾ............ ಎಲ್ಲಿ ಈ ವಾಕ್ಯವನ್ನು ಸಂಪೂರ್ಣಗೊಳಿಸಿ' ಎಂದರು.

ತಲೆಗೊಂದು ಉತ್ತರ ಬಂತು. ಒಬ್ಬ ಹುಡುಗಿ ಮಾತ್ರ 'ಬಡವರು' ಎಂದು ಸರಿಯಾದ ಉತ್ತರ ಹೇಳಿ ವಾಕ್ಯ ಮುಗಿಸಿದಳು.

"ತಿಳಿಯಿತೇ ಈಗ ನಿಮಗಿದ್ದ ಹಾಗೆ ಹಳ್ಳಿ ಜನರಿಗೆ ಓದು ಬರಹವಿಲ್ಲ. ನೀವು ಎಂದಾದರೂ ಹಳ್ಳಿಗಳಿಗೆ ಹೋಗಿದ್ದೀರಾ? ಆ ಜನರಿಗೆ ಹೊಟ್ಟೆ ತುಂಬ ಹಿಟ್ಟಿಲ್ಲ, ಹಾಲಿಲ್ಲ, ತುಪ್ಪ ಇಲ್ಲ, ಅಂತಹ ಜನರು ನೂಲುವುದು. ಆ ಮೂಲಕ ಅವರಿಗೆ ನಾಲ್ಕು ಕಾಸು ಬಂದರೆ ಅದೇ ಅವರ ಭಾಗ್ಯ. ಆ ಖಾದಿ ಬಟ್ಟೆ ನೀವು ಕೊಂಡರೆ ಅವರಿಗೆ

ಆ ಕಾಸು ಸಿಗುತ್ತದೆ. ಆ ಕಾಸಿಗೆ ಉಪ್ಪೋ, ಮೆಣಸಿನಕಾಯಿಯೋ, ಹಾಲೋ, ಹಣ್ಣೋ ಕೊಳ್ಳುತ್ತಾರೆ. ಗೊತ್ತಾಯಿತೇ! ಖಾದಿ ಬಟ್ಟೆ ಏಕೆ ಉಡಬೇಕೆನ್ನುವುದು ಈಗ ತಿಳಿದಂತಾಯಿತಲ್ಲವೇ?" ಎಂದರು ಬಾಪು. ಕೊನೆಯಲ್ಲಿ ಆ ಮಕ್ಕಳಿಂದ ಗಾಂಧೀಜಿ ಒಂದು ಹಾಡನ್ನು ಹಾಡಿಸಿದರು.

ಖಾದಿ ಸೈನ್ಯ

ಮೇ 13 ರಂದು ಸಂಜೆ ಸುಮಾರು ಇಪ್ಪತ್ತು ಮಂದಿ ಮಹಿಳೆಯರ ಖಾದಿ ಸೈನ್ಯವನ್ನು ನ್ಯಾಷನಲ್ ಹೈಸ್ಕೂಲಿನ ಪ್ರಾಂಶುಪಾಲರಾದ ಕೆ. ಸಂಪದ್ಗಿರಿರಾಯರು ಬೆಂಗಳೂರಿನಿಂದ ಕರೆತಂದಿದ್ದರು. ಚಿಕ್ಕವರಿಂದ ದೊಡ್ಡವರವರೆಗೆ ಎಲ್ಲರೂ ಖಾದಿ ಧರಿಸಿದ್ದರು. ಅಂದು ಬೆಳದಿಂಗಳು, ಎಲ್ಲರೂ ಅಮೃತ ಸರೋವರದ ಬಳಿ ಅಡುಗೆಗೆ ಸಿದ್ಧಪಡಿಸಿದರು. ವನಭೋಜನವಾದ ನಂತರ ಮಹಾತ್ಮರ ದರ್ಶನಕ್ಕಾಗಿ ಬಂದು ನೂಲುತ್ತಿದ್ದ ಮಹಾತ್ಮರಿಗೆ ತಾವು ತಂದಿದ್ದ ನೂಲಿನ ಲಡಿಗಳನ್ನೂ ಕದಿರುಗಳನ್ನೂ ಅರ್ಪಿಸಿದರು. ಸಂಪದ್ಗಿರಿರಾಯರು ಮಹಾತ್ಮರಿಗೆ ಎಲ್ಲರ ಪರಿಚಯ ಮಾಡಿಸಿದರು. ರಾತ್ರಿಯಾಗಿದ್ದರಿಂದ ಗಾಂಧೀಜಿ ಏನೂ ಮಾತನಾಡಲಿಲ್ಲ. ನಂತರ ಎಲ್ಲರೂ ಮಹಾತ್ಮರಿಗೆ ಪ್ರಣಾಮ ಸಲ್ಲಿಸಿದರೆ ಸಂಪದ್ಗಿರಿರಾಯರು ಮಾತ್ರ ರಾಮಭಟರಂತೆ ಪ್ರಣಾಮ ಸಲ್ಲಿಸಿ ನಿರ್ಗಮಿಸಿದರು.

ಮಹಿಳಾ ಸಪ್ತಾಹ

ರಂಗೂನ್‌ನಲ್ಲಿ ವಾಸಮಾಡುತ್ತಿದ್ದ ಒಬ್ಬ ಮಹಿಳೆಯನ್ನು ಆಕೆಯ ಮಗ ತನ್ನ ತಾಯಿ ಮಹಾತ್ಮರನ್ನು ನೋಡಿ ಬರಲಿ ಎಂದು ನಂದಿಬೆಟ್ಟಕ್ಕೆ ಕಳುಹಿಸಿದ್ದ. ಆಕೆಯ ತವರೂರು ಬೆಂಗಳೂರು, ಆಕೆಗೆ ನೂಲುವುದೂ ತಿಳಿದಿತ್ತು. ರಂಗೂನ್‌ನಲ್ಲಿ ಆಕೆಯ ಮಗ ಖಾದಿ ಪ್ರಚಾರ ಮಾಡುತ್ತಿದ್ದ. ಆಕೆ ನಂದಿದುರ್ಗಕ್ಕೆ ಆಗಮಿಸಿದ್ದಳು. ಗಾಂಧಿ ಅವರ ಬಳಿ ಬಂದು ಐದು ರೂಪಾಯಿಗಳ ಮೂರು ನೋಟುಗಳನ್ನು ಗಾಂಧಿ ಅವರ ಪಾದದಲ್ಲಿಟ್ಟು "ಒಂದು ನೋಟು ನನ್ನ ಮಗನದ್ದು, ಇನ್ನೆರಡು ನೋಟುಗಳು ನನ್ನ

ಗೆಳೆಯರದು" ಎಂದಳು. ಆಕೆಯ ಜೊತೆಯಲ್ಲಿ ಅಳಿಯನೂ ಬಂದಿದ್ದ. ಆಗ ಗಾಂಧೀಜಿ "ನೀವು ಒಂದು ರೂಪಾಯಿ ಕೊಟ್ಟಿದ್ದರೂ ಸಾಕಾಗಿತ್ತು. ಕೊಟ್ಟದ್ದನ್ನು ಹೃದಯಪೂರ್ವಕವಾಗಿ ಕೊಡುತ್ತಿದ್ದೀರಿ. ಆದರೆ ನನಗೆ ಬೇರೆ ಏನಾದರೂ ಕೊಡಬಹುದಲ್ಲಾ, ನಿಮ್ಮ ಅಳಿಯನನ್ನು ಮತ್ತು ಮಗಳನ್ನು ಖಾದಿ ಕೆಲಸಕ್ಕೆ ನನ್ನ ಆಶ್ರಮಕ್ಕೆ ಕೊಟ್ಟುಬಿಡಿ, ಎಷ್ಟು ಜನ ತಮ್ಮ ಮಕ್ಕಳನ್ನು ನನಗೆ ಕಾಣಿಕೆಯಾಗಿ ಸಲ್ಲಿಸಿದ್ದಾರೆ" ಎಂದರು. ಅದಕ್ಕೆ ಆ ಮಹಿಳೆ ಹಸನ್ಮುಖಿಯಾಗಿ "ಖಂಡಿತವಾಗಿ ಇವರು ನಿಮ್ಮವರೇ" ಎಂದಳು. ಮಹಿಳಾ ವೈದ್ಯರಿಬ್ಬರು ಆಗಮಿಸಿದ್ದರು. ಇಬ್ಬರೂ ಸತತ ಖಾದಿಧಾರಿಗಳು. ಗಾಂಧಿ ಅವರನ್ನು ಕಾಣಬೇಕೆಂಬ ಆಸೆಯಿಂದ ಬೆಂಗಳೂರಿನಿಂದ ಬಂದಿದ್ದರು. ಖಾದಿ ಕೆಲಸಗಾರರಿಗೆ ಆಧಾರ ಸ್ತಂಭದಂತೆ ಇದ್ದುಕೊಂಡು ಕೆಲಸ ಮಾಡುತ್ತಿದ್ದ ಇವರನ್ನು ಕಂಡ ಗಾಂಧೀಜಿ "ಖಾದಿ ಬಗ್ಗೆ ಶ್ರದ್ಧೆ ಇರುವುದು ಕೆಲವೇ ಮಹಿಳೆಯರಲ್ಲಿ, ಅಂತಹದರಲ್ಲಿ ನೀವಿಬ್ಬರೂ ಮರಳುಗಾಡಿನಲ್ಲಿ ನೀರಿನ ಚಿಲುಮೆ" ಎಂದು ಉದ್ಗರಿಸಿದರು.

ಇನ್ನೊಂದು ದಿವಸ ಬೆಂಗಳೂರಿನಿಂದ ಕೃಷ್ಣಮ್ಮ ಎಂಬುವರು ಕಾನಿಕಾಬಾಯಿ ಎಂಬ ಹುಡುಗಿಯೊಂದಿಗೆ ಆಗಮಿಸಿದರು. ಅದಕ್ಕೆ ಕೆಲವು ದಿವಸಗಳ ಮುಂಚೆ ಕೃಷ್ಣಮ್ಮನ ಪತಿ ಗಾಂಧಿ ಅವರನ್ನು ನೋಡಬೇಕೆಂದು ಬಂದಿದ್ದ ಸಂದರ್ಭದಲ್ಲಿ ತಮ್ಮದೇ ಪುಸ್ತಕವನ್ನು ಅಲ್ಲೇ ಬಿಟ್ಟುಹೋಗಿದ್ದರು. ಆ ಪುಸ್ತಕದಲ್ಲಿ ನೂಲುವವರು ತೆಗೆದುಕೊಳ್ಳಬೇಕಾದ ಪ್ರತಿಜ್ಞೆಯ ವಿವರಗಳೂ ಇದ್ದವು. ಆ ಪುಸ್ತಕವನ್ನು ತಿರುಗಿ ಒಯ್ಯುವ ಸಲುವಾಗಿ ಆಗಮಿಸಿದ್ದ ಇವರು ಖಾದಿ ಸೀರೆ ಉಟ್ಟಿರಲಿಲ್ಲ. "ನೀವು ಖಾದಿ ಸೀರೆಯುನ್ನುಟ್ಟು ಬಂದರೆ ಮಾತ್ರ ಆ ಪುಸ್ತಕವನ್ನು ವಾಪಸ್ಸು ಕೊಡುತ್ತೇನೆ" ಎಂದರು. ಇವರಿಗೆ ಏನು ತೋಚದಂತಾಯಿತು. ಗಿರಿಧಾಮದಲ್ಲಿಯೇ ಸ್ವಲ್ಪ ದೂರದಲ್ಲಿ ತಾತ್ಕಾಲಿಕವಾಗಿ ಖಾದಿ ಅಂಗಡಿಯೊಂದನ್ನು ತೆರೆಯಲಾಗಿತ್ತು. ಅಲ್ಲಿ ಬಟ್ಟೆ ಹೊಲೆಯುವ ಅಂಗಡಿಯೂ ಇತ್ತು. ಅಲ್ಲಿಗೆ ಹೋಗಿ ಖಾದಿ ಸೀರೆಯನ್ನು ಕೊಂಡು

ರವಿಕೆಯನ್ನು ಹೊಲಿಸಿ ಧರಿಸಿಕೊಂಡು ಬಂದರು. ಖಾದಿಧಾರಿಗಳಾಗಿ ಬಂದಿದ್ದ ಇವರನ್ನು ಕಂಡು ಗಾಂಧೀಜಿಗೆ ಬಹಳ ಆನಂದವಾಗಿ ಪುಸ್ತಕವನ್ನು ವಾಪಸ್ಸು ಕೊಟ್ಟರು. ಅವರಿಬ್ಬರೂ ಎಂದೆಂದಿಗೂ ನಾವು ಖಾದಿಯನ್ನೇ ಧರಿಸುತ್ತೇವೆ" ಎಂದು ಸಂಕಲ್ಪ ಮಾಡಿದರು.

ಒಮ್ಮೆ ಮಕ್ಕಳಿಲ್ಲದ ದಂಪತಿಗಳು ತಾವು ತಂದಿದ್ದ ಬಾಳೆಹಣ್ಣು ಮತ್ತು ದ್ರಾಕ್ಷಿಯ ತಟ್ಟೆಯನ್ನು ಗಾಂಧಿ ಅವರ ಮುಂದಿಟ್ಟು ನಿಂತುಕೊಂಡರು. ಅವರಿಗೆ ಮಕ್ಕಳಾಗಿರಲಿಲ್ಲ. ಗಾಂಧಿ ಅವರ ಆಶೀರ್ವಾದ ಪಡೆದ ನಂತರವಾದರೂ ಮಕ್ಕಳಾಗಬಹುದೆಂಬ ಆಸೆಯಿಂದ ಬಂದಿದ್ದರು. ಈ ವಿಷಯವನ್ನು ತಿಳಿದು ಗಾಂಧೀಜಿ "ದಶರಥನಿಗೆ ಅನುಗ್ರಹ ಪಾಯಸದಿಂದ ನಾಲ್ಕು ಜನ ಪುತ್ರರತ್ನರು ಜನಿಸಿದರು. ಆ ರೀತಿ ವರಕೊಡಲು ನನ್ನಿಂದ ಸಾಧ್ಯವಿಲ್ಲ. ಯಾರನ್ನಾದರೂ ದತ್ತು ತೆಗೆದುಕೊಳ್ಳಿ. ಈ ನಾಡಿನಲ್ಲಿ ಎಷ್ಟು ಜನ ಮಕ್ಕಳಿಲ್ಲ? ಹಸಿದವರಿಗೆ ಅನ್ನ ನೀಡಿ, ಬೆತ್ತಲೆಯಾಗಿರುವವರಿಗೆ ಬಟ್ಟೆ ನೀಡಿ, ಆಶ್ರಯ ಬೇಕಾದವರಿಗೆ ಆಶ್ರಯ ಕೊಡಿ. ಈ ರೀತಿ ಮಾಡಿದರೆ ಇಡೀ ಮೈಸೂರಿಗೆ ನೀವು ನಿಜವಾದ ತಂದೆತಾಯಿಗಳಾಗುವಿರಿ" ಎಂದರು. ಇವರು ಕನ್ನಡದವರು, ಗಾಂಧೀಜಿ ಹೇಳಿದ್ದು ಇಂಗ್ಲೀಷಿನಲ್ಲಿ ಅವರಿಗೆ ಅರ್ಥವಾಗುವ ರೀತಿಯಲ್ಲಿ ಬೇರೆಯವರು ಕನ್ನಡದಲ್ಲಿ ಗಾಂಧೀಜಿ ಹೇಳಿದ್ದನ್ನೆಲ್ಲಾ ತಿಳಿಸಿದರು.

ಒಮ್ಮೆ ವೈದ್ಯ ಇಲಾಖೆಯ ಅಧಿಕಾರಿಗಳ ಸಂಸಾರದವರೆಲ್ಲಾ ಬಂದಿದ್ದರು. ಎಲ್ಲರೂ ಮಹಾತ್ಮರಿಗೆ ನಮಸ್ಕಾರ ಮಾಡಿದರು. ಎಲ್ಲರ ಉಡುಪು ಖಾದಿಯೇ ಆಗಿತ್ತು. ಹಿರಿಯ ಮಗಳು ಮಾತ್ರ ರೇಷ್ಮೆ ಸೀರೆ ಉಟ್ಟಿದ್ದಳು. ಅವರ ತಾಯಿ ಮಹಾತ್ಮರಿಗೆ "ಈ ಹುಡುಗಿ ಹಿರಿಯ ಮಗಳು ಕಾಲೇಜಿನಲ್ಲಿ ಓದುತ್ತಿದ್ದಾಳೆ, ಈ ಸಾರಿ ಬಿ.ಎ. ಪಾಸ್ ಮಾಡಿದಳು" ಎಂದರು. ಮಹಾತ್ಮರು ನಗುತ್ತಾ ಡಿಗ್ರಿ ತೆಗೆದುಕೊಂಡು ಏನು ಮಾಡುವೆ? ಕುರ್ಚಿಯ ಮೇಲೆ ಕೂಡುವುದು ತಾನೆ" ಎಂದರು, "ಮನೆಯಲ್ಲಿ ಇರುವೆನು". "ಮನೆಯಲ್ಲೇ ಇದ್ದು ಮಾಡುವುದೇನು?" ಏನು ತೋಚದ ಆಕೆ "ನನಗೆ ನೂಲುವುದಕ್ಕೆ ಬರುತ್ತದೆ" ಎಂದಳು.

"ಹಾಗಾದರೆ ಖಾದಿಯನ್ನೇಕೆ ಧರಿಸಿಲ್ಲ?" ಎಂದರು. "ಮಹಾತ್ಮಾಜಿ, ಇದು ಸ್ವದೇಶಿಯೇ, ಬೆಂಗಳೂರಿನಲ್ಲಿಯೇ ನೇಯ್ದ ಮೈಸೂರು ರೇಷ್ಮೆ" ಎಂದಳು. ಅದಕ್ಕೆ ಒಪ್ಪದಿದ್ದ ಗಾಂಧೀಜಿ "ನೀನು ಇನ್ನು ಮುಂದೆ ಖಾದಿಯನ್ನೇ ಧರಿಸಬೇಕು" ಎಂದು ಹೇಳಿದರು. "ಆಗಲಿ ಮಹಾತ್ಮಾಜಿ. ಈ ಬಟ್ಟೆಗಳೆಲ್ಲಾ ಹರಿದುಹೋದ ಮೇಲೆ ಖಾದಿಯನ್ನೇ ಉಪಯೋಗಿಸುವೆನು" ಎಂದಳು. ಆಗ ಗಾಂಧೀಜಿ "ನಿಮ್ಮ ಮನೆಯಲ್ಲಿ 50 ಸಾರಾಯಿ ಬುಡ್ಡಿಗಳಿವೆ ಎನ್ನು, ಕುಡಿಯುವುದನ್ನು ಬಿಡು ಎಂದು ಯಾರಾದರೂ ಹೇಳಿದರೆ ಸ್ವಲ್ಪ ತಾಳಿ, ಮನೇಲಿ 50 ಬುಡ್ಡಿಗಳಿವೆ; ಅವನ್ನೆಲ್ಲ ಕುಡಿದ ಮೇಲೆ ಬಿಡುವೆನು ಎಂದು ಹೇಳುವೆಯಾ!" ಎಂದರು. ಎಲ್ಲರಿಗೂ ಏನೂ ತೋಚದೆ ಸಾಷ್ಟಾಂಗ ನಮಸ್ಕಾರ ಹಾಕಿ ಹೊರಟರು. ಆ ವಾರದಲ್ಲಿ ಹೆಚ್ಚಾಗಿ ಮಹಿಳೆಯರೇ ಆಗಮಿಸಿದ್ದರಿಂದ ಕಳೆದ ವಾರ "ಮಹಿಳಾ ಸಪ್ತಾಹ" ನಡೆಯಿತೆಂದು ಮಹಾತ್ಮರು ಉದ್ಗರಿಸಿದರು.

ಗಣ್ಯ ವ್ಯಕ್ತಿಗಳು

ಬೆಂಗಳೂರಿನ ಕೋಟೆಯಲ್ಲಿ ಪ್ರಾರಂಭವಾಗಿದ್ದ (ಸ್ಥಾಪನೆ 04–06–1926) ಖಾದಿ ವಸ್ತ್ರಾಲಯದ ವ್ಯವಸ್ಥಾಪಕರಾಗಿದ್ದ ಟಿ. ಸದಾಶಿವಂ (ಎಂ. ಎಸ್. ಸುಬ್ಬುಲಕ್ಷ್ಮಿ ಅವರ ಪತಿ) ಅವರು ಗಿರಿಧಾಮಕ್ಕೆ ಆಗಮಿಸಿ ಗಾಂಧಿ ಅವರನ್ನು ಸಂದರ್ಶಿಸಿದರು.

ಬಹಳಷ್ಟು ದಿವಸಗಳಿಂದ ಗಿರಿಧಾಮದಲ್ಲೇ ವಿಶ್ರಾಂತಿ ಪಡೆಯುತ್ತಿದ್ದ ಮದರಾಸಿನ ಪ್ರಸಿದ್ಧ ವಕೀಲರಾದ ಎಲ್. ಎ. ಗೋವಿಂದರಾಘವ ಅಯ್ಯರ್ ಎಂಬ ವೃದ್ಧರು ಗಾಂಧಿ ಅವರನ್ನು ಭೇಟಿ ಮಾಡಿ "ನೀವು ಚರ್ಚೆ ಮಾಡಬಾರದು, ಮನಸ್ಸನ್ನು ಶಾಂತವಾಗಿ ಇಟ್ಟುಕೊಂಡರೆ ಯಾವ ಕಾರ್ಯವನ್ನು ಬೇಕಾದರೂ ಸಾಧಿಸಬಹುದು, ಈಗಂತೂ ನಾನು ನಿಮ್ಮೊಡನೆ ಯಾವುದೇ ವಿಷಯವಾಗಿ ಚರ್ಚಿಸುವುದಿಲ್ಲ, ಆಗಾಗ ಬಂದು ನೋಡಿಕೊಂಡು ಹೋಗುತ್ತೇನೆ, ಅಷ್ಟಕ್ಕೆ ಮಾತ್ರ ಅನುಮತಿ ಕೊಡಿ" ಎಂದು ಕೇಳಿದರು.

ಚಿತ್ತೂರಿನಲ್ಲಿ ಶಾಸನಸಭಾ ಸದಸ್ಯರಾಗಿದ್ದ ಸಿ. ದೊರೆಸ್ವಾಮಿ ಅಯ್ಯಂಗಾರ್ ಬಂದಿದ್ದರು. ಕಾಂಗ್ರೆಸ್ ಸದಸ್ಯರಿಗೆ ನೂಲುವುದು ಕಡ್ಡಾಯ ಮಾಡಿದಾಗಿನಿಂದಲೂ ಖಾದಿಧಾರಿಗಳಾಗಿದ್ದ ಅವರು ಯಾವಾಗಲೂ ನೂಲುತ್ತಿದ್ದರು. ಎಲ್ಲಿಗೆ ಹೋದರೂ ರಾಟೆಯನ್ನು ಜೊತೆಯಲ್ಲಿ ಒಯ್ಯುತ್ತಿದ್ದರು. ನಂದಿ ಗಿರಿಧಾಮಕ್ಕೆ ರಾಟೆಯನ್ನು. ಹೊತ್ತು ತಂದಿದ್ದರು. ಹಳೆ ಮಾದರಿಯ ರಾಟೆಯನ್ನು ಮೋಟಾರಿನಲ್ಲಿ ಒಯ್ಯುವುದು ಕಷ್ಟವೆಂದು ಸುಲಭವಾಗಿ ಒಯ್ಯುವಂತಹ ಮಡಚುವ ರಾಟೆಯನ್ನು ಅಯ್ಯಂಗಾರ್‌ಗೆ ಉಡುಗೊರೆಯಾಗಿ ಗಾಂಧೀಜಿ ನೀಡಿದರು. ಮದನ ಮೋಹನ ಮಾಳವೀಯ ಅವರು ಗಾಂಧಿ ಅವರನ್ನು ಕಾಣಲು ಆಗಮಿಸಿದ್ದರು. ಅವರು ಬಹಳ ಮಡಿ, ಆಚಾರವಂತರು. ಆಗ ರಾಜಾಜಿ ಗಿರಿಧಾಮದಲ್ಲಿ ಹೋಟೆಲ್ ಮಾಲೀಕರಾಗಿದ್ದ ರಾಮಚಂದ್ರ ಅಯ್ಯರ್ ಅವರ ಮನೆಯಲ್ಲಿ ಅವರಿಗೆ ವಿಶೇಷ ವಸತಿ ಏರ್ಪಾಟು ಮಾಡಿದ್ದರು.

ಒಬ್ಬ ನ್ಯಾಯಾಧಿಕಾರಿ ಆಗಮಿಸಿದ್ದರು. ಅವರು ಗಾಂಧಿ ಅವರನ್ನು ಕುರಿತು "ನೀವು ಪೂರ್ಣ ಗುಣ ಆಗುವವರೆಗೆ ನಂದಿ ಬೆಟ್ಟದಲ್ಲಿಯೇ ಇರಬೇಕು, ಆಗ ಈ ಬೆಟ್ಟದ ಕೀರ್ತಿ ಹೆಚ್ಚಿ, ಹೆಚ್ಚಿನ ಜನ ಬಂದಾರು" ಎಂದರು. ಗಾಂಧೀಜಿ ಮುಗುಳ್ನಗುತ್ತಾ "ಅಗತ್ಯವಾಗಿ ಆಗಬಹುದು, ಆದರೆ ಇದರಲ್ಲಿ ಬರುವ ಆದಾಯದಲ್ಲಿ ಅರ್ಧದಷ್ಟು ಖಾದಿ ನಿಧಿಗೆ ಕೊಡಬೇಕು" ಎಂದರು.

ಗಿರಣಿ ಮಾಲೀಕರು

ಇಬ್ಬರು ಗಿರಣಿ ಮಾಲೀಕರು ಆಗಮಿಸಿ ತಮ್ಮ ದುಃಖವನ್ನು ತೋಡಿಕೊಂಡರು. "ನಮ್ಮ ಗಿರಣಿ ಕಾರ್ಮಿಕರಿಗೆ ಏಕೆ ಅತೃಪ್ತಿಯೋ ಗೊತ್ತಿಲ್ಲ, ನಮಗೆ ಲಾಭ ಇಲ್ಲದಿದ್ದರೂ ಅವರಿಗಂತೂ ಲಾಭಾಂಶವನ್ನು ಕೊಡುತ್ತಿದ್ದೇವೆ. ಅವರಿಗಾಗಿ ನಾವು ಮಾಡದೆ ಇರುವುದು ಏನೂ ಇಲ್ಲ, ಆದರೆ ಅವರಿಗೆ ತೃಪ್ತಿಯೇ ಇಲ್ಲ. ಸಾಲದುದಕ್ಕೆ ಅವರನ್ನು ಎತ್ತಿ ಕಟ್ಟುವ

ಜನ ಬೇರೆ" ಎಂದರು ಆಗ ಗಾಂಧೀಜಿ "ಆದರೂ ಅವರಿಗೆ ಏನೋ ಕುಂದುಕೊರತೆ ಇದ್ದೇ ಇರುತ್ತದೆ. ಸೊಲ್ಲಾಪುರದಲ್ಲಿ ಕಾರ್ಮಿಕರಿಗೆ ಅತ್ಯುತ್ತಮವಾದ ಯೋಗಕ್ಷೇಮ ಕಾರ್ಯ ನಡೆದಿದೆ. ಸೊಗಸಾದ ಮನೆ ಎಲ್ಲಾ ಅನುಕೂಲ ಇದೆ, ಆದರೂ ಅಲ್ಲಿನ ಕಾರ್ಮಿಕರು ಇನ್ನೂ ಹೆಚ್ಚು ಕೊಡಿ ಎಂದು ಹೇಳುತ್ತಲೇ ಇರುತ್ತಾರೆ, ಈ ಅಸಮಾಧಾನವನ್ನು ತಗ್ಗಿಸಲು ಅಲ್ಲಿನ ವ್ಯವಸ್ಥಾಪಕರು ಎಷ್ಟೋ ಏರ್ಪಾಟು ಮಾಡಿದ್ದಾರೆ. ಅವರ ಸಂಗಡ ಮಾತನಾಡಿ" ಎಂದರು.

ಪಾದ್ರಿಯೊಡನೆ ಚರ್ಚೆ

ಚಿಕ್ಕಬಳ್ಳಾಪುರದಲ್ಲಿ 35 ವರ್ಷಗಳಿಂದಲೂ ಇದ್ದ ವೃದ್ಧ ಪಾದ್ರಿಯೊಬ್ಬರು ಗಾಂಧೀಜಿಯನ್ನು ಕಾಣಲು ಬಂದಿದ್ದರು, ಅವರು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಧರ್ಮೋಪದೇಶ ಮಾಡುತ್ತಿದ್ದರು. ಗಾಂಧಿ ಅವರೊಡನೆ ಉದ್ಯೋಗಗಳನ್ನು ಪುನರುಜ್ಜೀವನಗೊಳಿಸಲು ತಮ್ಮ ಮಿಷನ್ನಿನ ಶಾಖೆಗಳು ಕೈಗೊಂಡಿರುವ ಕಾರ್ಯ ಹಾಗೂ ಖಾದಿ ಗ್ರಾಮೋದ್ಯೋಗದ ಬಗ್ಗೆ ಮಾತನಾಡಿದರು. ಕೆಲವು ವರ್ಷಗಳ ಹಿಂದೆ ಒಬ್ಬ ಮಹಿಳೆ ನಾಗರಕೋಯಿಲ್‌ನಲ್ಲಿ ಜರತಾರಿ ಕುಟೀರ ಉದ್ಯೋಗವನ್ನು ಪ್ರಾರಂಭಮಾಡಿ ಈಗ ಪ್ರತಿ ವರ್ಷವೂ ಐದು ಲಕ್ಷ ರೂಪಾಯಿಗಳ ಜರತಾರಿಯನ್ನು ಪರದೇಶಕ್ಕೆ ಕಳುಹಿಸುತ್ತಿದ್ದಾಳೆ. ಇದರಿಂದ ದೇಶಕ್ಕೆ ಲಾಭ ದೊರೆದಂತಾಗಲಿಲ್ಲವೇ ಎಂದು ಗಾಂಧಿ ಅವರನ್ನು ಪಾದ್ರಿ ಕೇಳಿದರು.

ಅದಕ್ಕೆ ಗಾಂಧೀಜಿ "ಇದನ್ನು ನನಗೆ ಯಾರೋ ಹೇಳಿದ್ದರು, ಕೇವಲ ನೀವು ನಿಮ್ಮ ಜನರ ಯೋಚನೆಯನ್ನು ಮಾಡಿದಿರಿ, ನಮ್ಮ ಕೋಟಿ ಕೋಟಿ ಬಡ ಜನರನ್ನು ಕುರಿತು ಯೋಚಿಸಲಿಲ್ಲ. ಈ ಜರತಾರಿಯನ್ನು ಪರದೇಶಕ್ಕೆ ಕಳುಹಿಸಿಕೊಡಬೇಕೆಂದು ನೀವು ಹೇಳುತ್ತೀರಿ, ಅದಕ್ಕೆ ನಮ್ಮಲ್ಲಿ ಗಿರಾಕಿ ಇಲ್ಲ ಎಂದಾಯಿತು. ಹೊರದೇಶದ ಗಿರಾಕಿಯನ್ನು ಅವಲಂಬಿಸಿದ ಯಾವ ಉದ್ಯೋಗವು

ದೊಡ್ಡ ಪ್ರಮಾಣದ್ದಾದರೆ ಒಳ್ಳೆಯದಲ್ಲ. ನಮ್ಮ ದೇಶದಲ್ಲಿ ಸರ್ವತ್ರ ಉಪಯೋಗವಾಗುವ ಪದಾರ್ಥಗಳನ್ನು ಉತ್ಪತ್ತಿ ಮಾಡುವ ಉದ್ಯೋಗವನ್ನು ಅವರಿಗೆ ಕಲಿಸಬೇಕು" ಎಂದು ಹೇಳಿದರು. ಹೀಗೆಯೇ ಬಹಳ ದೀರ್ಘಕಾಲ ಚರ್ಚೆಯ ನಂತರ ಪಾದ್ರಿಯವರು "ನಿಮ್ಮ ಮಾತು ನಿಜ, ನೀವು ಜನರಲ್ಲಿ ನೆಲೆಗೊಂಡಿದ್ದ ಸೋಮಾರಿತನವನ್ನು ಹೋಗಲಾಡಿಸಿ ಚೇತನವನ್ನು ತುಂಬಿದ್ದೀರಿ" ಎಂದರು.

ಅಬಕಾರಿ ಅಧಿಕಾರಿಗಳು

ಇಬ್ಬರು ಅಬಕಾರಿ ಅಧಿಕಾರಿಗಳು ಆಗಮಿಸಿದರು. ಅವರಲ್ಲೊಬ್ಬರು ನಿವೃತ್ತರಾಗಿದ್ದರು. ಕಬ್ಬನ್ ಭವನದಲ್ಲಿ ಆಗ್ಗೆ ಉತ್ತಮ ಪುಸ್ತಕ ಭಂಡಾರವಿತ್ತು. ಗಾಂಧೀಜಿ ಆಗಾಗ್ಗೆ ಅಲ್ಲಿ ಹೋಗುತ್ತಿದ್ದರು. ಆ ಭಂಡಾರದಲ್ಲಿ ವಿಲ್ಕ್ಸ್ ಬರೆದಿದ್ದ ಮೈಸೂರು ಚರಿತ್ರೆಯ ಪುಸ್ತಕಗಳನ್ನು ಓದಿ ಟಿಪ್ಪುಸುಲ್ತಾನನ ಇತಿಹಾಸವನ್ನು ತಿಳಿದುಕೊಂಡಿದ್ದರು. ಅಬಕಾರಿ ಅಧಿಕಾರಿಗಳಿಗೆ ಗಾಂಧೀಜಿ ಕೇಳಿದರು "ಯಾರಾದರೂ ಸಂಶೋಧಕರು ಹಿಂದೂ ಮತ್ತು ಮುಸಲ್ಮಾನ ರಾಜವಂಶಗಳ ಕಾಲದಲ್ಲಿ ಹೆಂಡದ ಹಣ ಯಾವ ರೀತಿಯಲ್ಲಿ ಬರುತಿತ್ತು ಎಂದು ಸಂಶೋಧನೆ ಮಾಡಬಾರದೇ, ಟಿಪ್ಪು ಈ ಚಟಕ್ಕೆ ಬಲಿಯಾಗಿದ್ದ ಎಂಬ ಮಾತೇ ಆತನ ಚರಿತ್ರೆಯಲ್ಲಿ ಬರುವುದಿಲ್ಲ, ಎಲ್ಲಾ ಇತಿಹಾಸಕಾರರು ಟಿಪ್ಪು ಹೆಂಡ ಮಾರುವುದನ್ನು ನಿಷೇಧಿಸಿದ್ದನೆಂದು ಬರೆದಿರುತ್ತಾರೆ. ಈಚಲು ಮರಗಳನ್ನೆಲ್ಲಾ ಕಡಿದು ಹಾಕಬೇಕೆಂದು ಅಪ್ಪಣೆ ಮಾಡಿದ್ದ. ಇಷ್ಟೆಲ್ಲಾ ಮಾಡಿದ್ದು ಕುರಾನಿನ ಆಧಾರದ ಮೇಲೆ, ಕುರಾನಿನಲ್ಲಿ ಯಾವುದೇ ಮಾದಕ ದ್ರವ್ಯವನ್ನು ಸೇವಿಸಬಾರದು ಎಂದಿದೆ. ಟಿಪ್ಪು ತನ್ನ ಸೈನ್ಯದಲ್ಲಿಯೂ ಯಾರೂ ಕುಡಿಯದಂತೆ ನಿಷೇಧಿಸಿದ್ದ ಗೊತ್ತೇ" ಎಂದು ಹೇಳಿ ಬಹಳ ಸಮಯ ಪಾನನಿರೋಧದ ಬಗ್ಗೆ ಚರ್ಚೆ ನಡೆಸಿದರು.

ಹೋಟೆಲ್ ಮಾಲೀಕರು

ಬೆಂಗಳೂರು ನಗರದ ಪ್ರಸಿದ್ಧ ಮಾಡರ್ನ್ ಹಿಂದೂ ಹೋಟೆಲ್ ಮಾಲೀಕರಾದ ಕೆ. ಟಿ. ಅಪ್ಪಣ್ಣ ಅವರು ಸುಲ್ತಾನ್‌ಪೇಟೆಗೆ ಹೋಗಿ ತಮ್ಮ ಕಾರಿನಲ್ಲಿ ಅಡಿಗೆಗೆ ಬೇಕಾದ ಸಾಮಾನುಗಳನ್ನು ಬೆಟ್ಟದ ಮೇಲಕ್ಕೆ ಸಾಗಿಸಿ, ತಿಂಡಿ, ಊಟದ ಏರ್ಪಾಡನ್ನು ಆಗಾಗ್ಗೆ ನಂದಿ ಬೆಟ್ಟಕ್ಕೆ ಬರುತ್ತಿದ್ದ ಜನರ ತಿಂಡಿ, ಊಟಕ್ಕಾಗಿ ಮಾಡುತ್ತಿದ್ದರು. ಇದು ಗಾಂಧಿ ಅವರಿಗೆ ತಿಳಿದಿತ್ತು. ಒಂದು ದಿವಸ ಮಹಾತ್ಮರ ದರ್ಶನಕ್ಕೆಂದು ಅಪ್ಪಣ್ಣನವರು ಸೇರಿದಂತೆ ನೂರಾರು ಜನರು ಹೊರಗಡೆ ಕಾಯುತ್ತಿದ್ದಾಗ ಅಪ್ಪಣ್ಣನವರಿಗೆ ಮತ್ತು ಅವರು ಜೊತೆಯಲ್ಲಿದ್ದ ಇನ್ನೊಬ್ಬರಿಗೆ ಮಾತ್ರ ಸಂದರ್ಶನಕ್ಕೆ ಮಹಾತ್ಮರು ಅಪ್ಪಣೆ ಕೊಟ್ಟರಂತೆ. ಹೋಟೆಲ್ ಉದ್ಯಮದಲ್ಲಿ ಅಪ್ಪಣ್ಣನವರಿಗೆ ವ್ಯಾಪಾರದ ದೃಷ್ಟಿಗಿಂತ ಸಾರ್ವಜನಿಕ ಸೇವೆಯೇ ಮುಖ್ಯ ಗುರಿಯಾಗಿತ್ತು.

ಮತ್ತೊಂದು ದಿನ ಅಪ್ಪಣ್ಣನವರು ಮದರಾಸ್‌ನ ಶಂಕರ ಅಯ್ಯರ್ (ಮದರಾಸು ಲಂಚ್ ಹೋಂ ಮಾಲೀಕರು) ಹಾಗೂ ಮಾಜಿ ಮೇಯರ್ ಎಸ್. ಸತ್ಯಮೂರ್ತಿ ಅವರ ಜೊತೆಯಲ್ಲಿ ಗಿರಿಧಾಮಕ್ಕೆ ಬಂದಿದ್ದರು. ರಾಜಾಜಿ ಮತ್ತು ಗಾಂಧಿ ಅವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ ಎಂದು ದರ್ಶನಕ್ಕೆ ಆಸ್ಪದ ಕೊಡಲಿಲ್ಲ. ಆಗ ರಾಮಚಂದ್ರ ಅಯ್ಯರ್ ಅವರು "ಗಾಂಧೀಜಿ ಸಂಜೆ ಹೊರ ಸಂಚಾರಕ್ಕೆ ಬರುವ ಸಮಯಕ್ಕೆ ಸರಿಯಾಗಿ ಯೋಗನಂದೀಶ್ವರ ದೇವಾಲಯದ ಬಳಿ ಕಾದಿದ್ದು ಹಾದಿಯಲ್ಲಿ ಹಣ್ಣು ಹಾಗೂ ಹಣದ ಲಕೋಟೆಯನ್ನು ತಟ್ಟೆಯಲ್ಲಿಟ್ಟು ದೂರದಲ್ಲಿ ನಿಂತುಕೊಳ್ಳಿ" ಎಂದು ಉಪಾಯ ಹೇಳಿಕೊಟ್ಟರು. ಹಾಗೆಯೇ ಮಾಡಿದರು, ಹಾದಿಯಲ್ಲಿಡಲಾಗಿದ್ದ ಹಣ್ಣಿನ ತಟ್ಟೆಯನ್ನು ನೋಡಿ ಗಾಂಧೀಜಿ ಆಶ್ಚರ್ಯಚಕಿತರಾದರು. ಇದರ ಹಿನ್ನೆಲೆಯನ್ನು ತಿಳಿದುಕೊಂಡ ಅವರು ಆ ಮೂವರನ್ನು ತಮ್ಮ ಕೊಠಡಿಗೆ ಕರೆದುಕೊಂಡು ಹೋಗಿ ಮಾತುಕತೆ ನಡೆಸಿದರು.

ಮುಖ್ಯೋಪಾಧ್ಯಾಯರು

ಮೈಸೂರು ರಾಜ್ಯದ ಉನ್ನತ ಅಧಿಕಾರಿಯೊಬ್ಬರು ಆಗಮಿಸಿದ್ದರು. ಅವರ ಮನಸ್ಸನ್ನು ಕಾಡುತ್ತಿದ್ದ ಪ್ರಶ್ನೆಯೊಂದನ್ನು ಗಾಂಧೀಜಿಗೆ ತಿಳಿಸಿದರು "ಜನತೆಗೆ ಅಧ್ಯಾತ್ಮಿಕ ಆವಶ್ಯಕತೆಯೇ ಬಹಳ ಹೆಚ್ಚಿನದು. ಅದನ್ನು ಬಿಟ್ಟು ನೀವು ಆರ್ಥಿಕ ಅವಶ್ಯಕತೆಯನ್ನು ಏಕೆ ಒತ್ತಿ ಹೇಳುತ್ತೀರಿ! ಲೋಕವೇ ದ್ವೇಷ, ಕಲಹ, ಅಪ್ರಾಮಾಣಿಕತೆ, ವಂಚನೆಗಳಿಂದ ತುಂಬಿಹೋಗಿದೆ, ಬಡವರಿಗೆ ಈ ಜನ್ಮದಲ್ಲೂ ಬಿಡುಗಡೆ ಇಲ್ಲ, ಮುಂದಿನ ಜನ್ಮದಲ್ಲೂ ಇಲ್ಲ. ನಿಮ್ಮಂಥ ಆಧ್ಯಾತ್ಮಿಕ ಅನುಭವಶಾಲಿಗಳು ಲೋಕದ ಆಧ್ಯಾತ್ಮಿಕ ಅವಶ್ಯಕತೆಯನ್ನು ಅಲ್ಲವೇ ತೃಪ್ತಿಪಡಿಸಬೇಕಾದದ್ದು" ಎಂದರು.

ಲೋಕಾಭಿರಾಮವಾಗಿ ಕೇಳಿದ ಈ ಪ್ರಶ್ನೆಗೆ ಗಾಂಧೀಜಿ ಹಾಸಿಗೆಯಲ್ಲಿ ಮಲಗಿಕೊಂಡೇ "ನೀವು ಹೇಳುವುದು ವಿದ್ಯಾವಂತರ ವಿಷಯದಲ್ಲಿ ನಿಜ ಇರಬಹುದು. ರಾಟೆಯ ಆರ್ಥಿಕ ಅಂಶವನ್ನು ಅವರಿಗೆ ನಾನು ಹೇಳುವುದು ಇಲ್ಲ. ಅದರ ಆಧ್ಯಾತ್ಮಿಕ ಅಂಶವನ್ನು ಅರಿತುಕೊಳ್ಳಬೇಕೆಂದು ನನ್ನ ಬಯಕೆ, ನೂಲನ್ನು ನೂತು ಖಾದಿಯನ್ನು ಧರಿಸಿದರೆ ಮಾತ್ರವೇ ಅವರು ಬಡವರ ಬಗ್ಗೆ ಸಹಾನುಭೂತಿಯನ್ನು ತೋರಿಸಿದ ಹಾಗೆ. ಬಡವರಿಗೆ ಹಾಗಲ್ಲ, ಅವರಿಗೆ ಆರ್ಥಿಕತೆಯೇ ಆಧ್ಯಾತ್ಮಿಕತೆ, ಹಸಿವಿನಿಂದ ಕಂಗಾಲಾಗಿರುವ ಜನಕೋಟಿಗೆ ಬೇರೆ ಯಾವುದೂ ರುಚಿಸದು. ಬೇರೆ ಏನು ಹೇಳಿದರೂ ಅವರ ಕಿವಿಗೆ ಹೋಗದು, ಅವರ ಬಳಿಗೆ ಅನ್ನವನ್ನು ಕೊಂಡೊಯ್ದರೆ ಮಾತ್ರ ನಿಮ್ಮನ್ನೇ ದೇವರು ಎಂದಾರು. ಅವರಿಗೆ ಅನ್ನ ಬಿಟ್ಟು ಬೇರೆ ಯಾವ ಯೋಚನೆಯೂ ಸಾಧ್ಯವಿಲ್ಲ", ಎಂದು ಉತ್ತರ ಕೊಟ್ಟರು.

ದಾದಿಯರೊಂದಿಗೆ

ಮಹಾತ್ಮರ ಶುಶ್ರೂಷೆಗೆ ಆಗಮಿಸಿದ್ದ ದಾದಿಯರಿಗೆ ತಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಆರೋಗ್ಯ ಸುಧಾರಿಸಿದ ಗಾಂಧೀಜಿಯನ್ನು ಕಂಡು ಧೈರ್ಯ ಬಂತು. ಅವರು ಗಾಂಧೀಜಿಗೆ ಹೀಗೆ ಕೇಳಿದರು.

"ವಾರದಲ್ಲಿ ಒಂದು ದಿನವಾದರೂ ಬಿಡುವಾಗಿ ಇರಬಾರದೇ? ಸೋಮವಾರ ಮೌನ ದಿನವಾದರೂ ಕೆಲಸ ಮಾಡುತ್ತಿರುತ್ತೀರಿ, ಅಂದು ಪೂರ್ತಿ ವಿರಾಮ ಇರಬೇಕು. ಬರವಣಿಗೆ ಕೂಡದು, ಬೇಕಾದರೆ ಆಟವಾಡಬಹುದು" ಎಂದರು. ಅದಕ್ಕೆ ಗಾಂಧೀಜಿ "ಯಾವಾಗಲೂ ಕೆಲಸ ಮಾಡುತ್ತಿರುವುದು ಉತ್ತಮ ಆಟ, ನಾನು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಹಾಗೆಯೇ ಮಾಡುತ್ತಿದ್ದೆ. ಉದಾಹರಣೆಗೆ ನನ್ನ ಪತ್ನಿಗೆ ರವಿಕೆ ಹೊಲಿದು ಕೊಡುತ್ತಿದ್ದೆ. ಆಕೆ ತೊಡುತ್ತಿದ್ದಳು. ಬೇಕಾದರೆ ಆಕೆಯನ್ನೇ ಕೇಳಿ" ಎಂದರು.

ಮದರಾಸಿನ ವಕೀಲರು

ಆ ಸಮಯದಲ್ಲಿ ಮದ್ರಾಸ್ ವಿಶ್ವವಿದ್ಯಾಲಯ ಕಾನೂನು ಪರೀಕ್ಷಾ ಮಂಡಳಿ ಸಭೆ ಬೆಂಗಳೂರಿನಲ್ಲಿ ನಡೆಯಿತು. ಅದಕ್ಕೆ ಬಂದಿದ್ದವರೆಲ್ಲರೂ ಒಂದು ಸಂಜೆ ಗಿರಿಧಾಮಕ್ಕೆ ಆಗಮಿಸಿದ್ದರು. ಇವರೆಲ್ಲರನ್ನೂ ರಾಜಾಜಿ ಅವರು ಗಾಂಧಿ ಅವರಿಗೆ ಪರಿಚಯಿಸುತ್ತಾ "ಮದರಾಸಿನ ವಕೀಲರು ತುಂಬಾ ಒಳ್ಳೆಯದನ್ನು ಮಾಡಿದ್ದಾರೆ" ಎಂದರು. "ಏನು ಒಳ್ಳೆಯದು ಮಾಡಿದ್ದಾರೆ? ಖಾದಿಯನ್ನು ಎಲ್ಲರೂ ತೊಟ್ಟಿದ್ದಾರೋ ಅಥವಾ ಖಾದಿ ನಿಧಿಗೆ ಹಣ ಕೊಟ್ಟಿದ್ದಾರೋ?" ಎಂದು ಗಾಂಧೀಜಿ ಪ್ರಶ್ನಿಸಿದರು. ಎರಡೂ ಎಂದರು ರಾಜಾಜಿ. ಆಗ "ಮದರಾಸಿನ ಈ ವಕೀಲರು ವ್ಯವಹಾರ ಚತುರರು ಎಂದು ನನಗೆ ಮೊದಲೇ ತಿಳಿದಿದೆ" ಎಂದರು ಗಾಂಧೀಜಿ.

ದಕ್ಷಿಣ ಆಫ್ರಿಕಾ ಸರ್ಕಾರ ಮತ್ತು ಭಾರತ ಸರ್ಕಾರಗಳ ನಡುವಿನ ಸರಕಾರಗಳನ್ನು ಸುಗಮಗೊಳಿಸಲು ಭಾರತ ಸರಕಾರವು ಪ್ರಥಮ ಏಜೆಂಟ್ ಜನರಲ್ ಆಗಿ ದಕ್ಷಿಣ ಆಫ್ರಿಕಾ ದೇಶಕ್ಕೆ ಗಾಂಧಿ ಅವರ ಶಿಫಾರಸ್ಸಿನ ಮೇರೆಗೆ ರೈಟ್ ಹಾನರಬಲ್ ವಿ.ಎಸ್. ಶ್ರೀನಿವಾಸ ಶಾಸ್ತ್ರಿಗಳನ್ನು ನೇಮಕ ಮಾಡಿತು. ಈ ಸಂಬಂಧವಾಗಿ ಮಹತ್ತರ ಸಲಹೆಯನ್ನು ಪಡೆಯಲು ಶಾಸ್ತ್ರಿಗಳು ಗಿರಿಧಾಮಕ್ಕೆ ಆಗಮಿಸಿದ್ದರು.

ಶ್ರೀನಿವಾಸಪುರದಿಂದ ಎಸ್. ಜಿ. ಶ್ರೀಕಂಠಯ್ಯ ಆಗಾಗ ಗಾಂಧಿ ಅವರನ್ನು ಕಾಣಲು ಬರುತ್ತಿದ್ದರು. ಗುಡಿಬಂಡೆಯಿಂದ ಶಾಮರಾವ್, ಆವಲಕೊಂಡಾರೆಡ್ಡಿ, ರಾಮಯ್ಯ, ಚಲಪತಿನಾಯ್ಡು, ರಾಮಪಿಳ್ಳಪ್ಪ, ಹಾಗೂ ಬಿ. ಎಸ್ ರಾಮಾಚಾರ್ (ಬಿಸ್ರಾ), ಇವರುಗಳು ಗಿರಿಧಾಮದಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ನವರತ್ನ ರಾಮರಾಯರು ತಮ್ಮ ಆರು ಜನ ಸ್ನೇಹಿತರೊಡನೆ ಗಾಂಧಿ ಅವರ ದರ್ಶನ ಪಡೆಯಲು ನಂದಿ ಬೆಟ್ಟಕ್ಕೆ ಆಗಮಿಸಿದರು. ರಾಜಾಜಿಯವರು ಅವರಿಗೆ ಮಹಾತ್ಮರ ದರ್ಶನ ಏರ್ಪಾಟು ಮಾಡಿದರು. ಎಲ್ಲರೂ ಒಳಕ್ಕೆ ಹೋಗಿ ನೂಲುತ್ತಾ ಕುಳಿತಿದ್ದ ಮಹಾತ್ಮರ ಎದುರಿಗೆ ಕುಳಿತರು. ಮಹಾತ್ಮರು ಸ್ವಲ್ಪ ಹೊತ್ತು ಮಾತನಾಡುತ್ತಿದ್ದಂತೆಯೇ ರಾಜಾಜಿ ಗಾಂಧಿ ಅವರಿಗೆ ಮಾತನಾಡಿದ್ದು ಸಾಕು ಎಂದು ಸನ್ನೆ ಮಾಡಿದರು. ಗಾಂಧೀಜಿ **"My monitor is warning me that I have talked enough. I must stop. God bless you"** ಎಂದರು. ಎಲ್ಲರೂ ಕೈ ಮುಗಿದು ಬಂದರು. ಮೈಸೂರು ಪ್ರಾಚ್ಯ ವಸ್ತು ಸಂಶೋಧನಾ ಇಲಾಖೆ ನಿರ್ದೇಶಕರಾಗಿದ್ದ ಆರ್. ಶಾಮಾಶಾಸ್ತ್ರಿಗಳು ಆಗಮಿಸಿ ಕೌಟಿಲ್ಯನ ಅರ್ಥಶಾಸ್ತ್ರ ಬಗ್ಗೆ ಚರ್ಚಿಸಿದರು.

ಬೆಂಗಳೂರಿನಿಂದ ಗಿರಿಧಾಮಕ್ಕೆ ಬರುವವರು ಚಿಕ್ಕಬಳ್ಳಾಪುರದ ನ್ಯಾರೋಗೇಜ್ ರೈಲಿನಲ್ಲಿ ನಂದಿ ರೋಡ್ ಸ್ಟೇಷನ್‌ಗೆ ಬಂದು ಅಲ್ಲಿಂದ ಎರಡು ಮೈಲಿ ದೂರವಿರುವ ಸುಲ್ತಾನ್ ಪೇಟೆಗೆ ನಡೆದುಕೊಂಡು ಅಥವಾ ಜಟಕಾ ಗಾಡಿಯಲ್ಲಿ ಬರುತ್ತಿದ್ದರು. ಬೆಟ್ಟ ಹತ್ತುವುದಕ್ಕೆ ಆಗದೆ ಇರುವವರು ಎರಡು ರೂಪಾಯಿ ಕೊಟ್ಟು ಡೋಲಿಗಳಲ್ಲಿ ಬರುತ್ತಿದ್ದರು.

ಗಣ್ಯವ್ಯಕ್ತಿಗಳು ಆಗಮಿಸಿದರೆ ಬೆಟ್ಟ ಹತ್ತುತ್ತಿದ್ದಂತೆಯೇ ಸುಲ್ತಾನ್‌ಪೇಟೆ ಇನ್ನರ್ ಸರ್ಕಲ್ಲಿನ ಮೋಟಾರ್ ಷೆಡ್ಡಿನಲ್ಲಿದ್ದ ಟೆಲಿಫೋನ್ ಮೂಲಕ ಸುದ್ದಿಯನ್ನು ಮೇಲಕ್ಕೆ ಮುಟ್ಟಿಸಿ ಅವರಿಗೆ ವಸತಿ-ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದರು. ಗಿರಿಧಾಮಕ್ಕೆ ಬರುವವರೆಲ್ಲರಿಗೂ ಸುಲ್ತಾನ್‌ಪೇಟೆ ಕೇಂದ್ರ ಬಿಂದುವಾಗಿತ್ತು.

ದಿವಾನರ ಭೇಟಿ

ಮೈಸೂರು ಸಂಸ್ಥಾನದ ಮೂವರು ದಿವಾನರುಗಳು ಗಾಂಧಿ ಅವರನ್ನು ಭೇಟಿಯಾಗಲು ಮೇ 26ರಂದು ಗಿರಿಧಾಮಕ್ಕೆ ಆಗಮಿಸಿದ್ದರು. ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ಹಿಂದಿನ ದಿವಾನರಾಗಿದ್ದ ಸರ್ ಎಮ್. ವಿಶ್ವೇಶ್ವರಯ್ಯನವರನ್ನು ಮತ್ತು ಹಂಗಾಮಿ ದಿವಾನರಾಗಿದ್ದ ಮೀರ್ ಹಂಜಾ ಹುಸೇನ್ ಸಾಹೇಬರನ್ನು ಕರೆದುಕೊಂಡು ಬಂದಿದ್ದರು. ಮಿರ್ಜಾ ಇಸ್ಮಾಯಿಲ್ ಅವರನ್ನು ವಿಶ್ವೇಶ್ವರಯ್ಯನವರು ಗಾಂಧಿ ಅವರಿಗೆ ಪರಿಚಯಿಸುತ್ತಾ "ಇವರು ಈಗಿನ ದಿವಾನರು, ನನ್ನ ಕಾಲ ಆಗಲೇ ಹಿಂದೆ ಬಿತ್ತು. ಇವರು ರಾಜ್ಯದ ವ್ಯವಹಾರಗಳಲ್ಲಿ ಬಹಳ ಆಸಕ್ತಿ ವಹಿಸುತ್ತಿದ್ದಾರೆ. ದೇಶ ಅವರಿಂದ ಇನ್ನೂ ಎಷ್ಟೋ ವರ್ಷ ಕಾಲ ಸೇವೆ ಬಯಸುತ್ತದೆ. ಆದ್ದರಿಂದ ಅವರು ತಮ್ಮ ಶಕ್ತಿಯನ್ನು ಕಾಪಾಡಿಕೊಳ್ಳಬೇಕು" ಎಂದು ಹೇಳಿದರು.

ಗಾಂಧೀಜಿ ಒಮ್ಮೆ ಮೈಸೂರು ಆಡಳಿತವನ್ನು 'ರಾಮರಾಜ್ಯ' ಎಂದು ಕರೆದಿದ್ದರು. ಆಮೇಲೆ ರಾಮರಾಜ್ಯವಾಗಿ ಉಳಿಯಲಿಲ್ಲ ಎಂದಿದ್ದರು. "ನೀವು ದಿವಾನರಾಗಿದ್ದಾಗ ರಾಮರಾಜ್ಯವಾಗಿತ್ತು ಆಮೇಲೆ ಹಾಗೆ ಉಳಿಯಲಿಲ್ಲ ಎನ್ನುತ್ತೀರೇನು ನೀವು?" ಎಂದು ನಗುನಗುತ್ತಾ ಗಾಂಧೀಜಿ ವಿಶ್ವೇಶ್ವರಯ್ಯನವರನ್ನು ಕೇಳಿದರು. ನಂತರ ಕೈ ನೂಲು, ಕೈಮಗ್ಗ, ಗೋರಕ್ಷಣೆ, ಗೋಸಂವರ್ಧನೆ, ಕ್ಷೀರ ಕ್ಷೇತ್ರಗಳು, ಚರ್ಮಾಲಯಗಳು ಮತ್ತು ಗಂಧದ ಕಾರ್ಖಾನೆಗಳ ಬಗ್ಗೆ ಚರ್ಚೆಯಾದ ನಂತರ ಕೆಳಕಂಡಂತೆ ಸಂವಾದ ನಡೆಯಿತು.

<u>ಮಹಾತ್ಮಾಜಿ</u> : ಸಂಸ್ಥಾನದ ಅನೇಕ ಉದ್ಯೋಗಿಗಳು "ಖಾದಿ ಧರಿಸಲು ಸರ್ಕಾರದ ಅಡ್ಡಿಯಿದೆ, ಅದಕ್ಕಾಗಿ ನಾವು ಖಾದಿ ಧರಿಸುವುದಿಲ್ಲ" ಎನ್ನುತ್ತಾರೆ, ಇದು ಆಶ್ಚರ್ಯದ ಮಾತಲ್ಲವೇ?

<u>ಮಿರ್ಜಾ:</u> ಹಾಗೆಂದ ಉದ್ಯೋಗಿ ಯಾರು? ಚರಕ ಪ್ರಚಾರಕ್ಕಾಗಿ ನಾವು ಹೆಣಗಾಡುತ್ತಿದ್ದೇವೆ. ಹೀಗಿರುವಾಗ ಅಧಿಕಾರಿಗಳು ಖಾದಿ ಧರಿಸಲಿಕ್ಕೆ ನಾವು ಅಡ್ಡಿ ಮಾಡುವುದು ಎಂದರೇನು?

ಮಹಾತ್ಮಾಜಿ: ನಾನೇನೋ ಹಾಗೆಯೇ ಎಣಿಸಿದ್ದೇನೆ, ನಿಮ್ಮ ಅಭ್ಯಂತರವೇನೂ ಇಲ್ಲವಾದರೆ ಕೊಲ್ಲಾಪುರದಲ್ಲಿ ಮಾಡಿದಂತೆ ಇಲ್ಲಿನ ಅಧಿಕಾರಿಗಳು ಖಾದಿ ಧರಿಸುವುದಕ್ಕೆ ಸರಕಾರದವರು ಕೊಂಚವೂ ಅಡ್ಡಿ ಮಾಡುವುದಿಲ್ಲವೆಂದು ನಾನು ಪ್ರಸಿದ್ಧಿಪಡಿಸಲೇ!

ಮಿರ್ಜಾ: ಆಗಬಹುದು, ನನ್ನ ಅಭ್ಯಂತರವೇನೂ ಇಲ್ಲ.

ವಿಶ್ವೇಶ್ವರಯ್ಯ: ಮಹಾತ್ಮಾಜಿ, ಈ ರೀತಿ ನೆಪ ಹೇಳುವ ಅಧಿಕಾರಿಗಳನ್ನು ನೀವು ಗುರುತಿಸಿ ಅವರ ಹೆಸರನ್ನು ದಿವಾನರ ಗಮನಕ್ಕೆ ತಂದು ಬಿಡಿ.

ಮಿರ್ಜಾ: ಒಮ್ಮೆ ಶಿಕ್ಷಣ ಅಧಿಕಾರಿಗಳಾಗಿದ್ದ ಮಿ. ಮೆಕ್ಕೆಯವರು ಆಗಮಿಸಿ 'ಖಾದಿ ಧರಿಸಬಹುದೇ' ಎಂದು ನನ್ನನ್ನು ಕೇಳಿದಾಗ 'ಧರಿಸಿ. ನನ್ನನ್ನೇಕೆ ಕೇಳಬೇಕು?' ಎಂದು ಸಹ ಹೇಳಿದೆ. ಬ್ರಿಟಿಷ್ ಅಧಿಕಾರಿಗಳಿಗೂ ಕೂಡ ಖಾದಿ ಚಳುವಳಿ ಪ್ರೋತ್ಸಾಹ ಕೊಡಿ ಎಂದು ಹೇಳಿದ್ದೇನೆ. ಮಹಾತ್ಮಾಜಿ ಬಹಳ ಸಂತೋಷ ಎಂದು ಸಂವಾದ ಮುಗಿಸಿದರು.

ಮೇ ಕೊನೆಯ ವಾರದಲ್ಲಿ ಜಮ್ನಲಾಲ್ ಬಜಾಜ್, ಕೊಂಡಾ ವೆಂಕಟಪ್ಪಯ್ಯ, ಎಂ. ಜಾರ್ಜ್ ಜೋಸೆಫ್, ಸಿ. ಎಫ್. ಆಂಡ್ರೂಸ್, ವಲ್ಲಭಭಾಯಿ ಪಟೇಲ್, ಕಮಲಾ ನೆಹರು, ಸರೋಜಿನಿನಾಯ್ಡು, ಟಂಗಟೂರಿ ಪ್ರಕಾಶಂ ಮುಂತಾದ ಗಣ್ಯ ವ್ಯಕ್ತಿಗಳೆಲ್ಲರೂ ಗಿರಿಧಾಮಕ್ಕೆ ಆಗಮಿಸಿದರು.

ಬಾಬು ರಾಜೇಂದ್ರ ಪ್ರಸಾದ್ ಅವರು ಉಬ್ಬಸ ಕಾಯಿಲೆ ಇದ್ದರೂ ಕಾಲ್ನಡಿಗೆಯಲ್ಲಿಯೇ ಬೆಟ್ಟವನ್ನು ಹತ್ತಿ ಬಂದರು. ಬೇಸಿಗೆ ಸಮಯವಾದ್ದರಿಂದ ಉಬ್ಬಸದ ತೊಂದರೆ ಅಷ್ಟೇನೂ ಆಗಲಿಲ್ಲ. ಕೊನೆಯಲ್ಲಿ ಕೆಲವು ದಿವಸ ಗಿರಿಧಾಮದಲ್ಲಿಯೇ ಇದ್ದು ಮಹಾತ್ಮರ ಜೊತೆಯಲ್ಲಿಯೇ ಬೆಂಗಳೂರಿಗೆ ಆಗಮಿಸಿದರು.

ಕ್ಯಾಸಂಬಳ್ಳಿ ಚೆಂಗಲರಾಯ ರೆಡ್ಡಿ ಅವರು ಕೆಲವು ದಿವಸ ಗಾಂಧಿ ಅವರಿಗೆ ಸೇವೆ ಸಲ್ಲಿಸಿ ಅವರ ಸೂಚನೆ ಮೇರೆಗೆ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿ ಸಾರ್ವಜನಿಕ ಸೇವೆಗೆ ಬರಲು ನಿರ್ಧರಿಸಿದರು. ಚಿಕ್ಕಬಳ್ಳಾಪುರದ ಪ್ರೌಢಶಾಲೆಯಿಂದ ಸ್ಕೌಟ್ ದಳದ ಮೂವರು ಬಾಲಕರು ಸ್ವಯಂ ಸೇವಕರಾಗಿ ಕೆಲಸ ಮಾಡಲು ಗಿರಿಧಾಮಕ್ಕೆ ಆಗಮಿಸಿದ್ದರು. ಅವರುಗಳಲ್ಲೊಬ್ಬರು ಸಿ. ಕೆ. ನಾಗರಾಜರಾವ್ (ಮುಂದೆ ಖ್ಯಾತ ಸಾಹಿತಿಗಳಾದವರು) ಈ ಬಾಲಕನನ್ನು ಕಂಡ ಗಾಂಧೀಜಿ ನಗುನಗುತ್ತಾ 'ಅಚ್ಛಾ, ಅಚ್ಛಾ' ಎಂದು ಭುಜ ತಟ್ಟಿದರಂತೆ.

ದೇವದಾಸ್ ಗಾಂಧಿ ಮತ್ತು ಲಕ್ಷ್ಮಿ

ನಂದಿ ಗಿರಿಧಾಮದಲ್ಲಿ ಗಾಂಧೀಜಿ ಅವರೊಂದಿಗೆ ಹಿರಿಯ ಪುತ್ರ 27 ವರ್ಷ ವಯಸ್ಸಿನ ದೇವದಾಸ್ ಇದ್ದನು. ರಾಜಗೋಪಾಲಾಚಾರಿ ಮಗಳು 17 ವರ್ಷ ವಯಸ್ಸಿನ ಲಕ್ಷ್ಮಿಯೂ ಇದ್ದಳು. ದೇವದಾಸ್ ತಮ್ಮ ತಂದೆಯವರ ಜೊತೆ ಮದರಾಸಿಗೆ ಹೋದಾಗಲೆಲ್ಲಾ ರಾಜಾಜಿಯವರ ಮನೆಯಲ್ಲಿ ತಂಗುತ್ತಿದ್ದು ಬಾಲಕಿ ಲಕ್ಷ್ಮಿಗೆ ಹಿಂದಿಯನ್ನು ಕಲಿಸಿಕೊಡುತ್ತಿದ್ದ. ಆದಕಾರಣ ದೇವದಾಸ್‌ಗೆ ಲಕ್ಷ್ಮಿಯ ಪರಿಚಯ ಹಿಂದೆಯೇ ಆಗಿತ್ತು. ನಂದಿ ಗಿರಿಧಾಮದಲ್ಲಿ ಇವರಿಬ್ಬರೂ ಗಾಢವಾಗಿ ಪ್ರೀತಿಸಿ ಗುಟ್ಟಾಗಿ ಮದುವೆ ಆಗಲು ನಿಶ್ಚಯಿಸಿದರು. ಈ ವಿಷಯ ಗಾಂಧೀಜಿ ಮತ್ತು ರಾಜಾಜಿಗೆ ತಿಳಿದ ನಂತರ ತಾವೇ ಮುಂದೆ ನಿಂತು ಈ ಅಂತರ್ಜಾತಿ ವಿವಾಹವನ್ನು 1933ರ ಜೂನ್ 16ರಂದು ಪುಣೆಯಲ್ಲಿ ಮಾಡಿದರು.

ನಿರ್ಗಮನ

ಜೂನ್ 20 ನೇ ತಾರೀಖಿನವರೆಗೆ ಅಂದರೆ ಪೂರ್ತಿ ಎರಡು ತಿಂಗಳು ಗಿರಿಧಾಮದಲ್ಲೇ ಗಾಂಧಿ ವಿಶ್ರಾಂತಿ ತೆಗೆದುಕೊಳ್ಳಲೇಬೇಕೆಂದು ವೈದ್ಯರ ಸಲಹೆಯಂತೆ ನಿಗದಿಪಡಿಸಲಾಗಿತ್ತು. ಪೂರ್ತಿ ಗುಣಮುಖರಾಗಿದ್ದ ಗಾಂಧೀಜಿ 15 ದಿವಸಕ್ಕೆ ಮೊದಲು

ಅಂದರೆ ಜೂನ್ 5ರಂದೇ ಗಿರಿಧಾಮದಿಂದ ನಗರಕ್ಕೆ ಹೊರಡಲು ಸಿದ್ಧರಾದರು. ಚಿಕ್ಕಬಳ್ಳಾಪುರದ ಜನರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ರಜತಮಹೋತ್ಸವ ಕಾರ್ಯಕ್ರಮವನ್ನು ಮಹಾತ್ಮರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಪ್ರೌಢಶಾಲಾ ಆವರಣದಲ್ಲಿ ನಡೆಸಲು ಏರ್ಪಾಟು ಮಾಡಿದ್ದರು. ಆದರೆ ಮುಂಚಿತವಾಗಿ ಗಿರಿಧಾಮವನ್ನು ಬಿಟ್ಟು ಹೊರಡಲಿದ್ದ ಕಾರಣ ಗಾಂಧೀಜಿ, ಉತ್ಸವದಲ್ಲಿ ಪಾಲ್ಗೊಳ್ಳಲಿಕ್ಕೆ ಆಗಲಿಲ್ಲ. ಗಾಂಧೀಜಿ ಅಷ್ಟು ಬೇಗ ಗಿರಿಧಾಮವನ್ನು ಬಿಡುತ್ತಾರೆ ಎಂದು ಯಾರಿಗೂ ಅನಿಸಿರಲಿಲ್ಲ.

ಮಹಾತ್ಮರ ಪರಿವಾರದವರೆಲ್ಲರೂ ಜೂನ್ 5ರ ಭಾನುವಾರದಂದು ಗಿರಿಧಾಮದಿಂದ ಚಿಕ್ಕಬಳ್ಳಾಪುರಕ್ಕೆ ತಲುಪಿದರು. ಗಾಂಧಿ ಅವರ ದರ್ಶನಕ್ಕಾಗಿ ಅವರ ಎರಡು ಕಡೆಗಳಲ್ಲೂ ಜನರು ಕಿಕ್ಕಿರಿದು ತುಂಬಿದ್ದರು. ಇಲ್ಲಿನ ನಿವಾಸಿಗಳು ಮತ್ತು ಚಿಕ್ಕಬಳ್ಳಾಪುರ ತಾಲೂಕಿನವರು ಬಿನ್ನವತ್ತಳೆಯನ್ನೂ, ನಿಧಿಯನ್ನೂ ಅರ್ಪಿಸಿದರು. ಹರಿಜನರು ಬೇರೊಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ಎಲ್ಲರೂ "ಬೆಂಗಳೂರಿಗೆ ಹೋಗಬೇಡಿ, ನಮ್ಮೂರಿನಲ್ಲಿ ಉಳಿದುಕೊಳ್ಳಿ" ಎಂದು ವಿನಂತಿಸಿಕೊಂಡರು. ಗಾಂಧೀಜಿ "ಸಾಧ್ಯವಿಲ್ಲ" ಎಂದರು. ಆನಂತರ ಮಹಾತ್ಮರು ಸ್ಥಳೀಯರಿಗೆ ವಂದನೆ ಅರ್ಪಿಸಿ ಈ ರೀತಿ ನುಡಿದರು. "ನಿಮ್ಮ ಬಿನ್ನವತ್ತಳೆಗಾಗಿ, ನಿಧಿಗಾಗಿ ನಾನು ನಿಮಗೆ ಬಹಳ ಕೃತಜ್ಞನಾಗಿದ್ದೇನೆ. ನಂದಿದುರ್ಗದಲ್ಲಿ ನಾನಿರುವಷ್ಟು ಕಾಲ ನನಗೆ ಒದಗಿಸಿದ ಸೌಕರ್ಯಗಳಿಗಾಗಿ ಚಿಕ್ಕಬಳ್ಳಾಪುರದ ಪ್ರಜೆಗಳನ್ನು, ಸ್ವಾಗತ ಸಭೆಯವರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನನಗೇನು ಬೇಕು ಎಂಬುದನ್ನೆಲ್ಲಾ ನೀವು ಮೊದಲೇ ಊಹಿಸಿ, ಭಾವಿಸಿ ಅದರಂತೆ ಎಲ್ಲ ಅನುಕೂಲಗಳನ್ನು ಮಾಡಿರುವಿರಿ. ನನಗಾಗಿ ಉದಾರ ಹೃದಯದಿಂದ ವೆಚ್ಚ ಮಾಡಿರುವಿರಿ. ನಿಮ್ಮ ದಯೆ, ಔದಾರ್ಯಗಳನ್ನು ನಾನೆಂದಿಗೂ ಮರೆಯಲಾರೆ.

ಒಂದು ಮಾತನ್ನು ಹೇಳ ಬಯಸುವೆ, ನಾನೇಕೆ ಮೈಸೂರು ಸಂಸ್ಥಾನದಲ್ಲಿ ನಿಲ್ಲಲು ನಿಶ್ಚಯಿಸಿದೆ ಬಲ್ಲಿರಾ? ನಮ್ಮ ದೇಶದ ಬಡವರ ಪರವಾಗಿ ನನ್ನ ಸಂದೇಶವನ್ನು ಪ್ರಚಾರ ಮಾಡಲಿಕ್ಕೆ ನಾನಿಲ್ಲಿಗೆ ಬಂದೆ. ಆದರೆ ನಿಮ್ಮ ಹೃದಯಗಳಲ್ಲಿ ಚರಕದ ಸಂದೇಶಕ್ಕೆ ಶಾಶ್ವತ ಸ್ಥಾನವೂ ಸಿಗಲಿಲ್ಲವಾದರೆ ನನ್ನ ಪ್ರಯತ್ನವೆಲ್ಲಾ ನಿರರ್ಥಕವೇ ಸರಿ. ನೀವು ಖಾದಿಯಲ್ಲದೆ ಬೇರೊಂದು ವಸ್ತ್ರ ಧರಿಸುವುದಿಲ್ಲವೆಂದು ಹೇಳಿದ್ದು ನನಗೆ ಪರಮಾನಂದ ಉಂಟುಮಾಡಿದೆ. ಹಿಂದೂ ಧರ್ಮಕ್ಕೆ ಕಳಂಕವೆನಿಸುವ ಅಸ್ಪೃಶ್ಯತೆ ಚಿಕ್ಕಬಳ್ಳಾಪುರದಲ್ಲಿ ಇಲ್ಲವೆಂದು ಭಾವಿಸುತ್ತೇನೆ. ಮಾನವ ಕೋಟಿಯ ಒಂದು ವರ್ಗವನ್ನು ಪಂಚಮರೆಂದು ಎಣಿಸಲು ಯಾವ ಆಧಾರವೂ ಕಾಣಬರುವುದಿಲ್ಲ. ನಿಮ್ಮ ಪ್ರೀತಿ ವಿಶ್ವಾಸಗಳಿಗೆ ನಿಮ್ಮೆಲ್ಲರಿಗೂ ಮತ್ತೊಮ್ಮೆ ವಂದಿಸುತ್ತೇನೆ" ಎಂದು ಕೃತಜ್ಞತೆ ಸಲ್ಲಿಸಿದರು. ಕೇವಲ ಅರ್ಧ ಗಂಟೆಯಲ್ಲಿ ಕಾರ್ಯಕ್ರಮ ಮುಗಿಯಿತು. ನಂತರ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಉಪಕಾರ ಸ್ಮರಣೆ

ನಗರಕ್ಕೆ ಆಗಮಿಸಿದ ಮೂರು ದಿವಸಗಳ ನಂತರ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ನಡೆದ ಭಾರಿ ಸಭೆಯಲ್ಲಿ ಮೈಸೂರು ಸಂಸ್ಥಾನದ ಜನತೆಗೆ ಕೃತಜ್ಞತೆ ಅರ್ಪಿಸುತ್ತಾ ಗಾಂಧೀಜಿ "ನನ್ನ ಕಾಯಿಲೆ ಗುಣವಾಗಿ ನನ್ನ ದೇಹಸ್ಥಿತಿ ಸುಧಾರಿಸಿದ ಮೇಲೆ ದೊಡ್ಡ ಸಭೆಯಲ್ಲಿ ಮಾತನಾಡಲು ಬಂದಿರುವುದು ಇದೇ ಮೊದಲು. ಈ ಸಂದರ್ಭದಲ್ಲಿ ಮೈಸೂರು ಮಹಾಜನರು ಮತ್ತು ಇಲ್ಲಿನ ಜನತೆ ನನ್ನ ಕಾಯಿಲೆ ಗುಣವಾಗುತ್ತಿದ್ದ ಸಮಯದಲ್ಲಿ ತೋರಿಸಿದ ಪ್ರೀತಿ ವಾತ್ಸಲ್ಯಗಳನ್ನು ಸ್ಮರಿಸಿಕೊಳ್ಳದಿರಲು ಮತ್ತು ನನ್ನ ಗಾಢ ಕೃತಜ್ಞತೆಗಳನ್ನು ಸಮರ್ಪಿಸದಿರಲು ನನ್ನಿಂದ ಸಾಧ್ಯವಾಗದು. ನಿಮ್ಮ ಪ್ರೀತಿಯ ಸುರಿಮಳೆಯಿಂದ ಕಾಯಿಲೆ ಬೀಳುವುದು ಒಂದು ಸುಕೃತವೇನೋ? ಎನಿಸುತ್ತಿದೆ" ಎಂದು ನುಡಿದರು.

ನಂತರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನೀಡಿದ ಆಹ್ವಾನದ ಮೇರೆಗೆ ಮಹಾತ್ಮರು ಮೈಸೂರು ನಗರಕ್ಕೆ ಭೇಟಿಯಿತ್ತರು. ನಾಲ್ವಡಿಯುವರ ರಜತಮಹೋತ್ಸವದಲ್ಲಿ ಭಾಗವಹಿಸಿ ಅವರ ಆತಿಥ್ಯವನ್ನು ಸ್ವೀಕರಿಸಿದರು. ನಗರದ ಕುಮಾರಕೃಪಾ ಭವನದಲ್ಲಿ 87 ದಿವಸ ವಾಸ್ತವ್ಯ ಹೂಡಿದ್ದ ಮಹಾತ್ಮರು ಆಗಸ್ಟ್ 30 ರಂದು ತಮ್ಮ ಪ್ರವಾಸ ಮುಂದುವರಿಸಲೆಂದು ಬೆಂಗಳೂರಿನಿಂದ ತೆರಳಿದರು.

ನಂದಿ ಗಿರಿಧಾಮಕ್ಕೆ ಎರಡನೆಯ ಭೇಟಿ (1936)

ದ್ವಿತೀಯ ಹರಿಜನ ಪ್ರವಾಸವನ್ನು 1936ರಲ್ಲಿ ಪ್ರಾರಂಭಿಸಿದ ಮಹಾತ್ಮರು ಅದೇ ವರ್ಷ ಮೇ ತಿಂಗಳಲ್ಲಿ ಮದರಾಸ್‌ಗೆ ಆಗಮಿಸಿದಾಗ ಹಠಾತ್ತಾಗಿ ರಕ್ತದ ಒತ್ತಡ ಅಧಿಕವಾಗಿ ಬಹಳ ಬಳಲಿದರು. ಪರಿವಾರದಲ್ಲಿ ಕಸ್ತೂರಿಬಾ, ರಾಮೇಶ್ವರಿ ನೆಹರು, ಶಾಂತಿ ಬೆಹನ್, ಕುಸುಮ ಬೆಹನ್, ಕಾಕಾ ಕಾಲೇಲ್ಕರ್, ಕನ್ನಯ್ಯಲಾಲ್ ಗಾಂಧಿ, ನವೀನಚಂದ್ರ ಗಾಂಧಿ ಮುಂತಾದವರಿದ್ದರು. ಮುಂಬಯಿಯಿಂದ ವಲ್ಲಭಭಾಯಿ ಪಟೇಲ್, ಮಹದೇವ ದೇಸಾಯಿ ಮತ್ತು ಮಣಿ ಬೆಹನ್ ಆಗಮಿಸಿದರು. ಎಲ್ಲರೂ ನಂದಿ ಗಿರಿಧಾಮವೇ ವಿಶ್ರಾಂತಿಗೆ ಪ್ರಶಸ್ತವಾದ ಸ್ಥಳವೆಂದು ನಿರ್ಧರಿಸಿ 1936ರ ಮೇ 10ರಂದು ಭಾನುವಾರ ಬೆಳಿಗ್ಗೆ ಕುಮಾರಕೃಪಾ ಭವನದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ನಂದಿ ಗಿರಿಧಾಮದತ್ತ ಕಾರಿನಲ್ಲಿ ಪ್ರಯಾಣಿಸಿದರು.

ನಂದಿ ಬೆಟ್ಟಕ್ಕೆ ಐದು ಮೈಲಿ ದೂರ ಮಣ್ಣಿನ ರಸ್ತೆ ಒಂದಿತ್ತು. ಅದು ಬೆಟ್ಟದ ದಕ್ಷಿಣದ ಕಡೆ ಇರುವ ಕುಡುವತಿ ಗ್ರಾಮದಿಂದ ಪ್ರಾರಂಭವಾಗುತ್ತಿತ್ತು, ಆ ರಸ್ತೆಯಲ್ಲಿ ಬೆಟ್ಟದ ಮೇಲಕ್ಕೆ ಕತ್ತೆಯ ಮೇಲೆ ದಿನಸಿ ಹಾಗೂ ಇತರೆ ಸಾಮಾನು ಸರಂಜಾಮುಗಳನ್ನು ಸಾಗಿಸುತ್ತಿದ್ದುದರಿಂದ ಇಲ್ಲಿನ ತೆಲುಗು ಜನರು ಆ ರಸ್ತೆಯನ್ನು ಗಾಡಿದಿ ರಸ್ತೆಯೆಂದೂ, ಕನ್ನಡದವರು ಕತ್ತೆ ರಸ್ತೆ ಹಾಗೂ ಕೂಲಿ ರಸ್ತೆಯೆಂದೂ ಕರೆಯುತ್ತಿದ್ದರು. ಮೊದಲ ಬಾರಿ ಗಾಂಧೀಜಿ ಬೆಟ್ಟದಲ್ಲಿ ದೀರ್ಘಕಾಲ ತಂಗಿದ್ದಾಗ ಆ ರಸ್ತೆಯ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು.

ಗಾಂಧಿ ಅವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದುದರಿಂದ ಬೆಟ್ಟ ಹತ್ತಬೇಡಿ ಎಂದು ಮೊದಲೇ ಹೇಳಿ ಸುಲ್ತಾನ್ ಪೇಟೆಯಿಂದ ಡೋಲಿಯಲ್ಲಿ ಕುಳ್ಳಿರಿಸಿ ಎತ್ತಿಕೊಂಡು ಹೋಗಲು ಮಿರ್ಜಾ ಮತ್ತಿತರು ಕಾದಿದ್ದರು. ಆದರೆ ಗಾಂಧೀಜಿ ಅಂದು ಮಧ್ಯಾಹ್ನ ಬಿಸಿಲಿನಲ್ಲಿ ನಡೆದುಕೊಂಡೇ ಐದು ಮೈಲಿ ದೂರ ಮಣ್ಣಿನ ರಸ್ತೆಯಲ್ಲಿ ಹತ್ತಿಬಿಟ್ಟರು. ಊರುಗೋಲಿನೊಂದಿಗೆ ಹತ್ತುತ್ತಿದ್ದ ಮಹಾತ್ಮರಿಗೆ ಮಹಾದೇವ ದೇಸಾಯಿ ಕೊಡೆ ಹಿಡಿದುಕೊಂಡಿದ್ದರು. ಮೇಲಕ್ಕೆ ಹೋದೊಡನೆಯೇ ತೋಟಗಾರಿಕೆ ಅಧಿಕಾರಿಗಳು ನಡೆದುಕೊಂಡು ಬಂದಿದ್ದ ಗಾಂಧಿ ಅವರನ್ನು ಕಂಡು ಆಶ್ಚರ್ಯಚಕಿತರಾದರು. ಆಗ ಗಾಂಧೀಜಿ "ನನ್ನಿಂದ ಬೆಟ್ಟ ಹತ್ತಲು ಸಾಧ್ಯವಿಲ್ಲ ಎಂದು ದಿವಾನರು ಹೇಳಿದ್ದರು, ನಾನು ಸರಾಗವಾಗಿ ಬೆಟ್ಟ ಹತ್ತಿ ಬಂದೆನೆಂದು ದಿವಾನರಿಗೆ ತಿಳಿಸಿ" ಎಂದರು. ಸುಲ್ತಾನ್‌ಪೇಟೆಯಲ್ಲಿ ಮಿರ್ಜಾ ಮತ್ತಿತರರು ಹೂವಿನ ಹಾರದೊಂದಿಗೆ ಕಾಯುತ್ತಿದ್ದರು. ಗಾಂಧೀಜಿ ಬೆಟ್ಟ ಹತ್ತಿದ ವಿಷಯ ತಿಳಿದೊಡನೆ ಎಲ್ಲರೂ ಬೆಟ್ಟದ ಮೇಲಕ್ಕೆ ಸರಸರನೆ ಹತ್ತಿ ಗಾಂಧೀಜಿಯನ್ನು ಕಂಡರು. ಈ ಸಲವೂ ಸಹ ಕನ್ನಿಂಗ್‌ಹ್ಯಾಂ ಭವನದಲ್ಲೇ ಗಾಂಧಿ ಮತ್ತಿತರರಿಗೆ ವಸತಿ ಏರ್ಪಾಟು ಮಾಡಲಾಗಿತ್ತು ಗಾಂಧಿ ಅವರಿಗೆ ಹಾಲು ಒದಗಿಸುವುದಕೋಸ್ಕರ ಮಿರ್ಜಾ ಅವರ ಸೂಚನೆ ಮೇರೆಗೆ ಐದು ಮೇಕೆಗಳು ಸಿದ್ಧವಾಗಿದ್ದವು. ನಂದಿ ಬೆಟ್ಟವು 1935ರ ಡಿಸೆಂಬರ್ 23ರಿಂದ ವಿದ್ಯುತ್ ಸಂಪರ್ಕ ಪಡೆದಿತ್ತು., 1936ರ ಫೆಬ್ರವರಿ 22ರಿಂದ ಅಮೃತ ಸರೋವರದಲ್ಲಿನ ನೀರು ಬೆಟ್ಟದ ಎಲ್ಲಾ ಕಡೆ ಪಂಪ್ ಮೂಲಕ ನಲ್ಲಿಗಳಲ್ಲಿ ನೀರು ಸರಬರಾಜಾಗಲು ವ್ಯವಸ್ಥೆಯಾಗಿತ್ತು.

ಪತ್ರಗಳು

ಗಾಂಧೀಜಿ ಗಿರಿಧಾಮಕ್ಕೆ ಬಂದ ತಕ್ಷಣ ಅವರ ಆಪ್ತ ಸ್ನೇಹಿತರಾದ ಡಾ. ಮುಖ್ತಾರ್ ಅಹ್ಮದ್ ಅನ್ಸಾರಿ ಅವರು ಡೆಹರಾಡೂನ್‌ನಲ್ಲಿ ರೈಲು ಪ್ರಯಾಣ ಮಾಡುತ್ತಿದ್ದಾಗ 1936ರ ಮೇ 10ರಂದು ಹಠಾತ್ ನಿಧನದ ಸುದ್ದಿ ಬಂದಿತ್ತು. ಈ ವಾರ್ತೆಯಿಂದ ಗಾಂಧಿ ಅವರಿಗೆ

ಬಹಳ ಆಘಾತವಾಯಿತು. ಮೇ 16ರಂದು ಹರಿಜನ ಪತ್ರಿಕೆಗೆ ಅನ್ಸಾರಿ ಅವರ ಮರಣವನ್ನು ಕುರಿತು ಗಿರಿಧಾಮದಿಂದ ಸಂತಾಪ ಸೂಚಕ ಪತ್ರ ಬರೆದರು.

ಹರಿಲಾಲ್ ಗಾಂಧಿ

ಆ ಸಮಯದಲ್ಲಿ ಮತ್ತೊಂದು ದಾರುಣ ವಾರ್ತೆ ವರದಿಯಾಯಿತು. ಗಾಂಧಿ ಅವರ ಹಿರಿಯ ಮಗ ಹರಿಲಾಲ್‌ಗಾಂಧಿ ಮುಂಬಯಿಯ ಜುಮ್ಮಾ ಮಸೀದಿಯಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದನೆಂಬ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ವಿಷಯವನ್ನು ತಿಳಿದು ಗಾಂಧಿ ಅವರಿಗೆ ಬಹಳ ನೋವುಂಟಾಯಿತು. ಹೆಂಡತಿ ಮಕ್ಕಳಿದ್ದ 48 ವರ್ಷ ವಯಸ್ಸಿನ ತಮ್ಮ ಮಗನ ಜೀವನದ ಎಲ್ಲ ಅಂಶಗಳನ್ನು ಕುರಿತು ಗಾಂಧೀಜಿ ಹರಿಜನ ಪತ್ರಿಕೆಯಲ್ಲಿ "ನನ್ನ ಅಸಂಖ್ಯಾತ ಮುಸ್ಲಿಂ ಮಿತ್ರರಿಗೆ" ಎಂಬ ಶೀರ್ಷಿಕೆಯಲ್ಲಿ ಮೂರು ಪುಟ ಪತ್ರ ಬರೆದರು.

ಸರ್ ಸಿ. ವಿ. ರಾಮನ್

ಬೆಂಗಳೂರಿನಿಂದ ಸಿ. ವಿ. ರಾಮನ್ ಅವರು ಸ್ವಿಟ್ಜರ್ಲೆಂಡ್‌ನ ಪ್ರೊಫೆಸರ್ ರಹಂ ಎಂಬ ವಿಜ್ಞಾನಿಯೊಂದಿಗೆ ಗಿರಿಧಾಮಕ್ಕೆ ಆಗಮಿಸಿ ಬಹಳ ಹೊತ್ತು ಗಾಂಧಿಯವರೊಂದಿಗೆ ಚರ್ಚಿಸಿದರು. ಎರಡನೇ ಬಾರಿ ರಾಮನ್ ದಂಪತಿಗಳು, ಮಗ ರಾಧಾಕೃಷ್ಣನನ್ನು ಕರೆದುಕೊಂಡು ನಂದಿ ಬೆಟ್ಟದ ಮೆಟ್ಟಿಲುಗಳನ್ನು ಹತ್ತುತ್ತಿದ್ದಾಗ ಅರ್ಧ ದಾರಿಯಲ್ಲಿ ರಾಧಾಕೃಷ್ಣ ಜಾರಿಬಿದ್ದು ಮೊಣಕಾಲು ಗಾಯವಾಗಿ ರಕ್ತಸ್ರಾವವಾಯಿತು ತಕ್ಷಣ ರಾಮನ್ ಅವರು ತಮ್ಮ ಪೇಟಾವನ್ನು ತೆಗೆದು ಸ್ವಲ್ಪ ಹರಿದು ಗಾಯದ ಮೇಲೆ ಸುತ್ತಿದರು. ನಂತರ ಕೆಳಗಿನಿಂದ ಡೋಲಿಯವರನ್ನು ಕರೆದು ರಾಧಾಕೃಷ್ಣನನ್ನು ಡೋಲಿಯಲ್ಲಿ ಕುಳ್ಳಿರಿಸಿ ಮೇಲಕ್ಕೆ ಕರೆತಂದು ಕಬ್ಬನ್ ಭವನದಲ್ಲಿ ಮಲಗಿಸಿದರು. ಈ ವಿಷಯ ಗಾಂಧಿ ಅವರಿಗೆ ತಿಳಿದು ಕಬ್ಬನ್ ಭವನಕ್ಕೆ ಆಗಮಿಸಿ ಅಳುತ್ತಿದ್ದ ಬಾಲಕ ರಾಧಾಕೃಷ್ಣನನ್ನು ಕಂಡು ಗಾಯವಾಗಿದ್ದ ಕಾಲು ಮುಟ್ಟಿ ಮೈದಡವಿ "ಅಳಬೇಡ ಮಗು, ಬೇಗ

ಗುಣವಾಗುತ್ತದೆ" ಎಂದು ಸಮಧಾನಪಡಿಸಿದರು. ನಂತರ ಗಾಂಧೀಜಿ, ರಾಮನ್ ದಂಪತಿಗಳಿಗೆ "ನೀವು ನನ್ನನ್ನು ನೋಡಲು ಬರುತ್ತಿದ್ದಿರಿ, ಆದರೆ ಈಗ ನಾನೇ ನಿಮ್ಮನ್ನು ನೋಡಲು ಬರುವ ಹಾಗಾಯಿತಲ್ಲ" ಎಂದು ನಗೆಯಾಡಿದರು.

ಓಂಕಾರ ಸ್ವಾಮಿಗಳು

ನಂದಿ ಬೆಟ್ಟದ ಪಕ್ಕದಲ್ಲಿ ಚನ್ನಗಿರಿ ಬೆಟ್ಟವಿದೆ. ಈ ಬೆಟ್ಟದಲ್ಲಿ ನೀಲಕಂಠ ಬ್ರಹ್ಮಚಾರಿ ಎಂಬ ಕ್ರಾಂತಿಕಾರಿಯೊಬ್ಬರು ಓಂಕಾರಸ್ವಾಮಿ ಎಂಬ ಹೆಸರಿನಿಂದ ಏಕಾಂತವಾಸಿಗಳಾಗಿದ್ದರು. ಅವರು ಮಹಾತ್ಮರ ಬಳಿ ಮೇ 30ರಂದು ಬಂದು ಒಂದು ಗಂಟೆ ಕಾಲ ಪಾರಮಾರ್ಥಿಕ ವಿಚಾರ ಕುರಿತು ಸಂಭಾಷಣೆ ನಡೆಸಿದರು.

ಮಹಾತ್ಮರು ಗಿರಿಧಾಮಕ್ಕೆ ಆಗಮಿಸಿದ ನಂತರ ಗಾಂಧಿ ಅವರ ದರ್ಶನಕ್ಕಾಗಿ ಮತ್ತು ಪ್ರಾರ್ಥನೆಯಲ್ಲಿ ಭಾಗಿಯಾಗುವುದಕ್ಕಾಗಿ ಪ್ರತಿದಿನ ನೂರಾರು ಜನ ಬೆಟ್ಟಹತ್ತಿ ಇಳಿಯುತ್ತಿದ್ದರು. ಹತ್ತುತ್ತಿದ್ದವರು ಇಳಿಯುತ್ತಿದ್ದವರನ್ನು ಕಂಡು "ಇವರು ಭಾಗ್ಯಶಾಲಿಗಳು, ಮಹಾತ್ಮರ ದರ್ಶನ ಮಾಡಿಕೊಂಡು ಬರುತ್ತಿದ್ದಾರೆ" ಎಂದುಕೊಳ್ಳುತ್ತಿದ್ದರು. ಮೊದಲೇ ಪವಿತ್ರವಾಗಿದ್ದ ನಂದಿಬೆಟ್ಟ ಈಗ ಇನ್ನೂ ಪವಿತ್ರ ಸ್ಥಳವಾಯಿತು. ಭಾರತದ ಮುಖಂಡರೆಲ್ಲಾ ಗಾಂಧೀಜಿ ಅವರ ಸಲಹೆಗಾಗಿ ಬರುತ್ತಿದ್ದರು. ರಾಜಕೀಯವಾಗಿಯೂ ಯಾತ್ರಾ ಸ್ಥಳವಾಯಿತು. ಗಾಂಧೀಜಿ, ರಾಜಕೀಯ ಮುಖಂಡರು ಮಾತ್ರ ಆಗಿದ್ದುದಲ್ಲದೆ ಜನತೆಯ ಹಿತೈಷಿಯೂ ಆಗಿದ್ದುದರಿಂದ ಪ್ರತಿಯೊಬ್ಬರು ತಮ್ಮ ಸಮಸ್ಯೆಯನ್ನು ಅವರ ಮುಂದೆ ಇಟ್ಟು ಪರಿಹಾರವನ್ನು ಕೇಳುತ್ತಿದ್ದರು. ಇದಕ್ಕಾಗಿ ಗಾಂಧಿ ಅವರ ಬಿಡಾರದ ಮುಂದೆ ಜನರು ಯಾವಾಗಲೂ ಗುಂಪುಗೂಡುತ್ತಿದ್ದರು. ಬರುತ್ತಿದ್ದವರೆಲ್ಲರೂ ಗಾಂಧಿ ಕೈಗೊಂಡ ಖಾದಿ ಪ್ರಚಾರ, ಹರಿಜನಕಾರ್ಯ, ಗೋಸೇವೆ, ಗ್ರಾಮೋದ್ಧಾರ ಮುಂತಾದ ಕಾರ್ಯಗಳಿಗೆ ತಮ್ಮ ಶಕ್ತ್ಯಾನುಸಾರ ಧನಸಹಾಯ ನೀಡುತ್ತಿದ್ದರು.

ಮಹಾತ್ಮರು ಈ 66ನೇ ವಯಸ್ಸಿನಲ್ಲಿ, ಅದರಲ್ಲಿಯೂ ನಿಶ್ಯಕ್ತರಾಗಿರುವಾಗ ನಡೆದುಕೊಂಡೇ ನಂದಿ ಬೆಟ್ಟವನ್ನು ಹತ್ತಿದರೆಂದು ಕೇಳಿ ಯಾತ್ರಿಕರ ಉತ್ಸಾಹ ನೂರ್ಮಡಿಗೊಳ್ಳುತ್ತಿತ್ತು. ಮಹಾತ್ಮರು ಇಳಿದಿದ್ದ ಬಂಗಲೆಯ ಬಾಗಿಲಿನಲ್ಲಿ ನಿಂತಿರುತ್ತಿದ್ದ ಸೇವಕರು ಮಹಾತ್ಮರನ್ನು ನೋಡಲು ಬಂದವರಿಗೆ "ಗಾಂಧೀಜಿ ಈಗ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ, ಸಂಜೆ ಗಾಳಿ ಸಂಚಾರಕ್ಕೆ ಹೋಗುವಾಗ ನೋಡಬಹುದು" ಎನ್ನುತ್ತಿದ್ದರು. ದೂರದಿಂದ ಬರುತ್ತಿದ್ದ ಜನರು ಗುಂಪು ಗುಂಪಾಗಿ ಮರಗಳ ಕೆಳಗೆ ವಿಶ್ರಮಿಸುತ್ತ ಅಲ್ಲಿಯೇ ಅಡಿಗೆ ಮಾಡಿಕೊಂಡು ಊಟ ಮಾಡಿ ಗಾಂಧೀಜಿ ಅವರು ವಾಯುಸಂಚಾರ ಹೊರಡುವ ಕಾಲವನ್ನು ನಿರೀಕ್ಷಿಸುತ್ತಾ ಕುಳಿತಿರುತ್ತಿದ್ದರು. ಹಳ್ಳಿಗಳಿಂದ ಬರುತ್ತಿದ್ದ ಜನರಿಗೆ ಮಹಾತ್ಮರ ದರ್ಶನ ಪಡೆದು ಧ್ವನಿ ಕೇಳುವುದೊಂದೇ ಸಾಕಾಗಿತ್ತು.

ಆಗ ಎಚ್. ನರಸಿಂಹಯ್ಯ (ನ್ಯಾಷನಲ್ ಕಾಲೇಜ್ ಪ್ರಿನ್ಸಿಪಾಲ್ ಆಗಿದ್ದವರು). ಅವರಿಗೆ 16 ವರ್ಷ ವಯಸ್ಸು, ತಮ್ಮ ಹುಟ್ಟೂರಾದ ಗೌರಿಬಿದನೂರು ತಾಲೂಕಿನ ಹೊಸೂರಿನಿಂದ 22 ಮೈಲಿ ದೂರದಲ್ಲಿನ ನಂದಿ ಬೆಟ್ಟಕ್ಕೆ ತಮ್ಮ ಉಪಾಧ್ಯಾಯರಾಗಿದ್ದ ಎಂ. ಎಸ್. ನಾರಾಯಣರಾವ್ ಮತ್ತು ಎಸ್. ವೆಂಕಟಾಚಲಯ್ಯನವರ ಜೊತೆ ಮಹಾತ್ಮರನ್ನು ಕಾಣಲು ಒಂದು ಸಂಜೆ ಆಗಮಿಸಿದ್ದರು. ಮಹಾತ್ಮರು ವಾಯು ಸಂಚಾರದಲ್ಲಿದ್ದಾಗ ಅವರ ದರ್ಶನಾಶೀರ್ವಾದಗಳನ್ನು ಪಡೆದ ಇವರು ಅಂದು ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ರಾತ್ರಿ ಬೆಟ್ಟದಲ್ಲಿಯೇ ಇದ್ದು ಮರುದಿನ ಹೊಸೂರಿಗೆ ವಾಪಸ್ಸಾದರು.

ಕೆಂಗಲ್ ಹನುಮಂತಯ್ಯನವರು ನಂದಿ ಗಿರಿಧಾಮಕ್ಕೆ ಆಗಮಿಸಿ ಗಾಂಧಿ ಅವರನ್ನು ಭೇಟಿ ಮಾಡಿದ ನಂತರ ಅವರ ಮನದಲ್ಲಿ ಅಚ್ಚಳಿಯದ ಮೂರ್ತಿಯಾಗಿ ಗಾಂಧೀಜಿ ನೆಲೆಸಿದರು. ಮಹಾತ್ಮರು ಬೋಧಿಸಿದ ನೀತಿಗಳ ಪ್ರತಿಪಾದಕರಾಗಿ ವಕೀಲಿ ಜೀವನದಲ್ಲಿ ಗಾಂಧೀಜಿ

ಅವರ ನೇಮಗಳನ್ನು ಅನುಷ್ಠಾನಕ್ಕೆ ತಂದು ಸುಳ್ಳು ಪ್ರಕರಣಗಳನ್ನು ನಡೆಸುವುದಿಲ್ಲವೆಂದು ಪ್ರತಿಜ್ಞೆಮಾಡಿದರು. ಬಡವರು ಹಾಗೂ ಕಾಂಗ್ರೆಸ್ ಸತ್ಯಾಗ್ರಹಿಗಳ ಪರ ಉಚಿತ ವಕಾಲತ್ತು ವಹಿಸುವ ಮೂಲಕ ಅವರಿಗೆ ನೆರವಾಗಲು ಪ್ರಾರಂಭಿಸಿದರು.

ಒಬ್ಬ ಹೆಳವ

ಒಬ್ಬ ಹೆಳವ ಮಂಡಿಯನ್ನು ಎಳೆಯುತ್ತಾ ಮಹಾತ್ಮರನ್ನು ಕಾಣಲು ಬೆಟ್ಟವನ್ನು ಹತ್ತಿ ಬಂದ. ಆಗ ಕಾವಲು ಇದ್ದ ಸೇವಕ ನಂಜುಂಡ ತೆವಳುತ್ತಾ ಬಂದ ಆತನಿಗೆ ಸುಲಭವಾಗಿ ಮಹಾತ್ಮರ ಸಂದರ್ಶನಕ್ಕೆ ಆಸ್ಪದ ನೀಡಲಿಲ್ಲ. ನಂತರ ಹೊರಕ್ಕೆ ಬಂದ ಮಹಾತ್ಮರು ಹೆಳವನನ್ನು ಕಂಡು ಒಳಕ್ಕೆ ಕರೆದು "ಬೆಟ್ಟವನ್ನು ಹೇಗೆ ಹತ್ತಿದೆ?" ಎಂದು ಕೇಳಿದಾಗ ದೇವರ ಸಹಾಯದಿಂದ ಎಂದು ಉತ್ತರಿಸಿದ, ಆಗ ಗಾಂಧೀಜಿ "ನೀನೇ ಧನ್ಯ. ದೇವರು ನಿನಗೆ ಕಾಲು ಕೊಡಲಿಲ್ಲ, ಆದರೆ ಕಪಿ, ಕರಡಿ, ಸಿಂಹ, ಆಡು, ಕುರಿ, ಮನುಷ್ಯ ಎಲ್ಲರಿಗೂ ಕಾಲು ಕೊಟ್ಟಿದ್ದಾನೆ, ಆದರೂ ದೇವರ ದಯಕ್ಕೆ ಪಾತ್ರನಾದವನು ನೀನೊಬ್ಬನೆ, ನೀನು ಕಾಲಿಲ್ಲ ಎಂದು ಕೊರಗಬೇಡ, ಕಾಲಿರುವವರಿಗಿಂತ ಕಾಲಿಲ್ಲದ ನೀನೇ ಉತ್ತಮ. ದೇವರನ್ನು ನಂಬು, ನಿನ್ನಿಂದ ಉಪಕಾರವಾಗುತ್ತದೆ" "ಅದು ಹೇಗೆ ಸ್ವಾಮಿ ನನ್ನಿಂದ ಉಪಕಾರವಾಗುತ್ತದೆ? ನಾನು ಎಲ್ಲರ ಆಶ್ರಯದಿಂದ ಬದುಕುತ್ತಿದ್ದೇನೆ" ಎಂದು ಅವನೆಂದಾಗ "ಹಾಗಲ್ಲ. ಕಾಲಿಲ್ಲದ ನೀನೇ ದೇವರ ದಯೆ ಇದೆ ಎನ್ನುತ್ತಿರಬೇಕಾದರೆ, ಕಾಲಿರುವ ಧಾಂಡಿಗರೆಲ್ಲಾ ದೇವರಿಗೆ ಎಷ್ಟು ಕೃತಜ್ಞರಾಗಿರಬೇಕು, ನಿನ್ನನು ನೋಡಿದಾಗಲೆಲ್ಲಾ ಅವರ ಮನಸ್ಸು ದೇವರ ಕಡೆಗೆ ತಿರುಗುವುದು. ಇಂತಹ ಭಗವದ್ಭಕ್ತಿಯನ್ನು ಜನರಲ್ಲಿ ಹುಟ್ಟಿಸುವವನು ಜನೋಪಕಾರಿಯಲ್ಲವೇ!" ಎಂದು ಹಿಂದಿಯಲ್ಲಿ ಮಾತುಕತೆ ನಡೆಸಿದರು. ಮುಸಲ್ಮಾನರ ಸಂಪರ್ಕವಿದ್ದ ಹೆಳವನಿಗೆ ಸ್ವಲ್ಪ ಹಿಂದಿಯೂ ಬರುತ್ತಿತ್ತು. ಹೊರಕ್ಕೆ ಬಂದ ಹೆಳವನನ್ನು ಸ್ವಯಂಸೇವಕನಾಗಿದ್ದ ನಂಜುಂಡ "ಮಹಾತ್ಮರು ಏನು ಹೇಳಿದರು?"

ಎಂದು ಕೇಳಿದಾಗ ಆತನ ಕಣ್ಣಲ್ಲಿ ನೀರು ತೊಟ್ಟಿಕ್ಕಿತು, "ಮಹಾತ್ಮರು ನನಗೆ ಕಾಲಿಲ್ಲ ಎಂಬ ದುಃಖವನ್ನೇ ಹೋಗಿಸಿಬಿಟ್ಟರು," ಎಂದು ತಿಳಿಸಿದನು.

ವೈದ್ಯರು

ವೈದ್ಯರು ಮಹಾತ್ಮರ ದೇಹ ಸ್ಥಿತಿಯನ್ನು ಆಗಿಂದಾಗ್ಗೆ ಪರೀಕ್ಷಿಸುತ್ತಾ ಇದ್ದರು. ಒಂದು ದಿನ ಮೂತ್ರದಲ್ಲಿ ದೋಷವನ್ನು ಕಂಡು. ಇದಕ್ಕೆ ಔಷಧಿ ತೆಗೆದುಕೊಳ್ಳುವಂತೆ ವೈದ್ಯರು ಸಲಹೆ ನೀಡಿದರು. "ಔಷಧಿ ಅಗತ್ಯವಿಲ್ಲ, ನಾಳೆಯೊಳಗಾಗಿ ಸರಿಪಡಿಸಿಕೊಳ್ಳುತ್ತೇನೆ" ಎಂದರು ಗಾಂಧಿ, ಮರುದಿನ ಮೂತ್ರವನ್ನು ಪರೀಕ್ಷಿಸಿದಾಗ ಹಿಂದಿನ ದಿನ ಕಂಡುಬಂದಿದ್ದ ದೋಷ ನಿವಾರಣೆಯಾಗಿತ್ತು. ವೈದ್ಯರು ಬೆರಗಾದರು.

ನಂದಿ ಬೆಟ್ಟಕ್ಕೆ ನಿರ್ಮಾಣವಾಗುತ್ತಿದ್ದ ಮೋಟಾರು ರಸ್ತೆ ಮುಗಿಯುವ ಹಂತ ತಲುಪುತ್ತಿತ್ತು, ಮಿರ್ಜಾ ಅವರು ತಾವು ಮಾಡಿಸುತ್ತಿರುವ ಕೆಲಸವನ್ನು ಮಹಾತ್ಮರಿಗೆ ತಿಳಿಸಿ ಅವರ ಮೆಚ್ಚುಗೆ ಪಡೆಯಬೇಕೆಂಬ ಹಂಬಲದಿಂದ ತಿಳಿಸಿದರು. ಆದರೆ ಮಹಾತ್ಮರ ದೃಷ್ಟಿಯೇ ಬೇರೆಯಾಗಿತ್ತು. "ಏಕಾಂಗಿಯಾಗಿ ಜನಜಂಗುಳಿಯಿಂದ ತೊಂದರೆಗೆ ಒಳಗಾಗದೆ ಆರಾಮವಾಗಿ ಕಾಲ ಕಳೆಯುವ ಅವಕಾಶ ಇದರಿಂದ ತಪ್ಪಿದಂತೆ ಆಯಿತು" ಎಂದರು ಗಾಂಧೀಜಿ.

ಕಾಂಗ್ರೆಸ್ ಪಕ್ಷದ ಉದಯ

ಮಹಾತ್ಮರು ನಂದಿ ಗಿರಿಧಾಮದಲ್ಲಿದ್ದಾಗ ಮೈಸೂರು ಸಂಸ್ಥಾನದಲ್ಲಿ ಪ್ರಜಾ ಸಂಯುಕ್ತ ಪಕ್ಷವು ಪ್ರಮುಖ ರಾಜಕೀಯ ಪಕ್ಷವಾಗಿತ್ತು. ಆ ಪಕ್ಷದಲ್ಲಿ ಅಬ್ಬಾಸ್ ಖಾನ್, ಎಚ್.ಸಿ.ದಾಸಪ್ಪ, ಎಚ್. ಸಿದ್ದಯ್ಯ, ಎಸ್. ನಿಜಲಿಂಗಪ್ಪ, ಚನ್ನಪಟ್ಟಣದ ತಿಟ್ಟಮಾರನಹಳ್ಳಿ ವಿ. ವೆಂಕಟಪ್ಪ, ಎಚ್.ಕೆ. ವೀರಣ್ಣಗೌಡ, ಕೆ.ಸಿ. ರೆಡ್ಡಿ ಮುಂತಾದ ಪ್ರತಿಭಾನ್ವಿತರು ನಾಯಕತ್ವ ವಹಿಸಿಕೊಂಡಿದ್ದರು.

ಕೆ.ಸಿ. ರೆಡ್ಡಿ ಅವರು ಆ ಪಕ್ಷದ ಅಧ್ಯಕ್ಷರಾಗಿದ್ದರು. ಬಿ. ಎನ್. ಗುಪ್ತ ಸಲಹೆಗಾರರಾಗಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಕೆ. ಟಿ. ಭಾಷ್ಯಂ, ವೀರಕೇಸರಿ ಸೀತಾರಾಮಶಾಸ್ತ್ರಿ, ತಗಡೂರು ರಾಮಚಂದ್ರರಾವ್, ಎಂ. ಎನ್. ಜೋಯಿಸ್ ಮುಂತಾದವರಿದ್ದರು. ಎಸ್.ಎಸ್.ಎಮ್. ರೆಜ್ವಿ ಡಬ್ಲ್ಯೂ. ಎಚ್. ಹನುಮಂತಪ್ಪ ಮುಂತಾದ ಕೆಲವರನ್ನು ಬಿಟ್ಟರೆ ಕಾಂಗ್ರೆಸ್ ಪಕ್ಷವು ಬ್ರಾಹ್ಮಣರ ಪಕ್ಷವೆಂಬ ಆರೋಪವಿತ್ತು.

ಪ್ರಜಾ ಸಂಯುಕ್ತ ಪಕ್ಷದ ಮುಖಂಡರೆಲ್ಲಾ ಕಾಂಗ್ರೆಸ್‌ಗೆ ಸೇರಲು ಬಿ. ಎನ್. ಗುಪ್ತ ಮತ್ತು ಸರ್ದಾರ್ ವೆಂಕಟರಾಮಯ್ಯನವರು ಅನೇಕ ಸೂಚನೆಗಳನ್ನು ಪ್ರಜಾ ಸಂಯುಕ್ತ ಪಕ್ಷದ ಮಂಡಲಿಯ ಮುಂದೆ ಇಟ್ಟಿದ್ದರು. ಈ ಸಂಬಂಧವಾಗಿ ಮಹಾತ್ಮ ಗಾಂಧಿ ಅವರು ನಂದಿ ಬೆಟ್ಟದಲ್ಲಿದ್ದಾಗ ಕೋಲಾರದಲ್ಲಿ ಸಭೆ ನಡೆಯಿತು. ಆ ಸಭೆಯಲ್ಲಿ ಎಲ್ಲರೂ ಪ್ರಜಾಪಕ್ಷವನ್ನು ವಿಸರ್ಜಿಸಿ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸೇರಿ, ಪಕ್ಷವನ್ನು ಶಕ್ತಿಯುತವಾಗಿ ಬೆಳೆಸಬೇಕೆಂಬ ನಿರ್ಣಯವನ್ನು ಕೆ.ಸಿ. ರೆಡ್ಡಿಯವರು ಮಂಡಿಸಿದರು. ಆಗ ಹಲವು ಸಮಸ್ಯೆಗಳು ಎದುರಾದವು. ಮೊದಲನೆಯದಾಗಿ ಹೊಸ ಪಕ್ಷದಲ್ಲಿ ಸೇರುವ ನಾಯಕರ ಸ್ಥಾನಮಾನಗಳು ಕಾಂಗ್ರೆಸ್‌ನಲ್ಲಿ ಏನಾಗಿರುತ್ತದೆ. ಎರಡನೆಯದಾಗಿ ಅವರೆಲ್ಲರೂ ಈ ಹಿಂದೆ ಜಾತೀವಾದಿ ಪಕ್ಷದೊಡನೆ ಸಂಬಂಧ ಹೊಂದಿದ್ದರೆಂಬುದಕ್ಕಾಗಿ ಎರಡನೇ ದರ್ಜೆಯ ಕಾಂಗ್ರೆಸ್ಸಿಗರನ್ನಾಗಿ ಪರಿಗಣಿಸಬಹುದು, ಅನೇಕ ಸಂದೇಹಗಳು ಪ್ರಜಾಸಂಯುಕ್ತ ಪಕ್ಷದ ನಾಯಕರಲ್ಲಿ ಕಾಡುತ್ತಿದ್ದವು. ಆಗ ಕೆ. ಸಿ. ರೆಡ್ಡಿ, ಟಿ. ಸಿದ್ದಲಿಂಗಯ್ಯ, ಬಿ. ಎನ್. ಗುಪ್ತ ಮತ್ತು ವೆಂಕಟಪತಯ್ಯನವರು ನಂದಿ ಬೆಟ್ಟಕ್ಕೆ ಹೋಗಿ ಮಹಾತ್ಮ ಗಾಂಧಿ ಅವರ ಮುಂದೆ ಈ ಪ್ರಶ್ನೆಗಳನ್ನಿಟ್ಟರು. ಆಗ ಮಹಾತ್ಮರು ಕೆ. ಸಿ. ರೆಡ್ಡಿಯವರನ್ನು ಆಲಂಗಿಸಿಕೊಂಡು "ನನ್ನ ಮಕ್ಕಳನ್ನು ಬರಮಾಡಿಕೊಳ್ಳುವಂತೆಯೇ ಪ್ರಜಾ ಸಂಯುಕ್ತ ಪಕ್ಷದ ಎಲ್ಲರನ್ನೂ ಕಾಂಗ್ರೆಸ್ ಕಕ್ಷೆಯೊಳಗೆ ಬರಮಾಡಿಕೊಳ್ಳುತ್ತೇನೆ, ಸವತಿ ಮಕ್ಕಳಂತೆ

ನಿಮ್ಮನ್ನು ಪರಿಗಣಿಸುವುದಿಲ್ಲ" ಎಂದು ತಿಳಿಸಿದರು. ಮಹಾತ್ಮರ ಈ ಉತ್ತರದಿಂದ ಪ್ರಜಾ ಸಂಯುಕ್ತ ಪಕ್ಷದ ಪ್ರಮುಖರು ಸಂದೇಹಗಳನ್ನೆಲ್ಲಾ ಬದಿಗೆ ಸರಿಸಿ ತಮ್ಮ ಊರಾದ ಕ್ಯಾಸಂಬಳ್ಳಿಗೆ ಹೋಗಿ ಅಣ್ಣನವರಾದ ವೆಂಕಟರಾಮ ರೆಡ್ಡಿಯವರ ಅನುಮತಿ ಪಡೆದರು. ಅಂದಿನಿಂದ ಕೆ. ಸಿ. ರೆಡ್ಡಿ ಅವರ ಕುಟುಂಬದವರೆಲ್ಲಾ ಖಾದಿ ಧಾರಿಗಳಾದರು.

ನಂತರ ಕೆ. ಸಿ. ರೆಡ್ಡಿ ಅವರ ಮುಖಂಡತ್ವದಲ್ಲಿದ್ದ ಪ್ರಜಾ ಸಂಯುಕ್ತ ಪಕ್ಷವು ಗಾಂಧಿ ಅವರ ಸಲಹೆಯಂತೆ ಕಾಂಗ್ರೆಸ್ ಪಕ್ಷದೊಡನೆ ವಿಲೀನಗೊಂಡಿತು. ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವು ಬಲಿಷ್ಠಗೊಂಡು ಕೆ. ಸಿ. ರೆಡ್ಡಿಯವರೇ ಮೈಸೂರು ಸಂಸ್ಥಾನದ ಮುಖ್ಯಮಂತ್ರಿಯಾದರು.

ಮೇ 20ರಂದು ಗಿರಿಧಾಮಕ್ಕೆ ಬ್ರಜಲಾಲ್ ನೆಹರು ಬಂದಿದ್ದರು. 30ರಂದು ವೈದ್ಯರು ಗಾಂಧಿ ಅವರ ತೂಕವನ್ನು ಪರೀಕ್ಷಿಸಿದರು. ಎಂಟು ಪೌಂಡ್ ಅಧಿಕವಾಗಿತ್ತು. ಎಲ್ಲರೂ ಸಂತೋಷಗೊಂಡರು. ಆದರೆ ಗಾಂಧೀಜಿ "ಇದು ಹೇಗೆ ಸಾಧ್ಯ? ವೈದ್ಯರು ತಕ್ಕಡಿಗೆ ಏನೋ ಮೋಸ ಮಾಡಿರಬೇಕು, ಇಲ್ಲದಿದ್ದರೆ ನನ್ನ ತೂಕ ಒಮ್ಮೆಲೇ ಎಂಟು ಪೌಂಡ್ ಅಧಿಕವಾಗಲು ಸಾಧ್ಯವಿಲ್ಲ" ಎಂದು ಹಾಸ್ಯ ಮಾಡಿದರು.

ಕೋಲಾರ ಜಿಲ್ಲಾ ಪ್ರವಾಸ

ಆಗ ಕೋಲಾರ ಜಿಲ್ಲಾ ಹರಿಜನ ಸೇವಾ ಸಂಘ ಮತ್ತು ಕೋಲಾರ ಜಿಲ್ಲಾ ಬೋರ್ಡ್‌ಗಳ ಅಧ್ಯಕ್ಷರೂ ಆಗಿದ್ದ ಕೆ. ಸಿ. ರೆಡ್ಡಿ ಅವರು ಮಹಾತ್ಮರು ನಂದಿ ಬೆಟ್ಟದಿಂದ ನಿರ್ಗಮಿಸುವ ಮುನ್ನ ಅಲ್ಲಿಗೆ ಹೋಗಿ ಕೋಲಾರ ಜಿಲ್ಲೆಯಲ್ಲಿ ಹರಿಜನ ನಿಧಿ ಸಂಗ್ರಹಕ್ಕೆ ಪ್ರವಾಸ ಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಆಗ ಮಹಾತ್ಮರು "ಹರಿಜನರಿಗಾಗಿ ಎಷ್ಟು ನಿಧಿ ಸಂಗ್ರಹ ಮಾಡುತ್ತೀರಾ?" ಎಂದು ಕೇಳಿದರು. ಕೇವಲ ಎರಡು ಮೂರು ದಿವಸಗಳು ಮಾತ್ರ ಅವಕಾಶವಿರುವುದರಿಂದ ಸುಮಾರು ಒಂದು ಸಾವಿರ ರೂಪಾಯಿ ಸಂಗ್ರಹಿಸುವುದಾಗಿ ತಿಳಿಸಿದರು. "ಅಷ್ಟು ಕಡಿಮೆ

ಸಂಗ್ರಹಿಸಲು ನಾಚಿಕೆಯಾಗುವುದಿಲ್ಲವೇ?" ಎಂದು ನಗುತ್ತ ಕೇಳಿದರು. ನಂತರ ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲು ಒಪ್ಪಿಕೊಂಡರು.

ನಂದಿ ಗಿರಿಧಾಮದಲ್ಲಿ ಮಹಾತ್ಮರ ಜೊತೆ ಕಸ್ತೂರಿಬಾ, ವಲ್ಲಭಭಾಯಿ ಪಟೇಲ್, ಮಹದೇವ ದೇಸಾಯಿ, ಶ್ರೀಮತಿ ಮಹದೇವ ದೇಸಾಯಿ, ಕಾಕಾ ಕಾಲೇಲ್ಕರ್, ಬ್ರಹ್ಮಚಾರಿ ಟಿ. ರಾಮಚಂದ್ರ, ಮಣಿಬನ್‌ಪಟೇಲ್, ಬ್ರಜಲಾಲ್ ನೆಹರು, ಕಾಂತಿಲಾಲ್ ಗಾಂಧಿ ಮುಂತಾದವರಿದ್ದರು. 1936ರ ಮೇ 11ರಿಂದ 30ರವರೆಗೆ 20 ದಿವಸ ನಂದಿ ಗಿರಿಧಾಮದಲ್ಲಿ ಎಲ್ಲರೊಡನೆ ವಿಶ್ರಾಂತಿ ಪಡೆದ ಮಹಾತ್ಮರನ್ನು ಮೇ 31 ಭಾನುವಾರ ಬೆಳಗ್ಗೆ ಬೆಟ್ಟದ ಮೇಲಿದ್ದ ಜನರು ಸತ್ಕರಿಸಿ ಬೀಳ್ಕೊಟ್ಟರು.

ಚಿಕ್ಕಬಳ್ಳಾಪುರದಲ್ಲಿ

ಕಾಲ್ನಡಿಗೆಯಲ್ಲಿ ಬೆಟ್ಟವನ್ನು ಇಳಿದ ಗಾಂಧೀಜಿ ಮತ್ತವರ ಸಂಗಡಿಗರಿಗಾಗಿ ಸುಲ್ತಾನ್‌ಪೇಟೆಯಲ್ಲಿ ಎರಡು ಕಾರುಗಳು ಸಿದ್ಧವಾಗಿತ್ತು. ಅಲ್ಲಿಂದ ಚಿಕ್ಕಬಳ್ಳಾಪುರಕ್ಕೆ ಆಗಮಿಸಿದ ಮಹಾತ್ಮರನ್ನು ಸ್ಥಳೀಯ ಸಬ್ ಡಿವಿಜನಲ್ ಆಫೀಸರ್ ಇಸ್ಮಾಯಿಲ್ ಷರೀಫ್ ಅವರು ಸ್ವಾಗತಿಸಿ ತಮ್ಮ ಮನೆಗೆ ಕರೆದೊಯ್ದರು. ಅಲ್ಲಿ ಆತಿಥ್ಯವನ್ನು ಸ್ವೀಕರಿಸಿದ ನಂತರ ಚಿಕ್ಕಬಳ್ಳಾಪುರ ಪ್ರೌಢಶಾಲೆಯ ಬಳಿ ಸಾರ್ವಜನಿಕ ಸಭೆಗಾಗಿ ಹಾಕಿದ್ದ ಮಂಟಪಕ್ಕೆ ಆಗಮಿಸಿದ ಗಾಂಧಿ ಅವರನ್ನು ಕಂಡು ನೆರೆದಿದ್ದ ಸಾವಿರಾರು ಜನರು ಪ್ರಚಂಡ ಜಯಘೋಷ ಮಾಡಿದರು. ಪುರಸಭೆಯವರು ಗಾಂಧಿ ಅವರಿಗೆ ಸನ್ಮಾನಪತ್ರವನ್ನು ಅರ್ಪಿಸಿ ಹರಿಜನರ ಉದ್ಧಾರ ಹಾಗೂ ಹರಿಜನ ಕೇರಿ ಸ್ವಚ್ಛತೆಗಾಗಿ ತಾವು ಕೈಗೊಂಡ ಕ್ರಮಗಳನ್ನು ನಿವೇದಿಸುವುದರ ಮೂಲಕ ನೂರು ರೂಪಾಯಿ ದೇಣಿಗೆಯನ್ನು ಅರ್ಪಿಸಿದರು. ಮಹಾತ್ಮರು ನಗುತ್ತಾ ವೈದ್ಯರು ನನಗೆ ಹೆಚ್ಚು ಮಾತನಾಡಬಾರದೆಂದು ಹೇಳಿದ್ದಾರೆ. ಆದಾಗ್ಯೂ "ಇಲ್ಲಿ ಬೆಳೆಯುವ ಆಲೂಗಡ್ಡೆ ಧಾರಣೆ ಬಹಳ ಇಳಿದಿರುವುದರಿಂದ ವರ್ತಕರಿಗೆ ಹೇರಳ ನಷ್ಟವಾಗಿದೆ.

ಆದ್ದರಿಂದ ನಿಧಿಯೂ ಕಡಿಮೆ. ಜೂನ್ 4ರಂದು ಮಹಾರಾಜರ ವರ್ಧಂತಿ, ಅವರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸುವುದು ನನ್ನ ಮೊದಲ ಕೆಲಸ. ಮಹಾರಾಜರು ಆಳುತ್ತಿರುವ ದೇಶ ರಾಮರಾಜ್ಯವಾಗಲೆಂದು ನಾನು ಹಾರೈಸುತ್ತೇನೆ. ಪೂರ್ವಕಾಲದಲ್ಲಿ ರಾಜರಿಗೂ ಹಳ್ಳಿಯ ಪ್ರಜೆಗಳಿಗೂ ಯಾವುದೇ ಭೇದವಿರಲಿಲ್ಲ, ಈಗಲೂ ಅದೇ ರೀತಿ ಆಗಬೇಕು. ಎಲ್ಲರೂ ಸಮಾನರಂತೆ ನಡೆದುಕೊಳ್ಳಬೇಕು. ಹರಿಜನರ ಉದ್ಧಾರಕ್ಕಾಗಿ ಪುರಸಭೆಯವರು ಈವರೆಗೆ ಮಾಡಿರುವ ಕೆಲಸ ಉತ್ತಮವಾಗಿದ್ದರೂ ಹರಿಜನ ಮತ್ತು ಸವರ್ಣ ಎಂಬ ಭೇದ ಹೋಗುವವರೆಗೆ ನನಗೆ ಸಮಾಧಾನವಿಲ್ಲ. ಹರಿಜನರು ದೇವಾಲಯ ಪ್ರವೇಶಿಸಲು ಯಾವ ವಿಧದ ಆತಂಕ ಇಲ್ಲ" ಎಂದು ಇಂಗ್ಲೀಷಿನಲ್ಲಿ ಭಾಷಣ ಮಾಡಿದರು. ದಾರಿಯುದ್ದಕ್ಕೂ ತಳಿರು ತೋರಣಗಳನ್ನು ಕಟ್ಟಿದ್ದ ಗ್ರಾಮಸ್ಥರು ಮಹಾತ್ಮರಿಗೆ ಹೂಮಾಲೆ ಅರ್ಪಿಸಿ ಶಕ್ತ್ಯಾನುಸಾರವಾಗಿ ದೇಣಿಗೆಯನ್ನು ಅರ್ಪಿಸಿದರು.

ಶಿಡ್ಲಘಟ್ಟದಲ್ಲಿ

ಚಿಕ್ಕಬಳ್ಳಾಪುರದಿಂದ ಬೆಳಗ್ಗೆ 8.30 ಗಂಟೆಗೆ ಹೊರಟಿದ್ದ ಗಾಂಧೀಜಿ ಸುಮಾರು 9 ಗಂಟೆಗೆ ಶಿಡ್ಲಘಟ್ಟಕ್ಕೆ ಆಗಮಿಸಿದರು. ಅಲ್ಲಿನ ಪುರಸಭೆಯ ಪರವಾಗಿ ಅಧ್ಯಕ್ಷರಾಗಿದ್ದ ಸೂರ್ಯನಾರಾಯಣರಾಯರು ಸನ್ಮಾನಪತ್ರವನ್ನು ಅರ್ಪಿಸಿ ನೂರು ರೂಪಾಯಿ ಹರಿಜನ ನಿಧಿಗೆ ನೀಡಿದರು.

ಚಿಂತಾಮಣಿಯಲ್ಲಿ

ಶಿಡ್ಲಘಟ್ಟದಿಂದ ಚಿಂತಾಮಣಿಗೆ ಆಗಮಿಸಿದಾಗ ಪುರಸಭೆಯ ಪರವಾಗಿ ಸನ್ಮಾನಪತ್ರವನ್ನು ಅರ್ಪಿಸಲಾಯಿತು. ಸನ್ಮಾನಪತ್ರಕ್ಕೆ ಉತ್ತರ ಕೊಡುತ್ತಾ ಗಾಂಧೀಜಿ ಇಲ್ಲಿನ ಹಿಂದಿ-ಕನ್ನಡ ವಿವಾದದ

ವಿಷಯುವನ್ನು ತೆಗೆದುಕೊಂಡು ಹೀಗೆ ಹೇಳಿದರು. "ನಿಮ್ಮ ಭಾಷೆಯನ್ನು ನಾನು ತಿಳಿದುಕೊಂಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನನ್ನ ಜೀವಿತಾವಧಿಯೊಳಗೆ ವಿದ್ಯಾವಂತರೆಲ್ಲಾ ಹಿಂದಿಯನ್ನು ಕಲಿಯುತ್ತಾರೆಂದು ನನಗೆ ನಂಬಿಕೆ ಇದೆ. ದಕ್ಷಿಣ ಭಾರತದಲ್ಲಿ ಈಗ ಒಂದು ತಪ್ಪು ಅಭಿಪ್ರಾಯ ನೆಲೆಸಿದೆ. ಹಿಂದಿಯು ಕನ್ನಡ ಸೇರಿದಂತೆ ಇತರ ಭಾಷೆಗಳನ್ನು ತುಳಿಯುವುದೆಂದು. ಇದು ನಿಜವಲ್ಲ. ಆ ರೀತಿ ನಂಬಿಕೆ ಇಟ್ಟುಕೊಳ್ಳುವುದು ಮೂರ್ಖತನ, ಹಿಂದಿಯಿಂದ ಪ್ರಾಂತೀಯ ಭಾಷೆಗಳಿಗೆ ಸಹಾಯವಾಗುವುದೆಂದೇ ನನಗನಿಸುತ್ತದೆ. ಆದುದರಿಂದ ಎಲ್ಲರೂ ಹಿಂದಿಗೆ ಬೆಂಬಲ ಕೊಡಬೇಕು. ಹಿಂದಿ ಕಲಿಯದಿದ್ದರೆ ಸೋದರಭಾವನೆ ಬೆಳೆಯುವುದಿಲ್ಲ. ಇಂಗ್ಲಿಷ್ ಭಾಷೆ ದೇಶ ಭಾಷೆಯಾಗುವುದೆಂಬುದು ಶುದ್ಧ ಮೂರ್ಖತನ. ಪ್ರಪಂಚದಲ್ಲಿ ಅದಕ್ಕೆ ಗಣ್ಯಸ್ಥಾನವಿರಬಹುದು. ಆದರೆ ರಾಷ್ಟ್ರಭಾಷೆಯಾಗಲಾರದು ಎಂದು ಹೇಳಿದ ಗಾಂಧೀಜಿ ಕೊನೆಯಲ್ಲಿ "ಭರತಖಂಡದಲ್ಲಿ ರಾಮರಾಜ್ಯ ಸ್ಥಾಪಿತವಾಗಲಿ" ಎಂದು ಹಾರೈಸಿ ಹರಿಜನ ಉದ್ಧಾರಕ್ಕೆ ಪ್ರಯತ್ನಪಡಬೇಕೆಂದು ತಿಳಿಸಿ ಇನ್ನೂರು ರೂಪಾಯಿ ನಿಧಿ ಸ್ವೀಕರಿಸಿ ಕೋಲಾರಕ್ಕೆ ತೆರಳಿದರು.

ಕೋಲಾರದಲ್ಲಿ

ಕೋಲಾರಕ್ಕೆ ಮಹಾತ್ಮರು ಸುಮಾರು **11-30** ಗಂಟೆಗೆ ಆಗಮಿಸುತ್ತಿದ್ದಂತೆ ಜಿಲ್ಲಾಧಿಕಾರಿ ಜೆ. ಅಪ್ಪಾಜಿಗೌಡ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಜಿ. ಕೆ. ಮಾಧವರಾವ್ ಹಾಗೂ ಮತ್ತಿತರ ಅಧಿಕಾರಿಗಳು ಸ್ವಾಗತಿಸಿದರು. ಮೊದಲು ಹರಿಜನ ಕೇರಿಗೆ (ಈಗಿನ ಕೆಳಗಿನ ಪೇಟೆಗೆ) ಭೇಟಿ ಕೊಟ್ಟ ನಂತರ ನಗರ ಭವನಕ್ಕೆ ಆಗಮಿಸಿದ ಗಾಂಧೀಜಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅಸಂಖ್ಯಾತ ಜನರು ಸೇರಿದ್ದರು. ಪುರಸಭೆಯ ಪರವಾಗಿ ಸನ್ಮಾನಪತ್ರವನ್ನು ಅರ್ಪಿಸಲಾಯಿತು. ಅದಕ್ಕೆ ಉತ್ತರ ಕೊಡುತ್ತಾ

ಗಾಂಧೀಜಿ "ಅಸ್ಪೃಶ್ಯತೆಯನ್ನು ಹೋಗಲಾಡಿಸದಿದ್ದರೆ ಹಿಂದೂಸ್ತಾನಕ್ಕೆ ಗೌರವ ಬರುವುದಿಲ್ಲ" ಎಂದು ಹೇಳಿದರು. ನಂತರ ಇನ್ನೂರು ರೂಪಾಯಿ ನಿಧಿಯನ್ನು ಸ್ವೀಕರಿಸಿ ಮುಂದಕ್ಕೆ ಪ್ರಯಾಣ ಬೆಳೆಸಿದರು.

ಬಂಗಾರಪೇಟೆಯಲ್ಲಿ

ಬಂಗಾರ ಪೇಟೆಗೆ ಮಧ್ಯಾಹ್ನ ಸುಮಾರು 2-30ಕ್ಕೆ ಆಗಮಿಸಿದ ಗಾಂಧೀಜಿ ಅಲ್ಲಿನ ಪುರಜನರ ಸತ್ಕಾರ ಸ್ವೀಕರಿಸಿದರು. ಅಲ್ಲಿನ ಕಿಂಗ್ ಎಡ್ವರ್ಡ್ ಹಾಲ್‌ನಲ್ಲಿ ರಾಜಾ ಆದಿನಾರಾಯಣ ಶೆಟ್ಟರ ನೇತೃತ್ವದಲ್ಲಿ ಪುರಸಭೆಯ ಪರವಾಗಿ ಸನ್ಮಾನಪತ್ರವನ್ನು ಅರ್ಪಿಸಲಾಯಿತು. ಅಲ್ಲಿನ ನಾಗರಿಕರು ಹರಿಜನ ನಿಧಿಗೆ 261 ರೂಪಾಯಿ ಅರ್ಪಿಸಿದರು. ಗಾಂಧೀಜಿ ತಮ್ಮ ಉತ್ತರದಲ್ಲಿ ಖಾದಿಗೆ ಎಲ್ಲರೂ ಪ್ರೋತ್ಸಾಹ ನೀಡಬೇಕೆಂದೂ, ವಿದ್ಯಾವಂತರೆಲ್ಲರೂ ಹಿಂದಿಯನ್ನೂ ಕಲಿಯಬೇಕೆಂದೂ, ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕೆಂದೂ ಕೇಳಿಕೊಂಡರು.

ಚಿನ್ನದ ಗಣಿ ಪ್ರದೇಶದಲ್ಲಿ

ಬಂಗಾರಪೇಟೆಯಿಂದ ಕೆಜಿಎಫ್ ಪ್ರದೇಶಕ್ಕೆ ಸುಮಾರು ಮೂರು ಗಂಟೆಗೆ ಆಗಮಿಸಿದ ಗಾಂಧೀಜಿ 'ಮೊದಲು ಅಲ್ಲಿನ ಗಣಿ ಕೂಲಿಕಾರರ ಕೇರಿಗಳಿಗೆ (ಹೆನ್ರಿಸಾಫ್ಟ್ ಲೇನ್ಸ್) ಭೇಟಿ ಕೊಟ್ಟು ಅವರ ವಸತಿ ಗೃಹಗಳನ್ನು ಪರೀಕ್ಷಿಸಿದರು. ಅವರ ವಿಶಿಷ್ಟ ಬದುಕನ್ನು ಅರಿತುಕೊಳ್ಳಲು ಸ್ವಲ್ಪ ಸಮಯದಲ್ಲಿ ಆಗಲಿಲ್ಲ. ಅವರು ಪಡುವ ಕಷ್ಟ ಹಾಗೂ ಜೀವನ ಸಂಕಟ ಎಲ್ಲವನ್ನು ಅರಿತುಕೊಳ್ಳಲು ಕೆಲ ದಿವಸ ಅವರ ಜೊತೆಯಲ್ಲಿಯೇ ಇರಬೇಕೆಂದು ಗಾಂಧೀಜಿಗೆ ಅನಿಸಿತು. ನಂತರ ರಾಬರ್ಟ್‌ಸನ್ ಪೇಟೆಗೆ ಬಂದರು. ಅಲ್ಲಿನ ಕಿಂಗ್‌ಜಾರ್ಜ್ ಹಾಲ್ ಮುಂಭಾಗದ ಬಯಲಿನಲ್ಲಿ ಸಾರ್ವಜನಿಕರ ಭಾರಿ ಸಭೆ ಜರುಗಿತು. ಆಗ 617 ರೂಪಾಯಿ ನಿಧಿಯನ್ನು ಹರಿಜನ ಕಲ್ಯಾಣಕ್ಕಾಗಿ ಸಮರ್ಪಿಸಲಾಯಿತು. ಗಾಂಧೀಜಿ ವೇದಿಕೆಯ ಮೇಲೆ ಕುಳಿತಾಕ್ಷಣ ಖಾದಿ ಉಡುಪುಧಾರಿ ವೃದ್ಧೆಯೊಬ್ಬಳು ಮಹಾತ್ಮರಿಗೆ ನಮಸ್ಕರಿಸಿ ನಾಲ್ಕು

ರೂಪಾಯಿ ಸಲ್ಲಿಸಿದಳು. ಅಲ್ಲಿನ ಸ್ಕೌಟ್ ದಳದ ಪರವಾಗಿ ಒಬ್ಬ ಸ್ಕೌಟ್ ಸ್ವಲ್ಪ ಹಣವನ್ನು ಅರ್ಪಿಸಿದನು. ನಂತರ ಓರ್ವ ಬಾಲಕನು ಆಗಮಿಸಿ "ನಿಮ್ಮ ಸಹಿ ಕೊಡಿ" ಎಂದು ಮಹಾತ್ಮರಿಗೆ ಕೇಳಿದನು. ಕೂಡಲೇ ಮಹಾತ್ಮರು ಕೈಚಾಚಿ ಮೊದಲು ಐದು ರೂಪಾಯಿ ಕೊಡಬೇಕೆಂದು ಕೇಳಿದರು.

ನಂತರ ಅಲ್ಲಿ ನೆರೆದಿದ್ದ ಜನರನ್ನು ಉದ್ದೇಶಿಸಿ ಮಹಾತ್ಮರು ಈ ರೀತಿ ಹೇಳಿದರು. "ನೀವು ಕೊಟ್ಟ 617 ರೂಪಾಯಿಗಳು ಬಹಳ ಸ್ತುತ್ಯಾರ್ಹವಾಗಿದೆ. ಇಲ್ಲಿನ ಜನರ ದುಡಿಮೆ ನೋಡಿದರೆ ಇದು ನ್ಯಾಯವಲ್ಲವೆಂದು ತೋರುತ್ತದೆ. ನಾನು ಕೂಲಿಕಾರನೆಂದು ಹೇಳಬಹುದು. ಇತರೆ ಕಡೆಗಳಲ್ಲಿ ವಸತಿ ಗೃಹಗಳು ಇಲ್ಲಿಯದಕ್ಕಿಂತ ಎಷ್ಟೋ ಉತ್ತಮವಾಗಿದೆ. ಇಲ್ಲಿ ವಾಸಗೃಹಗಳಿಗೆ ಹನ್ನೆರಡು ಆಣೆ ಬಾಡಿಗೆ ವಸೂಲಿ ಮಾಡಲಾಗುತ್ತದೆ ಎಂದು ನಾನು ಕೇಳಿದ್ದೇನೆ. ಆ ಬಾಡಿಗೆ ಹೆಚ್ಚೆಂದು ಧಾರಾಳವಾಗಿ ಹೇಳಬಹುದು. ಇಲ್ಲಿರುವ ವಸತಿ ಗೃಹಗಳು ನರಕಕ್ಕೆ ಸಮಾನವಾಗಿದೆ. ಬೆಳ್ಳಿ ಬಂಗಾರಕ್ಕಿಂತಲೂ ಮನುಷ್ಯನ ಜೀವ ಹೆಚ್ಚು ಬೆಲೆಯುಳ್ಳದ್ದು. ಗಣಿಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಯಾವ ಸೌಕರ್ಯಗಳನ್ನು ಕೊಟ್ಟಿದೆಯೋ ಅದೇ ಸೌಕರ್ಯಗಳನ್ನು ಈ ಕೂಲಿಕಾರರಿಗೂ ಕಲ್ಪಿಸಿಕೊಡಬೇಕು. ಕಾರ್ಮಿಕರ ಸ್ಥಾನಮಾನವನ್ನು ಅರಿತುಕೊಂಡು ತಮ್ಮಂತೆ ಅವರನ್ನು ನೋಡದಿದ್ದರೆ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಒತ್ತಾಯ ಮಾಡುವ ಕಾಲ ಬೇಗ ಬಂದೀತು" ಎಂದು ಗಣಿ ಮಾಲೀಕರಿಗೆ ಗಾಂಧೀಜಿ ತಿಳಿಸಿದರು. ಕೊನೆಯಲ್ಲಿ "ಕೂಲಿಕಾರರಲ್ಲಿ ಎರಡು ದೋಷಗಳಿವೆ. ಒಂದು ಕುಡಿತ, ಇನ್ನೊಂದು ಜೂಜು. ಕೂಲಿಕಾರರು ಅವುಗಳನ್ನು ತ್ಯಜಿಸಬೇಕು" ಎಂದರು. ರಾಜಗೋಪಾಲ್, ತುಂಡೋಣಿ, ಭಾಷ್ಯಂಕಾರ್ಲು ನಾಯ್ಡು, ಗುರಪ್ಪ, ವೆಂಕಟೇಶ ಶೆಟ್ಟಿ ಅಂದು ಸಭೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಅಂದಿನ 150 ಮೈಲಿ ಪ್ರವಾಸದಲ್ಲಿ ಒಟ್ಟು 1600 ರೂಪಾಯಿ ನಿಧಿ ಸಂಗ್ರಹವಾಯಿತು.

ಹೀಗೆ ಕೋಲಾರ ಜಿಲ್ಲೆಯ ಪ್ರವಾಸ ಕಾರ್ಯಕ್ರಮ ಸಮರ್ಪಕವಾಗಿ ಮುಗಿಯಿತು, ಕೊನೆಯಲ್ಲಿ ಗಾಂಧೀಜಿ ಹೊರಡುವಾಗ ಕೆ. ಸಿ. ರೆಡ್ಡಿ ಅವರು "ನಾವು ನಿಮಗೆ ಬಹಳ ತೊಂದರೆ ಕೊಟ್ಟೆವು" ಎಂದು ಕ್ಷಮೆ ಕೇಳಿದರು. ಕೂಡಲೆ ಗಾಂಧೀಜಿ "ಇತರರಿಗೆ ತೊಂದರೆ ಕೊಡುವವರು ತಾವೂ ಸಹ ತೊಂದರೆಪಡಲೇಬೇಕಾಗಬಹುದು" ಎಂದು ಮಾರ್ಮಿಕವಾಗಿ ತಿಳಿಸಿದರು. ಆ ನಂತರ ಅಲ್ಲಿಯೇ ಸ್ವಲ್ಪ ಕಾಲ ವಿಶ್ರಾಂತಿ ಪಡೆದ ಮಹಾತ್ಮರು ರಾತ್ರಿ ಎಂಟು ಗಂಟೆಗೆ ಮಾಲೂರು ಮಾರ್ಗವಾಗಿ ಬೆಂಗಳೂರಿಗೆ ಆಗಮಿಸಿ *ರೇಸ್‌ಕೋರ್ಸ್ ಮುಖ್ಯ ದ್ವಾರದ ಮುಂಭಾಗದಲ್ಲಿನ ಕ್ರೆಸೆಂಟ್ ಹೌಸ್ (ಈಗಿನ ಕರ್ನಾಟಕ ನ್ಯಾಯಾಂಗ ಅಕಾಡೆಮಿ) ಬಂಗಲೆಯಲ್ಲಿ 1936ರ ಜೂನ್ 12ರವರೆಗೆ ತಂಗಿದ್ದರು. 1936ರ ಹರಿಜನ ಪ್ರವಾಸವೇ ಬೆಂಗಳೂರಿಗೆ ಗಾಂಧಿ ಅವರ ಕೊನೆಯ ಭೇಟಿಯಾಯಿತು.

ಅಸ್ಥಿ ವಿಸರ್ಜನೆ

ಪೂಜ್ಯ ಮಹಾತ್ಮ ಗಾಂಧೀಜಿ 1948ರ ಜನವರಿ 30ರಂದು ನಿಧನರಾದ ನಂತರ ಅವರ ಚಿತಾಭಸ್ಮವನ್ನು ಇತರೆ ಪುಣ್ಯ ಕ್ಷೇತ್ರಗಳಲ್ಲಿ ವಿಸರ್ಜಿಸುವ ಹಾಗೆ ಕೋಲಾರ ಅಂತರಗಂಗೆ ಮತ್ತು ನಂದಿದುರ್ಗದ ಅಮೃತ ಸರೋವರಗಳಲ್ಲಿಯೂ ವಿಸರ್ಜಿಸಬೇಕೆಂದು ಮುಖ್ಯಮಂತ್ರಿಗಳಾಗಿದ್ದ ಕೆ. ಸಿ. ರೆಡ್ಡಿ ಅವರ ಅಪೇಕ್ಷೆಯಂತೆ 1948ರ ಫೆಬ್ರವರಿ 12ನೇ ಗುರುವಾರ ಬೆಳಗ್ಗೆ ಚಿತಾಭಸ್ಮದ ಕಳಸವನ್ನು ಕೋಲಾರಕ್ಕೆ ತರಿಸಿಕೊಳ್ಳಲಾಯಿತು.

---

*(ಗಾಂಧೀಜಿ ಬೆಂಗಳೂರಿಗೆ ಐದು ಬಾರಿ ಬಂದಿರುವ ಪೂರ್ಣ ಮಾಹಿತಿಗೆ ಭಾರತೀಯ ವಿದ್ಯಾಭವನದ ಗಾಂಧೀ ಕೇಂದ್ರದವರು ಪ್ರಕಟಿಸಿರುವ, ಇದೇ ಲೇಖಕರ 'ಬೆಂಗಳೂರಿನಲ್ಲಿ ಮಹಾತ್ಮ ಗಾಂಧಿ' ಪುಸ್ತಕ ನೋಡಿ.).

ಕೋಲಾರ ಜಿಲ್ಲಾಧಿಕಾರಿ ಜಾರ್ಜ್ ಮ್ಯಾಥಾನ್, ಕೆ. ಪಟ್ಟಾಭಿ ರಾಮನ್, ಕೋಲಾರದ ಸಾಹುಕಾರ ಚಿಕ್ಕನಂಜಪ್ಪ ಶೆಟ್ಟಿ, ಕೆ. ಸಿ. ರೆಡ್ಡಿ ಮತ್ತಿತರರು ಅಂತರಗಂಗೆಯಲ್ಲಿ ಬೆಳಗ್ಗೆ ಅಸ್ಥಿ ವಿಸರ್ಜನೆ ಮಾಡಿದ ನಂತರ ನೇರವಾಗಿ ನಂದಿ ಗಿರಿಧಾಮಕ್ಕೆ ಮತ್ತೊಂದು ಅಸ್ಥಿ ಕಳಸವನ್ನು ಒಯ್ದರು. ಮಧ್ಯಾಹ್ನ ನೂರಾರು ಮಂದಿ ನಂದಿದುರ್ಗದಲ್ಲಿ ಸೇರಿದ್ದರು. ಕಳಸಕ್ಕೆ ಪುಷ್ಪಗಳನ್ನು ಅರ್ಪಿಸಿದ ನಂತರ ಪಟ್ಟಾಭಿರಾಮನ್ ಅವರು ಕಳಸವನ್ನು ಸರೋವರದ ಸಮೀಪಕ್ಕೆ ತಂದರು. ರಾಮಚಂದ್ರ ಅಯ್ಯರ್ ಮತ್ತು ಸಂಗಡಿಗರಿಂದ ಸಾಮೂಹಿಕ ಪೌರೋಹಿತ್ಯ, ಅರ್ಚನೆ, ಪೂಜೆ ವಿಧಿಪೂರ್ವಕವಾಗಿ ನಡೆದ ನಂತರ ಅಸ್ಥಿಯನ್ನು ಅಮೃತಸರೋವರದಲ್ಲಿ ವಿಸರ್ಜನೆ ಮಾಡಿ ಧರ್ಮೋದಕ ನೀಡಲಾಯಿತು.

ಮಹಾತ್ಮ ಗಾಂಧೀಜಿ ತಂಗಿದ್ದ ಕನ್ನಿಂಗ್‌ಹ್ಯಾಂ ಭವನದ ಬಳಿ ಅಂದು ಸಂಜೆ ಎಲ್ಲರೂ ಸೇರಿ ರಾಮಭಜನೆ ಮಾಡಿದರು. ನಂತರ ಸುಲ್ತಾನ್‌ಪೇಟೆ ಪಂಡಿತ್ ತತ್ವವಾದಿ ಸುಬ್ಬಣ್ಣಾಚಾರ್ಯರು ಅಮೋಘ ಭಾಷಣ ಮಾಡಿದರು. ಪಟ್ಟಾಭಿರಾಮನ್ ಅವರು ಗಾಂಧಿಶಕೆ ಆರಂಭಿಸಬೇಕೆಂದು ಸಲಹೆಯನ್ನಿತ್ತರು. ಅಂದೇ ನಂದಿ ಗ್ರಾಮದಲ್ಲಿಯೂ ಭಜನೆಯೊಂದಿಗೆ ಮಹಾತ್ಮ ಗಾಂಧಿ ಅವರ ಭಾವಚಿತ್ರವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಗಾಂಧಿ ನಿಲಯ

ಕನ್ನಿಂಗ್‌ಹ್ಯಾಂ ಭವನಕ್ಕೆ 1949ರಲ್ಲಿ 'ಗಾಂಧಿ ನಿಲಯ'ವೆಂದು ನಾಮಾಂಕಿತ ಮಾಡಲಾಯಿತು. 1951ರಲ್ಲಿ ಕೆ. ಸಿ. ರೆಡ್ಡಿ ಅವರು ಗಾಂಧಿ ನಿಲಯದಲ್ಲಿ ಮಹಾತ್ಮರ ಭಾವಚಿತ್ರ ಮತ್ತು ಪ್ರತಿಮೆಯನ್ನು ಅನಾವರಣಗೊಳಿಸಿದರು.

ಗಾಂಧೀಪುರ

ನಂದಿಗಿರಿ ಮತ್ತು ದಿವ್ಯಗಿರಿಗಳ ನಡುವೆ ಇರುವ ಕಣಿವೆ ರಸ್ತೆಯಲ್ಲಿ ಬೇಚಿರಾಕ್ ಆಗಿದ್ದ ಮೊಡಕು ಹೊಸಹಳ್ಳಿ ಪ್ರದೇಶವು ಬಹಳ ಪ್ರಶಾಂತವಾದ ಸ್ಥಳ. ಆ ಸ್ಥಳ ಮಹಾತ್ಮ ಗಾಂಧಿ ಮತ್ತಿತರರಿಗೆ ಹೆಚ್ಚು ಪ್ರಿಯವಾಗಿತ್ತು. ಆದಕಾರಣ ನಂದಿ ಬೆಟ್ಟದ ನಿವಾಸಿಗಳು ರಚನಾತ್ಮಕ ಕಾರ್ಯನಿರತ ಸಂಘದ ಮೂಲಕ ಈ ಸ್ಥಳದಲ್ಲಿಯೇ ಮಹಾತ್ಮರ ಸ್ಮಾರಕವಾಗಿ ನೂತನ ಗ್ರಾಮ ನಿರ್ಮಾಣ ಕಾರ್ಯ ಕೈಗೊಂಡರು. ಈ ಕಾರ್ಯಕ್ರಮಕ್ಕೆ 1950ರ ಜನವರಿ 27ರಂದು ಕಡಪಾದಿಂದ ಶ್ರೀ ಚಿತ್‌ಜ್ಞಾನಾನಂದ ಸ್ವಾಮಿಗಳು ಆಗಮಿಸಿ ಮಹಾತ್ಮರ ಆತ್ಮಕ್ಕೆ ಶಾಂತಿ ಕೋರಿ ನೂತನ ಗ್ರಾಮದ ಶಂಕುಸ್ಥಾಪನೆ ಮಹೋತ್ಸವವನ್ನು ನೆರವೇರಿಸಿ ಅದಕ್ಕೆ 'ಗಾಂಧಿಪುರ' ಎಂದು ನಾಮಕರಣ ಮಾಡಿದರು. ಸದ್ಗುರು ಓಂಕಾರ ಸ್ವಾಮಿಗಳು ಧ್ವಜಾರೋಹಣ ಮಾಡಿದರು. ನಂತರ ಚಿತ್‌ಜ್ಞಾನಾನಂದ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ರಚನಾತ್ಮಕ ಕಾರ್ಯಗಳ ಸಮ್ಮೇಳನವೂ ನಡೆಯಿತು.

ಆಧಾರ ಗ್ರಂಥಗಳು

1. ಸಿದ್ಧವನಹಳ್ಳಿ ಕೃಷ್ಣಶರ್ಮ 'ಗಾಂಧಿ ಮತ್ತು ಕರ್ನಾಟಕ' ಗಾಂಧಿ ಸ್ಮಾರಕ ನಿಧಿ, 1970, ಬೆಂಗಳೂರು
2. ಕೆ. ಎ. ವೆಂಕಟರಾಮಯ್ಯ, ಸತ್ಯಾಗ್ರಹಿ ಒಂದು ಜೀವನ ಕಥೆ' (ಕನ್ನಡ ಅನುವಾದ) ದ್ವಿತೀಯ ಮುದ್ರಣ 1985.
3. ವಿ. ಎಸ್. ನಾರಾಯಣ ರಾವ್, 'ಡಾ. ಸಿ.ವಿ.ರಾಮನ್' 1984.
4. ವಿ. ಎಸ್. ನಾರಾಯಣ ರಾವ್, 'ಮಹಾತ್ಮರ ಮಾರ್ಗ' 1979
5. ಮೋ. ಕ. ಗಾಂಧಿ, 'ಸಂಭಾಷಣೆ', ಗಾಂಧಿ ಸ್ಮಾರಕ ನಿಧಿ, 1961
6. ಘನಶ್ಯಾಮದಾಸ್ ಬಿರ್ಲಾ, 'ಬಾಪು', ಕನ್ನಡಕ್ಕೆ : ರಂಗನಾಥ ದಿವಾಕರ
7. ಮೋ. ಕ. ಗಾಂಧಿ, 'ಪುಷ್ಪಗುಚ್ಛ', ಗಾಂಧಿ ಸ್ಮಾರಕ ನಿಧಿ, 1961
8. ಎಂ. ಧ್ರುವನಾರಾಯಣ್, 'ಪಂಡಿತ ತಾರಾನಾಥ' ಕ.ವಿ.ವಿ. ಧಾರವಾಡ, 1976.
9. ಮೋ. ಕ. ಗಾಂಧಿ, 'ನನ್ನ ಸಮಕಾಲೀನರು' ಗಾಂಧಿ ಸ್ಮಾರಕ ನಿಧಿ, 1960.
10. ಡಾ. ತಿಪ್ಪೇರುದ್ರಸ್ವಾಮಿ ಎಚ್., 'ಮಹಾತ್ಮ' ಸಂ.–2
11. ಡಿ. ಜಿ. ತೆಂಡೂಲ್ಕರ್, 'ಗಾಂಧಿ ಜೀವನ' 1981.
12. ಡಾ. ಸೂರ್ಯನಾಥ ಕಾಮತ್, "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ತೃತೀಯ ಸಂಪುಟ, 1980.
13. M. H. Krishna, "A Guide to Nandhi", 1940.
14. C. B. Dalal, "Gandhi: 1915-1948 A Detailed Chronology 1971.
15. Dhananjay Keer, "Mahatma Gandhi Political Saint and Unarmed Prophet", 1973.
16. The collected works of Mahatma Gandhi, 1927 and 1936.
17. Young India 1927, 1936.



ಯಶವಂತಪುರ ರೈಲ್ವೆ ನಿಲ್ದಾಣದಲ್ಲಿ ಮಹಾತ್ಮ ಗಾಂಧೀಜಿ ಸಂಗಡಿಗರೊಡನೆ ಪ್ರಾರ್ಥನೆ ಮಾಡುತ್ತಿರುವ ದೃಶ್ಯ (ದಿ.20.4.1927)



ನಂದಿಬೆಟ್ಟದಲ್ಲಿ ಗಾಂಧೀಜಿ ಒಡನಾಡಿಗಳೊಂದಿಗೆ (1927)



ನಂದಿಬೆಟ್ಟದಲ್ಲಿ
ಗಾಂಧೀಜಿ (1927)
ಬಳಗದೊಂದಿಗೆ




ಗಾಂಧೀಜಿ ನಂದಿಬೆಟ್ಟವನ್ನು
ಹತ್ತುತ್ತಿರುವುದು.
ಛತ್ರಿ ಹಿಡಿದಿರುವವರು
ಮಹದೇವ ದೇಸಾಯಿ
(ದಿ.11.5.1936)



ಕೋಲಾರದ ಪಾದಯಾತ್ರೆಯಲ್ಲಿ ಗಾಂಧೀಜಿ ಅವರೊಡನೆ ಕೆ.ಸಿ. ರೆಡ್ಡಿ
ಮತ್ತೆಲ್ಲಾ ಕಾರ್ಯಕರ್ತರು (31.5.1936)

ಲೇಖಕರ ಕಿರು ಪರಿಚಯ



ಹೆಸರು : ಎ.ಬಿ. ಸೋಮಶೇಖರ್

ಮೊ: 9901562292

26623242 9880412292.

vemagalsomashekara@gmail.com

ಸ್ವಂತ ಸ್ಥಳ : ವೇಮಗಲ್, ಕೋಲಾರ ಜಿಲ್ಲೆ.

ಹುಟ್ಟಿದ ಊರು: ಬೆಂಗಳೂರು

ತಂದೆ : ಬು.ರುದ್ರಪ್ಪ

ತಾಯಿ : ಶಿವಮ್ಮ

1963–64ರಲ್ಲಿ ಕೋಲಾರ ಜಿಲ್ಲೆಯ ಚೋಳಘಟ್ಟ ಮತ್ತು ಕಾಳಹಸ್ತಿಪುರದಲ್ಲಿ ಪ್ರೈಮರಿ ಶಾಲಾ ಉಪಾಧ್ಯಾಯರಾಗಿ ಆರು ತಿಂಗಳು ಕಾರ್ಯ ನಿರ್ವಹಣೆ. ನಂತರ 1964ರಲ್ಲಿ ಭಾರತೀಯ ದೂರವಾಣಿ ಕಾರ್ಖಾನೆಗೆ ಸೇರಿ 2001ರಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ ಆಗಿ ಸ್ವಯಂ ನಿವೃತ್ತಿ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಾಹಿತ್ಯ ಶಿಬಿರ ಮತ್ತು ಹಂಪಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ ನಡೆದ 'ಸಮಾಜ ವಿಜ್ಞಾನಗಳ ಹವ್ಯಾಸಿ ಸಂಶೋಧಕರ ಕಮ್ಮಟದಲ್ಲಿ ಭಾಗವಹಿಸಿರುತ್ತಾರೆ. ಕರ್ನಾಟಕ ಇತಿಹಾಸ ಅಕಾಡೆಮಿಯಲ್ಲಿ 8 ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ. 'ಬೆಂಗಳೂರಿನಲ್ಲಿ ಮಹಾತ್ಮ ಗಾಂಧಿ', 'ಮಹಾತ್ಮ ಗಾಂಧಿ ಮತ್ತು ಅಸ್ಪೃಶ್ಯತೆ', 'ಆಧುನಿಕ ಬೆಂಗಳೂರು', 'ಮಹಾತ್ಮರ ಹೆಜ್ಜೆ ಗುರುತು' ಇನ್ನಿತರ 15ಕ್ಕೂ ಮಿಕ್ಕ ಕೃತಿಗಳನ್ನು ಬರೆದಿದ್ದು, ಪ್ರಕಟಗೊಂಡಿವೆ. 2017ರಲ್ಲಿ ಸಾಗರದಾಚೆಯ 'ದುಬೈ'ನಲ್ಲಿನ ಇಂಡಿಯನ್ ಕನ್ಸುಲೇಂಟ್ ಸಭಾಂಗಣದಲ್ಲಿ ಗಾಂಧಿಯವರ ಪ್ರತಿಮೆ ಅನಾವರಣ ಮಾಡಿದ್ದು ಮತ್ತು ಅದೇ ಸಮಯದಲ್ಲಿ ವೇದಿಕೆಯ ಪಕ್ಕದಲ್ಲಿ 'ಧ್ಯಾನಸ್ಥ ಗಾಂಧೀಜಿ' ರೀತಿಯಲ್ಲಿ ಕುಳಿತು ಎಲ್ಲರ ಮೆಚ್ಚುಗೆ ಪಡೆದಿದ್ದಾರೆ.

ಮಿಥಿಕ್ ಸೊಸೈಟಿ, ವೆಂಕಟಪ್ಪ ಚಿತ್ರಶಾಲೆ, ಸಂಸ ಬಯಲು ರಂಗ ಮಂದಿರ, ಕುವೆಂಪು ಕಲಾಕ್ಷೇತ್ರ, ಗೋಖಲೆ ಸಾರ್ವಜನಿಕ ಸಂಸ್ಥೆ ಇನ್ನಿತರ ಅನೇಕ ಪ್ರತಿಷ್ಠಿತ ಸಂಘ ಸಂಸ್ಥೆಗಳಲ್ಲಿ ಉಪನ್ಯಾಸ ನೀಡಿರುತ್ತಾರೆ ಇವರ 150ಕ್ಕೂ ಹೆಚ್ಚು ಸಂಶೋಧನೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಇತಿಹಾಸ ದರ್ಶನ, ಪ್ರಜಾವಾಣಿ, ಸುಧಾ, ವಿಶ್ವ ಪರ್ಯಟನೆ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಇವರಿಗೆ ದೆಹಲಿಯಲ್ಲಿ ನಡೆದ 18ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ರಾಜ್ಯಪಾಲರಿಂದ ಸನ್ಮಾನ, 'ಉದಯಭಾನು ಸುವರ್ಣ ಸಾಹಿತ್ಯ' ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಕೇಂದ್ರ, ಅರಸೀಕೆರೆಯ ಕಸ್ತೂರಿ ಬಾ ಗಾಂಧಿ ಸೇವಾ ಪ್ರಶಸ್ತಿ ಹಾಗೂ ಇನ್ನಿತರ ಗೌರವ ಸನ್ಮಾನಗಳಿಗೆ ಭಾಜನರಾಗಿತ್ತಾರೆ.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ, ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತಕ್ಕೆ ಮರಳಿ ಬಂದು ಅದೇ ವರ್ಷ ಮರಳಿ ಆಫ್ರಿಕಾಗೆ ತೆರಳಿದರು	1896
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	1903

ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ 1904

ಫೀನಿಕ್ಸ್ ಆಶ್ರಮ ಸ್ಥಾಪನೆ 1904

ಸೆಪ್ಟಂಬರ್ ವೀರಾಗಾಂನಲ್ಲಿ ಸಮುದ್ರ
ಪ್ರಯಾಣಿಕರ ಶೋಷಣೆಯ ವಿರುದ್ಧ
ಸತ್ಯಾಗ್ರಹ ಮಾಡುವ ಬೆದರಿಕೆ 1905

ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ
ಮೇಲೆ ಪ್ರಯೋಗಿಸಲಾಗುವ "ಏಸಿಯಾಟಿಕ್
ಆರ್ಡಿನೆನ್ಸ್ ವಿರುದ್ಧ ಚಳುವಳಿ 1906

ಬ್ರಹ್ಮಚರ್ಯ ವ್ರತ ಸ್ವೀಕಾರ 1906

ಇಂಗ್ಲೆಂಡಿಗೆ ಪ್ರಯಾಣ 1906

ಜೂನ್, ಸತ್ಯಾಗ್ರಹ ಏಷಿಯನ್ನರ ಬಲತ್ಕಾರದ
ನೋಂದಾವಣೆ (ಕರಾಳ ಕಾನೂನು) ವಿರುದ್ಧ
ಸತ್ಯಾಗ್ರಹ 1907

ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ
ಜೋಹನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ 1908

ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ
ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ
ಹೋರಾಟ ಪರಿಶೀಲನೆ 1909

ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್
ಫಾರ್ಮ್ ಸ್ಥಾಪನೆ 1910

ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ 1913

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ 1914

ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ
ಆಶ್ರಮ ಸ್ಥಾಪನೆ 1915

ಸಬರಮತಿ ಆಶ್ರಮ ಸ್ಥಾಪನೆ 1917

ಫೆಬ್ರವರಿ ಅಹಮದಾಬಾದ್ ಮಿಲ್ ಕೂಲಿಗಾರರ
ಪರ ಹೋರಾಟ, ಮೂರು ದಿನ ಉಪವಾಸ
ಸತ್ಯಾಗ್ರಹ, ಭಾರತದಲ್ಲಿ ಇದೇ ಮೊದಲ ಉಪವಾಸ

ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ ವಿರೋಧಿಸಿ ಏಪ್ರಿಲ್ 13-14ರಂದು ಉಪವಾಸ	1919
ಯಂಗ್ ಇಂಡಿಯಾ ಮತ್ತು ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ	1920
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು ತುಂಡು ಉಡುಗೆ ಪ್ರಚಾರ ಆರಂಭ	1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ ಉಪವಾಸ, ಯಂಗ್ ಇಂಡಿಯಾ ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ	1922
ಫೆಬ್ರವರಿ ಯರವಾಡಾ ಜೈಲಿನಿಂದ ಬಿಡುಗಡೆ	1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ	1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ	1924
ಚರಖಾ ಸಂಘದ ಸ್ಥಾಪನೆ	1925
ಬಾರ್ದೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ	1928
ಮೂರನೇ ಅಖಿಲ ಭಾರತ ಸತ್ಯಾಗ್ರಹ ಜನವರಿ 26 ರಾಷ್ಟ್ರದಿನವೆಂದು ಸೂಚನೆ ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು ವಿಫಲ	1931
ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು ಏರ್ಪಡಿಸುವ ಬ್ರಿಟಿಷ್ ಯೋಜನೆಗಳನ್ನು ವಿರೋಧಿಸಿ ಉಪವಾಸ ಸತ್ಯಾಗ್ರಹ ಹರಿಜನ ವಾರ ಪತ್ರಿಕೆ ಆರಂಭ	

ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ	
ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943
ಫೆ. 22 ಕಸ್ತೂರಬಾ ಮರಣ, 23ರಂದು	
ಅಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್	
ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಸಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ	
ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ	
ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಬಲಿ	30-1-1948
ರಾಜ್‌ಘಾಟಲ್ಲಿ ದಹನ	31-1-1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	22–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00

27.	ಗಾಂಧೀ ಮತ್ತು ಕರ್ನಾಟಕ	200–00
28.	ಸತ್ಯ	38–00
29.	ವಿದ್ಯಾರ್ಥಿಗಳಿಗಾಗಿ	30–00
30.	ಸರ್ವೋದಯ	30–00
31.	ಖಾದಿ ಗ್ರಾಮೋದ್ಯೋಗ	58–00
32.	ನನ್ನ ಬಾಲ್ಯದ ನೆನಪುಗಳು	52–00
33.	ಗ್ರಾಮರಾಜ್ಯ ಆಡಳಿತ	5–00
34.	ನನ್ನ ಕನಸಿನ ಸ್ವರಾಜ್ಯ	42–00
35.	ಹಾಸ್ಯ ಮತ್ತು ಗಾಂಧೀ	44–00
36.	ನನ್ನ ಆದರ್ಶಗ್ರಾಮ	5–00
37.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48–00
38.	ಸತ್ಯಾಗ್ರಹಿ	40–00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
40.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
42.	ಸತ್ಯಾಗ್ರಹ	5–00
43.	ಹಿಂದ್ ಸ್ವರಾಜ್	5–00
44.	ಆರೋಗ್ಯ	5–00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
46.	ಬಹುರೂಪಿ ಗಾಂಧಿ	35–00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
48.	ಕೃತಯುಗಿ ವಿನೋಬಾ ಭಾವೆ	15–00
49.	ಮೋಹನ ತರಂಗ	40–00
50.	ನಮ್ಮ ಗಾಂಧಿ ತಾತ	22–00
51.	ಗೀತಾ ಪ್ರವಚನ	80–00
52.	ಜೆ.ಪಿ. ಜೀವನ ಹಾದಿ	45–00

53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00
55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
57.	ಮಹದೇವ ದೇಸಾಯಿ	63.00
58.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
60.	ಗಾಂಧೀ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58
67.	Nayi Talim	58.00
68.	Temple & Mosque	10–00
69.	Rastrapita Mahatma Gandhi	25–00
70.	Swarajya of My Dreams	5–00
71.	Gandhi My Grand Father	5–00
72.	Grand Pa Gandhi	5–00
73.	Relevance of Gandhi	20–00
74.	Vinoba Sage of the Age	20.00
75.	Kasturba	33.00
76.	Mahatma Gandhi and his Foreign Associates	87

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08–05–1915
● ಬೆಳಗಾವಿ	ದಿ. 27–04–1916 ರಿಂದ ದಿ. 01–05–1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05–05–1918 ರಿಂದ ದಿ. 06–05–1918 ರವರೆಗೆ
● ಕಾಸರಗೋಡು	ದಿ. 19–08–1920
● ಮಂಗಳೂರು	ದಿ. 20–08–1920
● ಬೆಂಗಳೂರು	ದಿ. 21–08–1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08–11–1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09–11–1920
● ಧಾರವಾಡ	ದಿ. 10–11–1920
● ಹುಬ್ಬಳ್ಳಿ, ಗದಗ	ದಿ. 11–11–1920
● ಸಾಂಗಲಿ	ದಿ. 12–11–1920
● ಬಾಗಲಕೋಟೆ	ದಿ. 27–05–1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28–05–1921
● ಬಳ್ಳಾರಿ	ದಿ. 30–09–1921
● ಬೆಳಗಾವಿ	ದಿ. 21–12–1924 ರಿಂದ ದಿ. 30–12–1924 ರವರೆಗೆ
● ಗುಲ್ಬರ್ಗಾ	ದಿ. 22–02–1927 ರಿಂದ ದಿ. 23–02–1927 ರವರೆಗೆ
● ನಿಪ್ಪಾಣಿ	ದಿ. 27–03–1927 ರಿಂದ ದಿ. 31–03–1927 ರವರೆಗೆ

● ಬೆಳಗಾವಿ	ದಿ. 01–04–1927
	ದಿ. 18–04–1027 ರಿಂದ
	ದಿ. 19–04–1927ರವರೆಗೆ
● ಬೆಂಗಳೂರು	ದಿ. 06–06–1927 ರಿಂದ
	ದಿ. 13–07–1927 ರವರೆಗೆ
● ತುಮಕೂರು	ದಿ. 14–07–1927
● ತುಮಕೂರು, ಮಧುಗಿರಿ	ದಿ. 15–07–1927
● ತುಮಕೂರು	ದಿ. 16–07–1927
● ಬೆಂಗಳೂರು	ದಿ. 17–07–1927
● ಬೆಂಗಳೂರು	ದಿ. 18–07–1927
● ಮೈಸೂರು	ದಿ.19–07–1927 ರಿಂದ
	ದಿ. 21–07–1927 ರವರೆಗೆ
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21–07–1927
● ಮೈಸೂರು	ದಿ. 23–07–1927
● ಬೆಂಗಳೂರು	ದಿ. 24–07–1927 ರಿಂದ
	ದಿ. 30–07–1927 ರವರೆಗೆ
● ಕ್ಲೊಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ)	ದಿ. 31–07–1927
● ಬೆಂಗಳೂರು	ದಿ. 01–08–1927
● ಅರಸೀಕರೆ, ಹಾಸನ	ದಿ. 02–08–1927
● ಹಾಸನ	ದಿ. 03–08–1927
● ಹಾಸನ, ಹೊಳೆನರಸೀಪುರ	ದಿ. 04–08–1927
● ಬೆಂಗಳೂರು	ದಿ. 05–08–1927 ರಿಂದ
	ದಿ. 11–08–1927 ರವರೆಗೆ
● ದಾವಣಗೆರೆ	ದಿ. 12–08–1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13–08–1927

● ಶಿವಮೊಗ್ಗ	ದಿ. 14–08–1927 ರಿಂದ ದಿ. 15–08–1927 ರವರೆಗೆ
● ಆಯ್ಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16–08–1927
● ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17–08–1927
● ಭದ್ರಾವತಿ, ತರೀಕೆರೆ ಬೀರೂರು, ಕಡೂರು	ದಿ. 18–08–1927
● ಚಿಕ್ಕಮಗಳೂರು	ದಿ. 19–08–1927
● ಬೇಲೂರು, ಹಳೇಬೀಡು ಅರಸೀಕೆರೆ	ದಿ. 20–08–1927
● ತಿಪಟೂರು	ದಿ. 21–08–1927
● ಬೆಂಗಳೂರು	ದಿ. 22–08–1927
● ಬೆಂಗಳೂರು	ದಿ. 23–08–1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24–08–1927
● ಬೆಂಗಳೂರು	ದಿ. 25–08–1927 ರಿಂದ ದಿ. 30–08–1927 ರವರೆಗೆ
● ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04–01–1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05–01–1934
● ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06–01–1934

- ಬೆಂಗಳೂರು — ದಿ. 07-01-1934 ರಿಂದ ದಿ. 09-01-1934 ರವರೆಗೆ
- ಪೊನ್ನಂಪೇಟೆ, ಹುದಿಕೇರಿ — ದಿ. 22-02-1934
- ವಿರಾಜಪೇಟೆ, ಬೆಳ್ಳೂರು ಸೋಮವಾರ ಪೇಟೆ ಗುಂಡುಕಟ್ಟೆ — ದಿ. 23-02-1934
- ಮಡಿಕೇರಿ, ಸಂಪಾಜೆ, ಸುಳ್ಯ ಪುತ್ತೂರು, ಉಪ್ಪಿನಂಗಡಿ ವಿಠಲಗಬ್ಬ, ಕಲ್ಲಡ್ಕ, ಪಾಣೆ ಮಂಗಳೂರು, ಬಂಟ್ವಾಳ ಮಂಗಳೂರು — ದಿ. 24-02-1934
- ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ — ದಿ. 25-02-1934
- ಕುಂದಾಪುರ — ದಿ. 26-02-1934
- ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ — ದಿ. 27-02-1934
- ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ — ದಿ. 28-02-1934
- ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು — ದಿ. 01-03-1934
- ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು — ದಿ. 02-03-1934

- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ
- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ದಿ. 04-03-1934
  ಹಿರೇಉಳ್ಳಗೇರಿ, ಬೈಲಹೊಂಗಲ
  ಉಪ್ಪಿನ, ಬೆಟಗೇರಿ, ಸೌಂದತ್ತಿ
  ಸಂಪಗಾಂವ್, ಹೊಸೂರು, ಬೆಳಗಾವಿ
- ಬೆಳಗಾವಿ ದಿ. 05-03-1934
- ಬೆಳಗಾವಿ ದಿ. 06-03-1934
- ಬೆಳಗಾವಿ, ಯಮಕನಮರಡಿ, ವಂಟಮರಿ ದಿ. 07-03-1934
  ಹುಕ್ಕೇರಿ, ಗೋಕಾಕ, ಸಂಕೇಶ್ವರ
  ನವಲೀಹಾಳ, ಚಿಕ್ಕೋಡಿ, ಅಂಕಲಿ
- ಶೆಡಬಾಳ, ಬನಹಟ್ಟಿ, ಅಥಣಿ ದಿ. 08-03-1934
  ಬಿಜಾಪುರ (ವಿಜಯಪುರ),
  ತಿಕೋಟ, ತೊರವಿ ಇಳಕಲ್
- ನಂದಿ ಬೆಟ್ಟ 10-05-1936 ರಿಂದ
  30-05-1936 ರವರೆಗೆ
- ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, 31-05-1936
  ಚಿಂತಾಮಣಿ ಕೋಲಾರ,
  ಬಂಗಾರ ಪೇಟೆ, ಕೆ. ಜಿ. ಎಫ್
- ಬೆಂಗಳೂರು 01-06-1936 ರಿಂದ
  12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ 16-04-1937 ರಿಂದ
  21-04-1937ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು

18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ಈ ಕಿರು ಪುಸ್ತಕ ಅವರ ಅಧ್ಯಯನಶೀಲತೆಗೆ ಒಂದು ಕಿರುಗನ್ನಡಿ. ಗಾಂಧಿ ಅವರ ಜೀವನ, ಅವರ ವಿಚಾರಧಾರೆ, ನುಡಿದಂತೆ ನಡೆಯುತ್ತಿದ್ದ ಅವರ ನಿಷ್ಠೆ, ದೇಶದ ಹಾಗೂ ಬಡವರ ಬಗ್ಗೆ ಅವರಿಗಿದ್ದ ಕಳಕಳಿ, ಅವರ ಧಾರ್ಮಿಕ ಕಲ್ಪನೆಗಳನ್ನು ಈ ಕಿರು ಪುಸ್ತಕ ಎತ್ತಿ ಹೇಳುತ್ತದೆ.

ಡಾ. ಸೂರ್ಯನಾಥ ಕಾಮತ್

ನಂದಿ ಗಿರಿಧಾಮದ ಅವರ ಭೇಟಿ ಅವಿಸ್ಮರಣೀಯ. ಶ್ರೀ ವೇಮಗಲ್ ಸೋಮಶೇಖರ್ ಅವರು ಅವುಗಳನ್ನೆಲ್ಲಾ ಕೂಲಂಕುಷವಾಗಿ ಅಧ್ಯಯನ ಮಾಡಿ ಮನೋಜ್ಞವಾಗಿ ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ಇದು ಗಾಂಧಿ ಸಾಹಿತ್ಯಕ್ಕೆ ಅವರ ಅಮೂಲ್ಯ ಕೊಡುಗೆಯಾಗಿದೆ.

ಡಾ. ಹೊ. ಶ್ರೀನಿವಾಸಯ್ಯ

1927 ರಿಂದ 1936ರವರೆಗೆ ನಡೆದಂಥ ಪ್ರಮುಖ ಘಟನೆಗಳು ಮತ್ತು ಮೈಸೂರು ಸಂಸ್ಥಾನಕ್ಕೆ ಸೇರಿದ್ದ ನಂದಿ ಗಿರಿಧಾಮದಲ್ಲಿ ಗಾಂಧಿ ಅವರ ವಿಶ್ರಾಂತ ದಿನಗಳಲ್ಲಿ, ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ದಿವಾನರು ಸ್ಪಂದಿಸಿದ ರೀತಿಯನ್ನು ಈ ಕೃತಿ ಅನಾವರಣ ಗೊಳಿಸುತ್ತದೆ. ಕರ್ನಾಟಕದಲ್ಲಿ ಸ್ವಾತಂತ್ರ ಪೂರ್ವದ ಹೋರಾಟಗಳಲ್ಲಿದ್ದ ಪ್ರಮುಖ ನಾಯಕರು ಮತ್ತು ಅವರೊಡನೆ, ಅವರ ಒಡನಾಟದ ಅನೇಕ ಘಟನೆಗಳು ಇಲ್ಲಿ ಸಹಜವಾಗಿ ದಾಖಲಾಗಿವೆ.

ಡಾ. ವೂಡೇ ಪಿ. ಕೃಷ್ಣ

ದೈಹಿಕ, ಮಾನಸಿಕ ವಿಶ್ರಾಂತಿಗೆಂದು ಬಂದಿದ್ದ, ಗಾಂಧಿ ಅವರಿಗೆ ಪ್ರಜಾ ಜನರು ದಣಿವಾರಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರೆ? ಪಥ್ಯ, ನಿದ್ದೆ, ಉಲ್ಲಾಸಗಳಿಗೆ ಮಹಾತ್ಮರಿಗೆ ಸಿಕ್ಕ ಅವಧಿ, ದಿನಚರಿಯಂತೆ ದೈನಂದಿನ ಕೆಲಸಗಳ ನಿರ್ವಹಣೆಗೆ ಸಹಕರಿಸಿದವರ ಎಲ್ಲಾ ಮಾಹಿತಿಗಳು ಇದರಲ್ಲಿ ದೊರಕುತ್ತವೆ. ವೇಮಗಲ್ ಅವರು ಮಾಹಿತಿಯ ಅನ್ವೇಷಣೆ ಮತ್ತು ಸಂಬಂಧಪಟ್ಟ ವಾರಸುದಾರರ ಸಂಪರ್ಕದಿಂದ ನಿಖರವಾದ, ಆಧಾರಪೂರ್ವಕವಾದ ಅಂಶಗಳನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ.

ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

978-81-942226-5-1